# ಸಮಾಜ ವಿಜ್ಞಾನ

## ಭಾಗ - 2

## ತರಗತಿ - VI

**Social Science**
**Part - 2**
**Standard - VI**

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ
2025

## ರಾಷ್ಟ್ರಗೀತೆ

ಜನಗಣಮನ ಅಧಿನಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ!

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆ ಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನನ್ನ ದೇಶ ಮತ್ತು ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ.ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

6

# ಸಮಾಜ ವಿಜ್ಞಾನ

*Prepared by*
**State Council of Educational Research and Training (SCERT)**
Poojappura, Thiruvananthapuram 695012, Kerala
Website : www.scertkerala.gov.in, e-mail : scertkerala@gmail.com
Typeset and design by : SCERT
First Edition - 2025
Printed at : KBPS, Kakkanad, Kochi
© Department of General Education, Government of Kerala

ಪ್ರೀತಿಯ ಗೆಳೆಯರೆ,

ಇದು ಆರನೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕದ ಎರಡನೇ ಭಾಗವಾಗಿದೆ. ಈ ಭಾಗದಲ್ಲಿ ಐದು ಅಧ್ಯಾಯಗಳಿವೆ. 'ದಕ್ಷಿಣ ಭಾರತದ ಚರಿತ್ರೆಯ ಕಡೆಗೆ' ಎಂಬ ಅಧ್ಯಾಯವು ದಕ್ಷಿಣ ಭಾರತದ ಸಾಮಾಜಿಕ ರಚನೆ ಮತ್ತು ಸಾಂಸ್ಕೃತಿಕ ಜೀವನವನ್ನು ವಿವರಿಸುತ್ತದೆ. ನಂತರ, ಈ ಪಾಠವು ಪ್ರಾಚೀನ ಕೇರಳದಲ್ಲಿ ಅಸ್ತಿತ್ವದಲ್ಲಿದ್ದ ಆಡಳಿತ ವ್ಯವಸ್ಥೆಗಳ ಬಗ್ಗೆಯೂ ಚರ್ಚಿಸುತ್ತದೆ.

'ಸಂವಿಧಾನಕ್ಕೊಂದು ಮುನ್ನುಡಿ' ಎಂಬ ಅಧ್ಯಾಯವು ಸಂವಿಧಾನದ ಪರಿಕಲ್ಪನೆಯ ಹುಟ್ಟು ಮತ್ತು ವಿಕಾಸವನ್ನು ವಿವರಿಸುತ್ತದೆ. ನಮ್ಮ ಸಂವಿಧಾನದ ಪ್ರಸ್ತಾವನೆಯನ್ನೂ ಸಹ ಇಲ್ಲಿ ಚರ್ಚಿಸಲಾಗಿದೆ. 'ಸಾಗರಗಳ ಮೂಲಕ' ಎಂಬ ಅಧ್ಯಾಯವು ಸಾಗರಗಳ ಬಗ್ಗೆ ತಿಳಿಯಲು ಮತ್ತು ಅವುಗಳ ವಿಶೇಷತೆಗಳನ್ನು ಪರಿಚಯಿಸಲು ಸಹಾಯ ಮಾಡುತ್ತದೆ. 'ಸೇರಿಸೋಣ... ಕಾಯ್ದಿರಿಸೋಣ...' ಎಂಬ ಅಧ್ಯಾಯವು ಬ್ಯಾಂಕ್ ಎಂಬ ಹಣಕಾಸು ಸಂಸ್ಥೆ ಮತ್ತು ನಮ್ಮ ದೈನಂದಿನ ಜೀವನದಲ್ಲಿ ಅದರ ಪ್ರಾಮುಖ್ಯತೆಯ ಬಗ್ಗೆ ವಿವರಿಸುತ್ತದೆ. ಅಂತಿಮ ಅಧ್ಯಾಯವಾದ 'ಜಪಾನ್: ಚರಿತ್ರೆ ಮತ್ತು ವರ್ತಮಾನ'ವು ಜಪಾನಿನ ಇತಿಹಾಸ ಮತ್ತು ಸಮಕಾಲೀನ ಜಾಗತಿಕ ಆರ್ಥಿಕತೆಯಲ್ಲಿ ಅದರ ಸ್ಥಾನವನ್ನು ವಿವರವಾಗಿ ಚರ್ಚಿಸುತ್ತದೆ.

ಕೇರಳ ಪಠ್ಯಕ್ರಮ ಚೌಕಟ್ಟು 2023 ಸೂಚಿಸಿರುವ ಸಮಾಜ ವಿಜ್ಞಾನದ ಸಮೀಪನಗಳ ಆಧಾರದಲ್ಲಿ ಸಿದ್ಧಪಡಿಸಲಾದ ಈ ಪಠ್ಯಪುಸ್ತಕವು ಸಾಮಾಜಿಕ ವಿದ್ಯಮಾನಗಳನ್ನು ವಿಶ್ಲೇಷಿಸಲು ಸಹಾಯಕವಾಗಲಿದೆ ಎಂದು ನಾನು ನಂಬುತ್ತೇನೆ. ಇದಲ್ಲದೆ, ಮಾನವಕುಲದ ವಿವಿಧ ಕ್ಷೇತ್ರಗಳ ಬೆಳವಣಿಗೆ ಮತ್ತು ವಿಕಾಸವನ್ನು ಗುರುತಿಸಲು ಮತ್ತು ಆ ಮೂಲಕ ಜ್ಞಾನ ನಿರ್ಮಾಣಕ್ಕೂ ಈ ಪುಸ್ತಕವು ಖಂಡಿತವಾಗಿ ಸಹಕಾರಿಯಾಗುತ್ತದೆ.

**ಡಾ. ಜಯಪ್ರಕಾಶ್ ಆರ್. ಕೆ.**
ನಿರ್ದೇಶಕರು
ಎಸ್.ಸಿ.ಇ.ಆರ್.ಟಿ., ಕೇರಳ

# TEXT BOOK DEVELOPMENT TEAM

## Adviser

**Dr. K. N. Ganesh**
Chairaman, Kerala Council For
Historical Research

## Chairperson

**Dr. Abhilash Kumar K. G.**
Assistant Professor
Department of Political Science,
B.J.M. Govt. College Chavara, Kollam

## Experts

**Dr. Nandakumar B. V.**
Assistant Professor
Department of History,
Sree Narayana College, Kollam

**Dr. Antony Palakkal**
Professor & Head (Rtd.)
Department of Sociology,
Kerala University

## Members

**Dr. Anjana V. R. Chandran**
Research Officer, S.C.E.R.T. Kerala

**Anilkumar K.**
Headmaster
G.H.S. Kandala, Thiruvananthapuram

**Nisha T. S.**
U.P.S.T.
S.N.V.U.P.S., Maruthanpalli, Kollam

**Pushpangadan U.**
U.P.S.T. (Rtd.)
G.H.S.S. Anchal (West) Punaloor, Kollam

**Rajan P. P.**
Trainer,
B.R.C., Malappuram

**Beena S. Nair**
U.P.S.T. G.G.H.S.S.,
Malayankeezh, Thiruvananthapuram

**Priya S. S.**
P. D. Teacher, U.P.S.T.,
G.G.H.S.S. Cottonhill Thiruvananthapuram

**Ramdev P. R.**
H.S.S.T. Geography
G.H.S.S. Vellathuval, Idukki

**John K.**
U.P.S.T. (Rtd.)
Govt. V & H.S.S.,
Parasala, Thiruvananthapuram

## Artists

**Deepesh T.,** Kannur
**Albin Francis,** Thiruvananthapuram
**Harikrishnan G.,** Kottarakkara

## Kannada Version

**Subject Expert** :- **Narayana D.,** Headmaster, G.H.S. Udyawar, Kasaragod
**Language Expert** :- **Ramanna D.,** Headmaster (Rtd.), G.V.H.S.S. Delampady, Kasaragod
**Participants** :- **Ananda S.,** H.S.T., G.H.S.S. Pandi, Kasaragod
**Gopala P. K.,** U.P.S.T., G.H.S.S. Padre, Kasaragod
**Vijayakumar A.,** U.P.S.T., B.A.U.P.S., Katukukke, Kasaragod
**Nayanaprasad H. T.,** U.P.S.T. G.H.S., Kadambar, Kasaragod
**Melvin D Souza P.,** G.H.S.S. Bekur, Kasaragod

## Academic Co-ordinator

**Dr. Manju Sankar K.**
Research Officer, S.C.E.R.T., Kerala

**State Council of Educational Research and Training (SCERT)**
Vidyabhavan, Poojappura, Thiruvananthapuram 695012

# ಅನುಕ್ರಮಣಿಕೆ


| | | |
|---|---|---|
| 8 | ದಕ್ಷಿಣ ಭಾರತದ ಚರಿತ್ರೆಯ ಕಡೆಗೆ | 111 |
| 9 | ಸಂವಿಧಾನಕ್ಕೊಂದು ಮುನ್ನುಡಿ | 125 |
| 10 | ಸಾಗರಗಳ ಮೂಲಕ... | 137 |
| 11 | ಸೇರಿಸೋಣ... ಕಾಯ್ದಿರಿಸೋಣ... | 151 |
| 12 | ಜಪಾನ್: ಚರಿತ್ರೆ ಮತ್ತು ವರ್ತಮಾನ | 164 |


**ಈ ಪಠ್ಯಪುಸ್ತಕದಲ್ಲಿ ಅನುಕೂಲಕ್ಕಾಗಿ ಕೆಲವು ಚಿಹ್ನೆಗಳನ್ನು ಉಪಯೋಗಿಸಲಾಗಿದೆ.**

- ಹೆಚ್ಚುವರಿ ಓದು (ಮೌಲ್ಯ ಮಾಪನಕ್ಕೆ ಒಳಪಡಿಸಬೇಕೆಂದಿಲ್ಲ)
- ಚಟುವಟಿಕೆ
- ಚರ್ಚಿಸೋಣ
- ರೋಲ್‌ಪ್ಲೇ
- ಮುಂದುವರಿದ ಚಟುವಟಿಕೆಗಳು
- ನಿರ್ಮಿಸೋಣ
- ಐ.ಸಿ.ಟಿ
- ಬರೆಯೋಣ
- ಪ್ಲಕಾರ್ಡ್ ನಿರ್ಮಿಸೋಣ

# ಭಾರತದ ಸಂವಿಧಾನ

## ಪ್ರಸ್ತಾವನೆ

ಭಾರತದ ಜನಗಳಾದ ನಾವು ಭಾರತವನ್ನು ಒಂದು [1]**[ಸಾರ್ವಭೌಮ ಸಮಾಜವಾದೀ ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ]** ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ:

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ** ;
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ **ಸ್ವಾತಂತ್ರ್ಯ** ;
ಸ್ಥಾನಮಾನ ಹಾಗೂ ಅವಕಾಶ **ಸಮಾನತೆ ;**

ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು,[2][ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು] ಸುನಿಶ್ಚಿತಗೊಳಿಸಿ ಅವರಲ್ಲಿ **ಭ್ರಾತೃಭಾವನೆಯನ್ನು** ವೃದ್ಧಿಗೊಳಿಸಲು; ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;

**ನಮ್ಮ ಸಂವಿಧಾನ ಸಭೆಯಲ್ಲಿ** 1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ **ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.**

---

1. 1976ನೇ ಇಸವಿಯ ಭಾರತ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೇರೆಗೆ “ಸಂಪೂರ್ಣ ಪ್ರಭುತ್ವ ಸಂಪನ್ನ ಲೋಕತಂತ್ರಾತ್ಮಕ ಗಣರಾಜ್ಯವಾಗಿ" ಎಂಬ ಪದಗಳ ಬದಲಾಗಿ (3-1-1977 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. ಮೇಲ್ಕಂಡ ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ರಾಷ್ಟ್ರದ ಏಕತೆಯನ್ನೂ” ಎಂಬ ಪದಗಳ ಬದಲಾಗಿ (3-1-1977ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.



# 8

# ದಕ್ಷಿಣ ಭಾರತದ ಚರಿತ್ರೆಯ ಕಡೆಗೆ




ಕಾಟ್ಟಾಡಿಕುನ್ನ್ ಸರಕಾರಿ ಯು.ಪಿ. ಶಾಲೆಯ ವಿದ್ಯಾರ್ಥಿಗಳು 'ಚರಿತ್ರೆಯ ಅವಶೇಷಗಳನ್ನು ಅನ್ವೇಷಿಸಿ' ಎಂಬ ಶೈಕ್ಷಣಿಕ ಪ್ರವಾಸದ ಭಾಗವಾಗಿ ತ್ರಿಶೂರ್ ಜಿಲ್ಲೆಯ ಕಂಡಾಣಿಶ್ಶೇರಿ, ಮುನಿಯಾಟ್ಟುಕುನ್ನ್, ಕುಡಕ್ಕಲ್ಲುಪರಂಬ್ ಎಂಬ ಪ್ರದೇಶಗಳು ಹಾಗೂ ಶಕ್ತನ್ ತಂಬುರಾನ್ ವಸ್ತು ಸಂಗ್ರಹಾಲಯವನ್ನು ಸಂದರ್ಶಿಸಿದರು. ಪ್ರವಾಸದ ಭಾಗವಾಗಿ ಲಭಿಸಿದ ವಿವರಗಳನ್ನು ಸೇರಿಸಿ ರಿಚ್ಚು ತಯಾರಿಸಿದ ಪ್ರವಾಸ ಅನುಭವಗಳ ಭಾಗವನ್ನು ಓದಿ ತಿಳಿದುಕೊಳ್ಳೋಣ.

ಚರಿತ್ರೆಯ ಅವಶೇಷಗಳನ್ನು ಹುಡುಕಿ ಒಂದು ಪ್ರವಾಸ...

ರಿಚ್ಚು ಎಸ್.
ತರಗತಿ 6 ಬಿ
ಗವ. ಯು. ಪಿ. ಎಸ್. ಕಾಟ್ಟಾಡಿಕುನ್ನ್

ಸಮತಟ್ಟಾದ ಪ್ರದೇಶದಿಂದ ಬೆಟ್ಟದ ತುದಿಗೆ...

ಸಣ್ಣ ಪೊದೆಗಳು... ಕಡಿದಾದ ಏರಿಳಿತಗಳು ಹಾಗೂ ಕಲ್ಲು ಬಂಡೆಗಳು... ಇವುಗಳೆಲ್ಲವನ್ನು ದಾಟಿ ನಮ್ಮ ಪ್ರಯಾಣ ಸಾಗಿತ್ತು. ಈ ಪ್ರಯಾಣವು ನಮ್ಮನ್ನು ನಿಜವಾಗಿಯೂ ಅದ್ಭುತಗೊಳಿಸಿತು.

ಶಿಲೆಯಿಂದ ನಿರ್ಮಿಸಲ್ಪಟ್ಟ ಕೊಡೆ ಕಲ್ಲುಗಳು, ಟೊಪ್ಪಿಕಲ್ಲುಗಳು, ಮುನಿಯರಗಳು ಇತ್ಯಾದಿಗಳನ್ನು ವಿವಿಧ ಸ್ಥಳಗಳಲ್ಲಾಗಿ ನಾವು ನೋಡಿದೆವು. ಕೊಡೆಯಂತೆ ಇರುವ ಕೊಡೆಕಲ್ಲು, ಟೊಪ್ಪಿಯಂತೆ ಇರುವ ಟೊಪ್ಪಿಕಲ್ಲು, ಗುಹೆಯ ಹಾಗೆ ಇರುವ ಮುನಿಯರಗಳು...

ಇವುಗಳು ಹಲವು ಶತಮಾನಗಳ ಹಿಂದೆ ಜೀವಿಸಿದ್ದ ಮಾನವರು ನಿರ್ಮಿಸಿದವುಗಳಾಗಿವೆ. ಈ ಚರಿತ್ರೆಯ ಅವಶೇಷಗಳ ಕುರಿತು ಟೀಚರ್ ನಮಗೆ ವಿವರವಾಗಿ ಹೇಳಿಕೊಟ್ಟರು.

ಇವುಗಳ ಕುರಿತು ಹೆಚ್ಚು ತಿಳಿಯಲು ನಾವು ತ್ರಿಶೂರು ಪಟ್ಟಣದ ಶಕ್ತನ್ ತಂಬುರಾನ್ ವಸ್ತು ಸಂಗ್ರಹಾಲಯದ ಕಡೆಗೆ ಪ್ರಯಾಣಿಸಿದೆವು. ವಿವಿಧ ಸ್ಥಳಗಳಲ್ಲಾಗಿ ನಾವು ಕಂಡ ರೀತಿಯ ಶಿಲಾ ಸ್ಮಾರಕಗಳ ಸಂಗ್ರಹಗಳು, ಮಾದರಿಗಳು ಮತ್ತು ಅವುಗಳ ವಿವರಣೆಗಳನ್ನು ವಸ್ತು ಸಂಗ್ರಹಾಲಯದಲ್ಲಿ ಪ್ರದರ್ಶಿಸಲಾಗಿತ್ತು. ಈ ರೀತಿಯ ಶೀಲಾ ಸ್ಮಾರಕಗಳಿಂದ ಸಂಗ್ರಹಿಸಿದ ಕಬ್ಬಿಣದ ಆಯುಧಗಳು, ಉಪಕರಣಗಳು, ಪಾತ್ರೆಗಳು, ಆಭರಣಗಳು, ನಾಣ್ಯಗಳು ಎಲ್ಲವೂ ನಮ್ಮನ್ನು ವಿಸ್ಮಯಗೊಳಿಸಿದವು...

ನೀವು ಈ ರೀತಿಯ ಶೈಕ್ಷಣಿಕ ಪ್ರವಾಸ ಹೋಗಿರುವಿರಾ? ಅದರ ಅನುಭವಗಳನ್ನು ಬರೆದು ಮಂಡಿಸಿದ್ದೀರಾ?

ಚರಿತ್ರೆಯ ಯಾವೆಲ್ಲ ಅವಶೇಷಗಳ ಕುರಿತು ರಿಚ್ಚು ತನ್ನ ಪ್ರವಾಸ ಅನುಭವಗಳ ಮೂಲಕ ವಿವರಿಸಿದ್ದಾನೆ?

- ಕೊಡೆಕಲ್ಲು
- 
- 

ಈ ಚರಿತ್ರೆಯ ಅವಶೇಷಗಳ ಕುರಿತು ಹೆಚ್ಚಿನ ಅನ್ವೇಷಣೆ ನಡೆಸೋಣವೇ?

## ಮಹಾಶಿಲಾಯುಗ

ಕೊಡೆಕಲ್ಲು, ಟೊಪ್ಪಿಕಲ್ಲು ಮುನಿಯರಗಳು ಮುಂತಾದವುಗಳನ್ನು ಮಹಾಶಿಲಾ ಸ್ಮಾರಕಗಳು (Megalithic Monuments) ಎಂದು ಕರೆಯುತ್ತಾರೆ. ದೊಡ್ಡ ಶಿಲೆಗಳಿಂದಲೋ ಶಿಲಾಪದರುಗಳಿಂದಲೋ ನಿರ್ಮಿಸಿರುವುದರಿಂದ ಇವುಗಳನ್ನು ಮಹಾಶಿಲಾ ಸ್ಮಾರಕಗಳು ಎಂದು ಕರೆಯುತ್ತಾರೆ. ಈ ರೀತಿಯ ಶಿಲಾ ಸ್ಮಾರಕಗಳು ನಿರ್ಮಿಸಲ್ಪಟ್ಟ ಕಾಲಘಟ್ಟವನ್ನು 'ಮಹಾಶಿಲಾಯುಗ' (Megalithic Age) ಎಂದು ಕರೆಯುತ್ತಾರೆ.

ಮಹಾಶಿಲಾಯುಗದ ಪುರಾವೆಗಳು ದಕ್ಷಿಣ ಭಾರತದ ಹೆಚ್ಚಿನ ಭಾಗಗಳಲ್ಲಿ ಕಂಡುಬರುತ್ತವೆ. ಕೇರಳದ ಮರಯೂರ್, ಚೇರಮನಂಙಾಡ್, ಕುಪ್ಪಕೊಲ್ಲಿ, ಮಾಂಙಾಡ್, ತಮಿಳುನಾಡಿನ ಆದಿಚ್ಚನೆಲ್ಲೂರ್, ಕರ್ನಾಟಕದ ಬ್ರಹ್ಮಗಿರಿ, ಆಂಧ್ರಪ್ರದೇಶದ ನಾಗಾರ್ಜುನಕೊಂಡ ಮೊದಲಾದ ಪ್ರದೇಶಗಳು ದಕ್ಷಿಣ ಭಾರತದ ಪ್ರಧಾನ ಮಹಾಶಿಲಾಯುಗದ ಕೇಂದ್ರಗಳಾಗಿವೆ.

**ದಕ್ಷಿಣ ಭಾರತ**

ಭಾರತದ ದಕ್ಷಿಣ ರಾಜ್ಯಗಳಾದ ಕರ್ನಾಟಕ, ತಮಿಳುನಾಡು, ಕೇರಳ, ಆಂಧ್ರಪ್ರದೇಶ, ತೆಲಂಗಾಣ ಎಂಬಿವುಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಾದ ಪೋಂಡಿಚೇರಿ, ಲಕ್ಷದ್ವೀಪ ಎಂಬೀ ಪ್ರದೇಶಗಳು ಒಳಗೊಂಡಿವೆ.




ಚಿತ್ರ 8.1

ಮಹಾ ಶಿಲಾಸ್ಮಾರಕಗಳು ಪ್ರಾಚೀನಕಾಲದ ಶವಸಂಸ್ಕಾರ ರೀತಿಯೊಂದಿಗೆ ಸಂಬಂಧ ಹೊಂದಿರುತ್ತವೆ. ಮೃತ ಶರೀರಗಳ ಅವಶೇಷಗಳನ್ನು ಹೂಳಲು ಈ ರೀತಿಯ ಶಿಲಾಸ್ಮಾರಕಗಳನ್ನು ನಿರ್ಮಿಸಲಾಗಿದೆ. ಮಹಾಶಿಲಾ ಸ್ಮಾರಕಗಳಲ್ಲಿ ಕಬ್ಬಿಣದ ಆಯುಧಗಳು ಧಾರಾಳವಾಗಿ ಕಂಡುಬಂದುದರಿಂದ ಈ ಕಾಲಘಟ್ಟವನ್ನು 'ಕಬ್ಬಿಣ ಯುಗ' ಎಂದು ಕರೆಯುತ್ತಾರೆ. ಶರೀರ ಅವಶೇಷಗಳೊಂದಿಗೆ ಅವರು ಉಪಯೋಗಿಸಿದ ಆಭರಣಗಳು, ಆಯುಧಗಳು, ಉಪಕರಣಗಳು, ಪಾತ್ರೆಗಳು, ನಾಣ್ಯಗಳು ಇತ್ಯಾದಿಗಳು ಮಹಾಶಿಲಾಸ್ಮಾರಕಗಳಿಂದ ದೊರಕಿವೆ.

ದಕ್ಷಿಣ ಭಾರತದ ಮಹಾಶಿಲಾಸ್ಮಾರಕಗಳೊಂದಿಗೆ ಸಂಬಂಧಿಸಿ ನೀಡಿರುವ ವರ್ಕ್ ಶೀಟ್ ಪೂರ್ತಿಗೊಳಿಸಿರಿ.

| | |
|---|---|
| ಪ್ರಧಾನ ಮಹಾಶಿಲಾಸ್ಮಾರಕ ಕೇಂದ್ರಗಳು | • ಕೇರಳ – ಮರಯೂರ್<br>• ತಮಿಳುನಾಡು –<br>• ಆಂಧ್ರ ಪ್ರದೇಶ –<br>• ಕರ್ನಾಟಕ – |
| ದಕ್ಷಿಣ ಭಾರತದ ಪ್ರಧಾನ ಮಹಾಶಿಲಾಸ್ಮಾರಕಗಳು | • ಕೊಡೆಕ್ಕಲ್ಲು •<br>• • |
| ಶರೀರ ಅವಶೇಷಗಳೊಂದಿಗೆ ಹೂತಿಟ್ಟಿರುವ ವಸ್ತುಗಳು | • •<br>• • |

## ದಕ್ಷಿಣ ಭಾರತದ ಕಬ್ಬಿಣಯುಗ



ಚಿತ್ರ 8.2
ತಮಿಳುನಾಡಿನ ಆದಿಚ್ಚನೆಲ್ಲೂರ್‌ನಿಂದ ಕಂಡುಹಿಡಿದ ಕಬ್ಬಿಣದ ಆಯುಧಗಳು ಮತ್ತು ಉಪಕರಣಗಳು

ಕಬ್ಬಿಣಯುಗದಲ್ಲಿ ಉಪಯೋಗಿಸಿದ ವಿಭಿನ್ನ ಆಕೃತಿಯಲ್ಲಿಯೂ ಗಾತ್ರದಲ್ಲಿಯೂ ಇರುವ ಆಯುಧಗಳ ಮತ್ತು ಉಪಕರಣಗಳ ಚಿತ್ರವನ್ನು ನಿರೀಕ್ಷಿಸಿರಿ.

ಕಬ್ಬಿಣದಿಂದ ನಿರ್ಮಿಸಿದ ಕತ್ತಿ, ಖಡ್ಗ, ಕೊಯ್ಲು ಕತ್ತಿ, ಈಟಿ, ಮೂರು ಕಾಲಿನ ಪೀಠ, ದೀಪಗಳು ಮೊದಲಾದವುಗಳು ಇವುಗಳಲ್ಲಿ ಒಳಗೊಂಡಿವೆ. ಕಬ್ಬಿಣದ ಉಪಯೋಗವು ಮಹಾಶಿಲಾಯುಗದ ಕೃಷಿ ವಲಯದ ಅಭಿವೃದ್ಧಿಗೆ ಸಹಾಯ ಮಾಡಿದೆ.

## ದಕ್ಷಿಣ ಭಾರತದ ರಾಷ್ಟ್ರರೂಪೀಕರಣ




ಭೂಪಟ 8.1 ಪ್ರಾಚೀನ ತಮಿಳಗಂ

ಭೂಪಟ 8.1 ನಿರೀಕ್ಷಿಸಿರಿ. ಭೂಪಟದಲ್ಲಿ ಬಣ್ಣ ನೀಡಿರುವ ಪ್ರದೇಶಗಳು ಇಂದು ಯಾವ ಯಾವ ರಾಜ್ಯಗಳ ಭಾಗವಾಗಿವೆ ಎಂದು ಕಂಡುಕೊಳ್ಳಿರಿ.

- ಕರ್ನಾಟಕ
-
-
-

ಭೂಪಟದಲ್ಲಿ ಬಣ್ಣ ನೀಡಿರುವ ದಕ್ಷಿಣ ಭಾರತದ ಪ್ರದೇಶವನ್ನು ಪ್ರಾಚೀನ ಕಾಲದಲ್ಲಿ 'ತಮಿಳಗಂ' ಎಂಬ ಹೆಸರಿನಲ್ಲಿ ಕರೆಯಲಾಗುತ್ತಿತ್ತು. ಪಝುಂತಮಿಳು ಪಾಟ್ಟುಗಳು, ನಾಣ್ಯಗಳು, ಪ್ರವಾಸೀ ಟಿಪ್ಪಣಿಗಳು, ಬರವಣಿಗೆಗಳು ಮುಂತಾದವುಗಳು ಪ್ರಾಚೀನ ತಮಿಳಗಂನ ಕುರಿತು ಮಾಹಿತಿ ಲಭಿಸುವ ಪ್ರಧಾನ ಚರಿತ್ರೆಯ ಮೂಲಾಧಾರಗಳಾಗಿವೆ.ಇವುಗಳಲ್ಲಿ ಪಝುಂತಮಿಳು ಪಾಟ್ಟುಗಳ ಸಂಗ್ರಹವಾದ ಸಂಘ ಸಾಹಿತ್ಯ ಕೃತಿಗಳಿಂದ ಹೆಚ್ಚಿನ ಮಾಹಿತಿ ಲಭಿಸುತ್ತದೆ.

> **ಸಂಘಂಕೃತಿಗಳು**
>
> ಸಂಘಂಕೃತಿಗಳನ್ನು ಸಾಮಾನ್ಯವಾಗಿ ಅಗಂಪಾಟ್ಟುಗಳು ಮತ್ತು ಪುರಂಪಾಟ್ಟುಗಳು ಎಂದು ಎರಡಾಗಿ ವಿಂಗಡಿಸಲಾಗಿದೆ. ಅಗಂಪಾಟ್ಟುಗಳಲ್ಲಿ ಕುಟುಂಬ ಜೀವನ ಹಾಗೂ ಸಾಮಾಜಿಕ ಜೀವನವನ್ನು ಉಲ್ಲೇಖಿಸಲಾಗಿದೆ. ಪುರಂಪಾಟ್ಟುಗಳಲ್ಲಿ ಆರ್ಥಿಕ, ರಾಜಕೀಯ ಹಾಗೂ ಸೈನಿಕ ಜೀವನವನ್ನು ಉಲ್ಲೇಖಿಸಲಾಗಿದೆ.

## ಸಂಘ ಸಾಹಿತ್ಯ

"ಯಾದುಂ ಊರೆ ಯಾವರುಂ ಕೇಳಿರ್
ತೀದುಂ ನಂಡ್ರುಂ ಪಿರರ್ ತರ ವಾರಾ"

- ಪುರನಾನೂರ್

(ಎಲ್ಲವೂ ನಮ್ಮ ನಾಡೆ ಆಗಿದೆ. ಎಲ್ಲರೂ ನಮ್ಮ ಸಹೋದರರಾಗಿದ್ದಾರೆ. ಒಳ್ಳೆಯದೋ ಕೆಟ್ಟದೋ ಯಾವುದು ಕೂಡ ಇನ್ನೊಬ್ಬರಿಂದ ನಮಗೆ ಲಭಿಸುವುದಲ್ಲ)

ಮೇಲೆ ನೀಡಿರುವುದು ಸಂಘ ಸಾಹಿತ್ಯದ ಕೃತಿಯಾದ ಪುರನಾನೂರಿನ ಸಾಲುಗಳಾಗಿವೆ. ಸಂಘಗಳು ಮಧುರೆಯನ್ನು ಕೇಂದ್ರವಾಗಿ ಕಾರ್ಯಚರಿಸುತ್ತಿದ್ದ ತಮಿಳು ಕವಿಗಳ ಒಕ್ಕೂಟವಾಗಿದೆ. ಈ ಸಂಘಗಳು ಅಂದಿನ ಗಾಯಕರ ಹಾಡುಗಳನ್ನು ಸಂಗ್ರಹಿಸಿ ಬರೆದು ಸಂರಕ್ಷಿಸುತ್ತಿದ್ದರು. ಆದುದರಿಂದ ಈ ಹಾಡುಗಳನ್ನು 'ಸಂಘಂಕೃತಿಗಳು' ಎಂದೂ ಈ ಕಾಲಘಟ್ಟವನ್ನು ಸಂಘಕಾಲ ಎಂದು ಬಣ್ಣಿಸುತ್ತಾರೆ. ಪುರನಾನೂರಿನಂತೆ ಧಾರಾಳ ಸಾಹಿತ್ಯ ಕೃತಿಗಳನ್ನು ಸಂಘ ಕಾಲಘಟ್ಟದಲ್ಲಿ ರಚಿಸಲಾಯಿತು. ಅವುಗಳಲ್ಲಿ ಕೆಲವು ಪ್ರಧಾನ ಕೃತಿಗಳನ್ನು ಪರಿಚಯಿಸೋಣ.




ಸಂಘ ಸಾಹಿತ್ಯ ಕೃತಿಗಳ ಹೊರತಾಗಿ ತಿರುಕ್ಕುರಲ್, ಚಿಲಪ್ಪತಿಕಾರಂ, ಮಣಿಮೇಖಲೈ ಮುಂತಾದವುಗಳು ಪ್ರಾಚೀನ ತಮಿಳಗಂ ಕುರಿತು ಮಾಹಿತಿ ಲಭಿಸುವ ಇತರ ಸಾಹಿತ್ಯ ಕೃತಿಗಳಾಗಿವೆ.

### ತಿರುಕ್ಕುರಲ್

ತಿರುಕ್ಕುರಲ್ ತಮಿಳು ಸಾಹಿತ್ಯದ ಅಮರ ಕಾವ್ಯಗಳಲ್ಲಿ ಒಂದಾಗಿದೆ. ಈ ಗ್ರಂಥವನ್ನು ತಿರುವಳ್ಳುವರ್ ರಚಿಸಿದರು.

### ಚಿಲಪ್ಪದಿಕಾರಂ

ಕಣ್ಣಗಿಯ ಹಾಗು ಕೋವಾಲನ ಕಥೆಯನ್ನು ಹೇಳುವ ಚಿಲಪ್ಪದಿಕಾರವನ್ನು ಇಳಂಗೋ ಅಡಿಗಳ್ ರಚಿಸಿದರು.

### ಮಣಿಮೇಖಲ

ಮಣಿಮೇಖಲವು ಕೋವಲನ ಮತ್ತು ಮಾಧವಿಯ ಮಗಳಾದ ಮಣಿಮೇಖಲೆಯ ಕಥೆ ಹೇಳುವ ಕೃತಿಯಾಗಿದೆ. ಮಣಿಮೇಖಲೆಯನ್ನು ಚೀತ್ತಲೈ ಚಾತ್ತನಾರ್ ರಚಿಸಿದನು.

ಪ್ರಾಚೀನ ತಮಿಳಗಂನ ಕುರಿತು ಮಾಹಿತಿ ಲಭಿಸುವ ಪ್ರಧಾನ ಮೂಲಾಧಾರಗಳನ್ನು ಪಟ್ಟಿ ಮಾಡಿರಿ.

- ಸಂಘಂಕೃತಿಗಳು
- 
- 
- 

## ಸಂಘಕಾಲದ ಸಾಮಾಜಿಕ-ಆರ್ಥಿಕ ಜೀವನ

ಸಂಘಂ ಕೃತಿಗಳಲ್ಲಿರುವ ಪಝುಂತಮಿಳು ಹಾಡುಗಳಲ್ಲಿ ಪ್ರಾಚೀನ ತಮಿಳಗಂನ ಜನ ಜೀವನದ ಕುರಿತು ಪ್ರತಿಪಾದಿಸಲಾಗಿದೆ. ಈ ಹಾಡುಗಳಲ್ಲಿ ಸಾಮಾಜಿಕ ಜೀವನ, ಕೃಷಿ, ದನಗಳ ಮೇಯಿಸುವಿಕೆ, ಉಪ್ಪು ತಯಾರಿಕೆ ಮತ್ತು ಸಂಪನ್ಮೂಲಗಳ ವಿನಿಮಯವನ್ನು ಉಲ್ಲೇಖಿಸಲಾಗಿದೆ. ಸಂಘಕಾಲದ ಸಾಮಾಜಿಕ-ಆರ್ಥಿಕ ಜೀವನದ ವಿಶೇಷತೆಗಳು ಯಾವುವು ಎಂದು ನಾವು ಪರಿಶೀಲಿಸೋಣ.

**ಸಾಮಾಜಿಕ ಜೀವನ**

- ವೃತ್ತಿ ಆಧಾರಿತವಾದ ಸಾಮಾಜಿಕ ವಿಭಜನೆ ಅಸ್ತಿತ್ವದಲ್ಲಿತ್ತು.
- ಸಾಮಾಜಿಕ ತಾರತಮ್ಯ ಇರಲಿಲ್ಲ.
- ಸ್ತ್ರೀ ಪುರುಷ ಸಮಾನತೆ ಅಸ್ತಿತ್ವದಲ್ಲಿತ್ತು.

**ಆರ್ಥಿಕ ಜೀವನ**

- ಕೃಷಿಯು ಪ್ರಧಾನ ಜೀವನ ಮಾರ್ಗವಾಗಿತ್ತು. ಜಾನುವಾರುಗಳನ್ನು ಮೇಯಿಸುವುದು, ಮೀನುಗಾರಿಕೆ ಮತ್ತು ಬೇಟೆಯಾಡುವುದು ಇತರ ಜೀವನ ಮಾರ್ಗಗಳಾಗಿದ್ದವು.
- ವಿದೇಶಗಳೊಂದಿಗೆ ವ್ಯಾಪಾರ ಸಂಬಂಧವು ಅಸ್ತಿತ್ವದಲ್ಲಿತ್ತು.
- ಕರಿಮೆಣಸು ಮತ್ತು ಇತರ ಸುಗಂಧದ್ರವ್ಯಗಳನ್ನು ಪ್ರಧಾನವಾಗಿ ವಿದೇಶಿಯರು ಖರೀದಿಸುತ್ತಿದ್ದರು. ಅವರು ತಾಮ್ರ, ಬೆಳ್ಳಿ, ಚಿನ್ನ ಮೊದಲಾದವುಗಳನ್ನು ಇಲ್ಲಿಗೆ ತಂದಿದ್ದರು.

ಸಂಘ ಕಾಲದ ಸಾಮಾಜಿಕ ಜೀವನವನ್ನು ಸಮಕಾಲೀನ ಸಾಮಾಜಿಕ ಜೀವನದೊಂದಿಗೆ ಹೋಲಿಕೆ ಮಾಡಿ ಟಿಪ್ಪಣಿ ತಯಾರಿಸಿರಿ.

## ತಿಣಗಳು

ಭೂಪ್ರಕೃತಿಯನ್ನು ಆಧರಿಸಿ ಪ್ರಾಚೀನ ತಮಿಳಗಂನಲ್ಲಿ ಐದು ಭೂ ವಿಭಾಗಗಳು ಅಸ್ತಿತ್ವದಲ್ಲಿದ್ದವೆಂದು ಸಂಘಂಕೃತಿಗಳು ಉಲ್ಲೇಖಿಸುತ್ತವೆ. ಇವುಗಳನ್ನು 'ಐನ್ತಿಣಗಳು' ಎಂಬ ಹೆಸರಿನಲ್ಲಿ ಕರೆಯಲಾಗುತ್ತಿತ್ತು. ಪ್ರತಿಯೊಂದು ತಿಣಗಳಲ್ಲಿಯೂ ಜನರ ಜೀವನ ರೀತಿ ಹಾಗೂ ವೃತ್ತಿಯು ತಿಣಗಳ ಭೌಗೋಳಿಕ ವಿಶೇಷತೆಗಳಿಗನುಸಾರವಾಗಿ ಭಿನ್ನವಾಗಿತ್ತು.

| ತಿಣಗಳು | ಭೌಗೋಳಿಕ ವಿಶೇಷತೆಗಳು | ವೃತ್ತಿಜೀವನ ಮಾರ್ಗಗಳು |
|---|---|---|
| ಕುರಿಂಜಿ | ಕಾಡು, ಬೆಟ್ಟ | ಅರಣ್ಯ ಸಂಪನ್ಮೂಲಗಳ ಸಂಗ್ರಹ, ಬೇಟೆಯಾಡುವುದು |
| ಮುಲ್ಲೈ | ಹುಲ್ಲುಗಾವಲು, ಕುರುಚಲು ಕಾಡುಗಳು | ಜಾನುವಾರು ಮೇಯಿಸುವುದು |
| ಪಾಲೈ | ಒಣಪ್ರದೇಶ | ದರೋಡೆ ಹಾಗೂ ಕಳ್ಳತನ |
| ಮರುತಂ | ಬಯಲು ಪ್ರದೇಶ | ಕೃಷಿ |
| ನೈತಲ್ | ತೀರ ಪ್ರದೇಶ | ಮೀನು ಹಿಡಿಯುವುದು, ಉಪ್ಪು ತಯಾರಿಸುವುದು |

ಪ್ರತಿಯೊಂದು ತಿಣಗಳಲ್ಲಿಯೂ ಉತ್ಪಾದಿಸಿದ ಸಂಪನ್ಮೂಲಗಳನ್ನು ಇತರ ತಿಣಗಳೊಂದಿಗೆ ವಿನಿಮಯ ಮಾಡಲಾಗುತ್ತಿತ್ತು. ಈ ರೀತಿಯ ಸಂಪನ್ಮೂಲಗಳ ವಿನಿಮಯವು ವ್ಯಾಪಾರ ಕೇಂದ್ರಗಳ ರೂಪೀಕರಣಕ್ಕೆ ಕಾರಣವಾಯಿತು. ಈ ವ್ಯಾಪಾರ ಕೇಂದ್ರಗಳನ್ನು ಅಂಗಾಡಿಗಳು ಎಂದು ಕರೆಯುತ್ತಾರೆ.

**ಅಂಗಾಡಿಗಳು**

ಅಲ್ಲಾವಣಂ ಮತ್ತು ನಾಳಂಗಡಿ ಪ್ರಾಚೀನ ತಮಿಳಗಂನ ಸಂತೆಗಳಾಗಿದ್ದವು.

ಅಲ್ಲಾವಣಂ ರಾತ್ರೆಯ ಸಂತೆಯೂ ನಾಳಂಗಡಿಗಳು ಹಗಲಿನ ಸಂತೆಯೂ ಆಗಿತ್ತು. ತಿಣಗಳ ದೈನಂದಿನ ಅಗತ್ಯಗಳಿಗೆ ಬೇಕಾದ ವಸ್ತುಗಳು ಇಲ್ಲಿ ವಿನಿಮಯವಾಗಿದ್ದವು.

ತಿಣಗಳ ಹೆಸರಿಗೆ ಅನುಸಾರವಾಗಿ ಐದು ಗುಂಪುಗಳನ್ನು ಮಾಡಿ ಅವುಗಳ ಭೌಗೋಳಿಕ ವಿಶೇಷತೆಗಳು, ವೃತ್ತಿ ಇತ್ಯಾದಿಗಳನ್ನು ಸ್ಕಿಟ್‌ನ ಮೂಲಕ ಪ್ರಸ್ತುತಪಡಿಸಿರಿ.

## ರಾಜಕೀಯ ವ್ಯವಸ್ಥೆ

ಭೂಪಟ 8.1 ನಿರೀಕ್ಷಿಸಿರಿ. ಪ್ರಾಚೀನ ತಮಿಳಗಂನಲ್ಲಿ ಯಾರೆಲ್ಲ ಆಡಳಿತ ನಡೆಸಿದರೆಂದು ಭೂಪಟದಿಂದ ಕಂಡುಕೊಳ್ಳಿರಿ.

- ಚೇರರು
- 
- 

ಪ್ರಾಚೀನ ತಮಿಳಗಂನ್ನು ಆಳಿದ ಚೇರರು, ಚೋಳರು ಮತ್ತು ಪಾಂಡ್ಯ ಆಡಳಿತಗಾರರನ್ನು ಒಟ್ಟಾಗಿ 'ಮೂವೇಂತರ್' ಅಥವಾ 'ಮೂವರಶರ್' ಎಂದು ಕರೆಯುತ್ತಾರೆ. ತಮಿಳಗಂನಲ್ಲಿ ಅನೇಕ ಆಡಳಿತ ವಂಶವು ಅಸ್ತಿತ್ವದಲ್ಲಿದ್ದರೂ ಅಧಿಕಾರ ಸ್ಥಾನವು ಮೂವೇಂತರರಿಗೆ ಆಗಿತ್ತು. ಈ ರಾಜರನ್ನು 'ಕೋ', 'ಕೋನ್', 'ಕಟುಂಕೋ' ಎಂದು ಕರೆಯುತ್ತಿದ್ದರು.

ಭೂಪಟ 8.1 ನಿರೀಕ್ಷಿಸಿ ಮೂವೇಂತರರು ಮತ್ತು ಅವರ ರಾಜಧಾನಿಗಳನ್ನು ಪಟ್ಟಿ ಮಾಡಿರಿ.

| ಮೂವೇಂತರ್ | ರಾಜಧಾನಿ |
|---|---|
| • | • |
| • | • |
| • | • |

ಸಂಘಕಾಲದ ಅನಂತರ ಚೇರರ ನಿಯಂತ್ರಣದಲ್ಲಿದ್ದ ಪ್ರದೇಶಗಳು ಅನಂತರದ ಕಾಲದಲ್ಲಿ ಕೇರಳವಾಗಿ ರೂಪಾಂತರವಾಯಿತು.

## ಮಹೋದಯಪುರದ ಪೆರುಮಾಕ್ಕಳ್

ಸಿ. ಇ. ಒಂಬತ್ತನೇ ಶತಮಾನದಲ್ಲಿ, ಇಂದಿನ ಕೊಡುಂಗಲ್ಲೂರು ಬಳಿಯ ಮಹೋದಯಪುರವನ್ನು (ಮಕೋತೈ) ಕೇಂದ್ರವಾಗಿಸಿ ಪೆರುಮಾಳ್ ಆಡಳಿತವು ಸ್ಥಾಪನೆಯಾಯಿತು. ಅನಂತರದ ಕಾಲದಲ್ಲಿ ಪೆರುಮಾಕ್ಕಳರನ್ನು ನಂತರದ ಚೇರರು ಎಂದು ತಿಳಿಯಲಾಯಿತು. ಇಲ್ಲಿನ ರಾಜರು ಪೆರುಮಾಳ್, ಚೇರಮನ್ ಮತ್ತು ಕುಲಶೇಖರ ಎಂಬ ಪದವಿಯ ಹೆಸರುಗಳನ್ನು ಸ್ವೀಕರಿಸಿದರು.

### ಮಹೋದಯಪುರಂ

ಮಹೋದಯಪುರವು ಸಿ. ಇ. 9ನೇ ಶತಮಾನದಿಂದ 12ನೇ ಶತಮಾನದ ಆರಂಭದವರೆಗೆ ಆಡಳಿತ ನಡೆಸಿದ ಪೆರುಮಾಕ್ಕಳ್‌ರ ರಾಜಧಾನಿಯಾಗಿತ್ತು. ಮಹೋದಯಪುರವು ವಿಜ್ಞಾನ ಹಾಗು ಸಂಸ್ಕೃತಿಯ ಪ್ರಧಾನ ಕೇಂದ್ರ ಎಂಬ ನೆಲೆಯಲ್ಲಿ ದಕ್ಷಿಣ ಭಾರತದಾದ್ಯಂತ ಪ್ರಸಿದ್ಧವಾಗಿತ್ತು. ರಾಮರಾಜಶೇಖರ, ಸ್ಥಾಣು ರವಿ, ಇಂದುಕೋತ, ಭಾಸ್ಕರ ರವಿ ಎಂಬಿವರು ಇಲ್ಲಿಯ ಪ್ರಮುಖ ಆಡಳಿತಾಧಿಕಾರಿಗಳಾಗಿದ್ದರು

## ಪೆರುಮಾಳ್ ಆಡಳಿತ

ಪೆರುಮಾಳರ ಆಡಳಿತ ಕಾಲದಲ್ಲಿ ರಾಜ್ಯವನ್ನು ವಿವಿಧ ನಾಡುಗಳಾಗಿ ವಿಭಜಿಸಿದರು. ನಾಡುಗಳನ್ನು ದೇಶಗಳಾಗಿ ಹಾಗೂ ದೇಶಗಳನ್ನು ಕರಗಳಾಗಿ(ಸಣ್ಣಭೂಭಾಗ) ವಿಭಜಿಸಿದರು. ನಾಡುಗಳ ಆಡಳಿತವು ನಾಡುವಾಳಿಗಳು ಹಾಗೂ ದೇಶಗಳ ಆಡಳಿತವನ್ನು ದೇಶವಾಳಿಗಳು ನಿರ್ವಹಿಸಿದರು. ಜನಕೀಯ ಸ್ವಭಾವವಿರುವ ದೇಶ ಒಕ್ಕೂಟಗಳ ನಿಯಂತ್ರಣದಲ್ಲಿ ದೇಶವಾಳಿಗಳು ಆಳ್ವಿಕೆ ನಡೆಸುತ್ತಿದ್ದರು. ಕರಗಳ ಆಡಳಿತವನ್ನು ಪಂಚಾಯತುಗಳು ನಿರ್ವಹಿಸುತ್ತಿದ್ದವು. ಆಡಳಿತ ಶ್ರೇಣಿಯಲ್ಲಿ ಪೆರುಮಾಳ್‌ಗೆ ಅತ್ಯಂತ ಉನ್ನತ ಸ್ಥಾನವಿತ್ತು.

ಪೆರುಮಾಳ್ ಆಡಳಿತಕ್ಕೆ ಸಂಬಂಧಿಸಿದ ಆಶಯ ಚಿತ್ರವನ್ನು ಪೂರ್ತಿಗೊಳಿಸಿರಿ.

| | |
|---|---|
| ಪೆರುಮಾಳ್ ರಾಜ್ಯ | → ಪೆರುಮಾಳ್ |
| ↓ ನಾಡುಗಳು | → ............................................ |
| ↓ ದೇಶಗಳು | → ............................................ |
| ↓ ಕರಗಳು | → ............................................ |

## ಆರ್ಥಿಕ ಪ್ರಗತಿ

ಪೆರುಮಾಳರ ಆಡಳಿತ ಕಾಲದಲ್ಲಿ ಬಲವಾದ ಆರ್ಥಿಕ ಅಡಿಪಾಯವಿತ್ತು. ಆ ಕಾಲದಲ್ಲಿ ಕೃಷಿಯ ಜೊತೆಗೆ ವಾಣಿಜ್ಯವೂ ಅಭಿವೃದ್ಧಿ ಹೊಂದಿತ್ತು. ವಿದೇಶಗಳೊಂದಿಗಿನ ಸುಗಂಧ ದ್ರವ್ಯಗಳ ವ್ಯಾಪಾರ ಮತ್ತು ಬಂದರುಗಳ ಮೂಲಕ ಲಭಿಸುವ ಸುಂಕ(ತೆರಿಗೆ)ವು ಪೆರುಮಾಳ್ ರಾಜ್ಯದ ಆರ್ಥಿಕ ಬದಲಾವಣೆಗಳಿಗೆ ಕಾರಣವಾಯಿತು. ಆ ಕಾಲದಲ್ಲಿ ದಕ್ಷಿಣ ಭಾರತದಾದ್ಯಂತ ಅಸ್ತಿತ್ವದಲ್ಲಿದ್ದ ಅಂಜುವಣ್ಣಂ, ಮಣಿಗ್ರಾಮಮ್, ವಲಂಚಿಯಾರ್ ಮತ್ತು ನಾನಾದೇಶಿಗರು ಮೊದಲಾದ ವ್ಯಾಪಾರ ಗುಂಪುಗಳ ವಾಣಿಜ್ಯ ಚಟುವಟಿಕೆಗಳು ಈ ವಲಯದ ಆರ್ಥಿಕ ಪ್ರಗತಿಗೆ ಸಹಾಯಕವಾಯಿತು.

## ಸಾಂಸ್ಕೃತಿಕ ಜೀವನ

ಪೆರುಮಾಳ್‌ರ ಆಡಳಿತ ಕಾಲದಲ್ಲಿ ಸಾಂಸ್ಕೃತಿಕ ರಂಗದಲ್ಲಿ ಧಾರಾಳ ಬದಲಾವಣೆಗಳಾದವು.




- ಕೃಷಿ ಗ್ರಾಮಗಳ ಕೇಂದ್ರ ಎಂಬ ನೆಲೆಯಲ್ಲಿ ದೇವಾಲಯಗಳು ಸಾಂಸ್ಕೃತಿಕ ಜೀವನದ ಪ್ರಮುಖ ಕೇಂದ್ರಗಳಾಗಿ ಬದಲಾದವು.
- ಪ್ರತಿಯೊಬ್ಬರೂ ಜನನದಿಂದ ಒಂದೇ ಉದ್ಯೋಗವನ್ನು ಪರಂಪರಾಗತವಾಗಿ ಮಾಡುತ್ತಿದ್ದುದರಿಂದ ಜಾತಿ ವ್ಯವಸ್ಥೆ ರೂಪುಗೊಂಡಿತು.
- ವಾಸ್ತುವಿದ್ಯೆ, ಶಿಲ್ಪಕಲೆ, ಚಿತ್ರಕಲೆ, ವಾದ್ಯಕಲೆ, ನೃತ್ಯ, ಸಂಗೀತ ಎಂಬಿತ್ಯಾದಿ ಕಲೆಗಳು ದೇವಾಲಯ ಕೇಂದ್ರೀಕರಿಸಿ ಅಭಿವೃದ್ಧಿ ಹೊಂದಿದವು.
- ಈ ಅವಧಿಯಲ್ಲಿ ಅನುಷ್ಠಾನ ಕಲೆಗಳಾದ ಕೂತ್ ಹಾಗೂ ಕೂಡಿಯಾಟವು ಅಭಿವೃದ್ಧಿ ಹೊಂದಿತು.



ಚಿತ್ರ 8.3 ಕೂತ್ತ್



ಚಿತ್ರ 8.4 ಕೂಡಿಯಾಟಂ

ಪೆರುಮಾಳ್ ಆಡಳಿತ ಕಾಲದ ಸಾಂಸ್ಕೃತಿಕ ರಂಗದ ಬದಲಾವಣೆಗಳನ್ನು ಸೂಚಿಸುವ ಚಿತ್ರಗಳನ್ನು ಸಂಗ್ರಹಿಸಿ ಅಡಿಟಿಪ್ಪಣಿಯೊಂದಿಗೆ ಆಲ್ಬಮ್/ ಡಿಜಿಟಲ್ ಆಲ್ಬಮ್ ತಯಾರಿಸಿರಿ.

12ನೇ ಶತಮಾನದ ಆರಂಭದೊಂದಿಗೆ ಪೆರುಮಾಕ್ಕಳ್‌ರ ಆಡಳಿತವು ಶಿಥಿಲಗೊಂಡಿತ್ತು. ಅದರೊಂದಿಗೆ ಅವರ ಆಡಳಿತಕ್ಕೆ ಒಳಪಟ್ಟ ಪ್ರದೇಶಗಳ ರಾಜಕೀಯ ಏಕತೆಯು ನಷ್ಟವಾಯಿತು. ಅದರಿಂದಾಗಿ ಪೆರುಮಾಕ್ಕಳ್‌ರ ಭಾಗವಾಗಿದ್ದ ಹಲವು ನಾಡುಗಳು ಸ್ವತಂತ್ರವಾದವು.

## ನಾಡುವಾಳ್ಳಿ ಸ್ವರೂಪಗಳು

ಪೆರುಮಕ್ಕಳ್‌ರ ಭಾಗವಾಗಿದ್ದ ನಾಡುಗಳು ಅನಂತರದ ಕಾಲದಲ್ಲಿ ನಾಡುವಾಳ್ಳಿಗಳ ಅಧೀನದಲ್ಲಿ ನಾಡುವಾಳ್ಳಿ ಸ್ವರೂಪಗಳೆಂದು ಕರೆಯಲ್ಪಟ್ಟವು.

ಸ್ವರೂಪಗಳು ಮರುಮಕ್ಕತ್ತಾಯ ಸಂಪ್ರದಾಯದ ಪ್ರಕಾರ ಅಸ್ತಿತ್ವದಲ್ಲಿದ್ದ ಸ್ವಯಂ ಆಡಳಿತ ಪ್ರದೇಶಗಳಾಗಿದ್ದವು. ಸ್ವರೂಪಗಳು ಮರುಮಕ್ಕತ್ತಾಯ ಸಂಪ್ರದಾಯವನ್ನು ಆಧರಿಸಿ ಅಸ್ತಿತ್ವದಲ್ಲಿದ್ದ ಅವಿಭಕ್ತ ಕುಟುಂಬಗಳಿಂದ ನಿಯಂತ್ರಿಸಲ್ಪಡುತ್ತಿದ್ದವು.

### ಮಕ್ಕತ್ತಾಯಂ ಮತ್ತು ಮರುಮಕ್ಕತ್ತಾಯಂ

ಹಿಂದಿನ ಕಾಲದಲ್ಲಿ, ಕೇರಳದಲ್ಲಿ ಮಕ್ಕತ್ತಾಯಂ ಮತ್ತು ಮರುಮಕ್ಕತ್ತಾಯಂ ಎಂಬ ಎರಡು ಪ್ರಮುಖ ಉತ್ತರಾಧಿಕಾರ ಪದ್ಧತಿಗಳು ಪ್ರಚಲಿತದಲ್ಲಿದ್ದವು. ಮಕ್ಕತ್ತಾಯಂ ಪದ್ಧತಿಯ ಪ್ರಕಾರ, ಆಸ್ತಿಯು ತಂದೆಯಿಂದ ಮಕ್ಕಳಿಗೆ ಹಸ್ತಾಂತರಗೊಳ್ಳುತ್ತಿತ್ತು. ಆದರೆ, ಮರುಮಕ್ಕತ್ತಾಯಂ ಪದ್ಧತಿಯಲ್ಲಿ, ಆಸ್ತಿಯು ಸೋದರಮಾವಂದಿರಿಂದ ಅಳಿಯಂದಿರಿಗೆ ಹಸ್ತಾಂತರಗೊಳ್ಳುತ್ತಿತ್ತು.

ಕೋಲತ್ತುನಾಡು (ಕಣ್ಣೂರು), ನೆಡಿಯಿರುಪ್ಪ್ (ಕೋಝಿಕ್ಕೋಡ್) , ಪೆರುಂಬಡಪ್ಪ್ (ಕೊಚ್ಚಿ), ತೃಪ್ಪಾಪ್ಪೂರ್ (ವೇಣಾಡ್) ಎಂಬಿವುಗಳು ನಾಡುವಾಳ್ಳಿ ಸ್ವರೂಪಗಳಲ್ಲಿ ಪ್ರಮುಖವಾಗಿದ್ದವು. ನಾಡುವಾಳ್ಳಿ ಆಡಳಿತ ವ್ಯಾಪಿಸುವುದರೊಂದಿಗೆ ಜಮೀನ್ದಾರಿ ಸಂಪ್ರದಾಯವು ವ್ಯಾಪಕವಾಯಿತು. ಜಮೀನ್ದಾರಿ ಸಂಪ್ರದಾಯವು ಮಧ್ಯ ಕೇರಳದ ಸಾಮಾಜಿಕ - ಆರ್ಥಿಕ - ರಾಜಕೀಯ ವ್ಯವಸ್ಥೆಯನ್ನು ನಿಯಂತ್ರಿಸುತ್ತಿದ್ದ ವ್ಯವಸ್ಥೆಯಾಗಿದೆ. ಜಮೀನ್ದಾರಿ ಸಂಪ್ರದಾಯದ ವ್ಯಾಪಿಸುವಿಕೆಯ ಪರಿಣಾಮವಾಗಿ ನಾಡುವಾಳ್ಳಿ ಸ್ವರೂಪಗಳು ಬೆಳೆದುಬಂದವು.




ಭೂಪಟ 8.2 ಪ್ರಧಾನ ನಾಡುವಾಝಿ ಸ್ವರೂಪಗಳು

## ಮಧ್ಯಕಾಲ ಕೇರಳದ ನಾಡುಗಳು




ಭೂಪಟ 8.2 ನಿರೀಕ್ಷಿಸಿ ಕೇರಳದಲ್ಲಿ ನೆಲೆನಿಂತಿದ್ದ ನಾಡುವಾಝಿ ಸ್ವರೂಪಗಳು ಯಾವುವು ಎಂದು ಪಟ್ಟಿ ಮಾಡಿರಿ.

- 
- 
- 
- 

ಪ್ರಧಾನ ನಾಡುವಾಝಿ ಸ್ವರೂಪಗಳ ಕುರಿತು ಹೆಚ್ಚಿನ ವಿವರಗಳನ್ನು ಪರಿಚಯಿಸಿಕೊಳ್ಳೋಣ.

**ಕೋಲತ್ತುನಾಡು ಸ್ವರೂಪ**
- ಆಡಳಿತ ಕೇಂದ್ರವಾಗಿ ಕಣ್ಣೂರು.
- ಆಡಳಿತಾಧಿಕಾರಿಗಳನ್ನು 'ಕೋಲತ್ತಿರಿ' ಎಂದು ಕರೆಯುತ್ತಿದ್ದರು.

**ನೆಡಿಯಿರುಪ್ಪ್ ಸ್ವರೂಪ**
- ಆಡಳಿತ ಕೇಂದ್ರವಾಗಿ ಕೋಝಿಕೋಡ್.
- ಆಡಳಿತಾಧಿಕಾರಿಗಳನ್ನು 'ಸಾಮೂದಿರಿ' ಎಂದು ಕರೆಯುತ್ತಿದ್ದರು.
- ಮಾಮಾಂಕಂನ ರಕ್ಷಾಧಿಕಾರಿಯ ಸ್ಥಾನವು ಲಭಿಸುವುದರೊಂದಿಗೆ ಸಾಮೂದಿರಿಯ ಖ್ಯಾತಿ ಹೆಚ್ಚಿತು.

**ಪೆರುಂಬಡಪ್ಪ್ ಸ್ವರೂಪ**
- ಕೊಡುಂಗಲ್ಲೂರು ಪ್ರದೇಶವು ಪೆರುಂಬಡಪ್ಪ್ ಸ್ವರೂಪವಾಗಿ ಬದಲಾಯಿತು.
- ಅನಂತರದ ಕಾಲದಲ್ಲಿ ಕೊಚ್ಚಿ ರಾಜವಂಶ ಎಂಬ ಹೆಸರಿನಲ್ಲಿ ಕರೆಯಲಾಯಿತು.

**ತೃಪ್ಪಾಪ್ಪೂರ್ ಸ್ವರೂಪ (ವೇಣಾಡ್)**
- ಸ್ವರೂಪವು ಕೇರಳದ ದಕ್ಷಿಣದ ತುದಿಯಲ್ಲಿ ನೆಲೆನಿಂತಿತು.
- ಅನಂತರ ಸ್ವರೂಪವು ತಿರುವಾಂಕೂರು ಎಂಬ ಪ್ರಬಲ ರಾಜಪ್ರಭುತ್ವ ರಾಜ್ಯವಾಗಿ ಬದಲಾಯಿತು.

ಅನಿಯಂ ತಿರುನಾಳ್ ಮಾರ್ತಾಂಡವರ್ಮನ ಕಾಲದಲ್ಲಿ ವೇಣಾಡ್ ತಿರುವಿದಾಂಕೂರು ಎಂಬ ಪ್ರಬಲವಾದ ಒಂದು ರಾಜಪ್ರಭುತ್ವ ರಾಜ್ಯವಾಗಿ ಅಭಿವೃದ್ಧಿ ಹೊಂದಿತು. ಶಕ್ತನ್ ತಂಬುರಾನನು ಪೆರುಂಬಡಪ್ಪ್ ಸ್ವರೂಪವನ್ನು ಕೊಚ್ಚಿ ರಾಜ್ಯವಾಗಿ ಬದಲಾಯಿಸಿದನು.

ಕೆಳಗೆ ನೀಡಿರುವ ಮಾರ್ತಾಂಡವರ್ಮನ ಹಾಗೂ ಶಕ್ತನ್ ತಂಬುರಾನನ ಕೆಲವು ಸುಧಾರಣೆಗಳನ್ನು ನಿರೀಕ್ಷಿಸಿರಿ.

### ಮಾಮಾಂಕಂ

ಮಾಮಾಂಕಂವು ಭಾರತ ಹೊಳೆಯ ತೀರದ ತಿರುನಾವಾಯದಲ್ಲಿ 12 ವರ್ಷಕ್ಕೊಮ್ಮೆ ಆಚರಿಸುತ್ತಿದ್ದ ಉತ್ಸವವಾಗಿದೆ. ವಳ್ಳುವನಾಡಿನ ಆಡಳಿತ ಅಧಿಕಾರಿಗಳಾದ ವಳ್ಳುವಕೋನಾತಿರಿಯಿಂದ ಮಾಮಾಂಕಂನ ರಕ್ಷಾಧಿಕಾರಿ ಸ್ಥಾನವನ್ನು ಅನಂತರದ ಕಾಲದಲ್ಲಿ ಸಾಮೂದಿರಿ ವಶಪಡಿಸಿಕೊಂಡನು.

| ಅನಿಯಂ ತಿರುನಾಳ್ ಮಾರ್ತಾಂಡವರ್ಮ |
|---|
| ಭೂಮಾಲಕರಾದ ಎಂಟು ಮನೆಯ ಪಿಳ್ಳೆಯವರನ್ನು ಮತ್ತು ಮಾಡಂಬಿಯವರನ್ನು ದಮನಿಸಿದನು. |
| ರಾಜ್ಯದ ಭೂಮಿಯನ್ನು ಅಳತೆ ಮಾಡಿ ವ್ಯವಸ್ಥಿತಗೊಳಿಸಿದನು. |
| ತೃಪ್ಪಡಿದಾನ ನಡೆಸಿದನು. |

| ಶಕ್ತನ್ ತಂಬುರಾನ್ |
|---|
| ನಾಡುವಾಳ್ಗಿಗಳನ್ನು ದಮನಿಸಿದನು |
| ವಾಣಿಜ್ಯ ಕೇಂದ್ರಗಳನ್ನು ಆರಂಭಿಸಿದನು |
| ತ್ರಿಶೂರ್ ಪೂರಂಗೆ ನಾಂದಿ ಹಾಡಿದನು |

### ತೃಪ್ಪಡಿದಾನ

ಜನವರಿ 3, 1750 ರಂದು, ಅನಿಯಂ ತಿರುನಾಳ್ ಮಾರ್ತಾಂಡವರ್ಮ ತ್ರಿಪ್ಪಡಿದಾನವನ್ನು ನಡೆಸಿದನು. ಅವರು ತಮ್ಮ ಅಧಿಕಾರದ ಸಂಕೇತವಾದ ಖಡ್ಗವನ್ನು ತಿರುವಾಂಕೂರಿನ ಕುಲದೇವರಾದ ಶ್ರೀ ಪದ್ಮನಾಭನಿಗೆ ಒಪ್ಪಿಸಿ ಪದ್ಮನಾಭದಾಸನಾದನು. ಇದನ್ನು ತ್ರಿಪ್ಪಡಿದಾನ ಎಂದು ಕರೆಯುತ್ತಾರೆ. ಇದು ಹೆಚ್ಚುತ್ತಿರುವ ಊಳಿಗಮಾನ್ಯ ಪ್ರಭುಗಳ ಬೆದರಿಕೆಯನ್ನು ಎದುರಿಸಲು ಮಾರ್ತಾಂಡವರ್ಮನು ತಿರುವಾಂಕೂರಿನ ಆಡಳಿತಕ್ಕೆ ತಂದ ಬದಲಾವಣೆಗಳ ಭಾಗವಾಗಿದೆ.

ಪ್ರಾಚೀನ ತಮಿಳಗಂನ ಭಾಗವಾಗಿದ್ದ ಕೇರಳವು ಪೆರುಮಾಕಳರ ಆಡಳಿತದೊಂದಿಗೆ ಒಂದು ಪ್ರತ್ಯೇಕ ರಾಜಕೀಯ ಕ್ಷೇತ್ರವಾಗಿ ರೂಪುಗೊಂಡಿತು. ಆದರೆ, ಪೆರುಮಾಳ್ ಆಡಳಿತದ ಪತನವು ಆ ರಾಜಕೀಯ ಐಕ್ಯತೆಯನ್ನು ಶಿಥಿಲಗೊಳಿಸಿತು. ಸ್ವತಂತ್ರ ಸ್ವಾಯತ್ತ ಆಡಳಿತ ಪ್ರದೇಶಗಳಾಗಿ ರೂಪುಗೊಂಡ ನಾಡುವಾಳ್ಗಿ ಸ್ವರೂಪಗಳು ಮಧ್ಯಕಾಲ ಕೇರಳದ ಸಾಮಾಜಿಕ - ಆರ್ಥಿಕ - ರಾಜಕೀಯ ಸಂಬಂಧಗಳನ್ನು ಬದಲಾಯಿಸಿದವು. ಅನಂತರದ ಕಾಲದಲ್ಲಿ ಈ ನಾಡುವಾಳ್ಗಿ ಸ್ವರೂಪಗಳಿಂದ ರೂಪುಗೊಂಡ ರಾಜಪ್ರಭುತ್ವದ ರಾಜ್ಯಗಳು ಏಕೀಕರಣಗೊಂಡು ಇಂದಿನ ಕೇರಳವು ರೂಪುಗೊಂಡಿತು.

## ಮುಂದುವರಿದ ಚಟುವಟಿಕೆಗಳು

- ಕೇರಳದ ಮಹಾಶಿಲಾ ಸ್ಮಾರಕಗಳ ಚಿತ್ರಗಳು ಮತ್ತು ಮಾಹಿತಿಗಳನ್ನು ಸಂಗ್ರಹಿಸಿ ಆಲ್ಬಮ್ / ಡಿಜಿಟಲ್ ಆಲ್ಬಮ್ ತಯಾರಿಸಿ ತರಗತಿಯಲ್ಲಿ ಪ್ರದರ್ಶಿಸಿರಿ.
- ಸಂಘ ಕಾಲದ ಸಾಮಾಜಿಕ-ಆರ್ಥಿಕ-ರಾಜಕೀಯ ಜೀವನದ ಕುರಿತು ಸೆಮಿನಾರ್ ಆಯೋಜಿಸಿರಿ.

  ಉಪ ವಿಷಯಗಳು

  - ಸಾಮಾಜಿಕ ಜೀವನ
  - ಆರ್ಥಿಕ ಜೀವನ
  - ತಿಣಗಳು
  - ರಾಜಕೀಯ ವ್ಯವಸ್ಥೆ
- ಸಮಾಜ ವಿಜ್ಞಾನ ಕ್ಲಬ್ಬಿನ ಆಶ್ರಯದಲ್ಲಿ ಮಹಾಶಿಲಾ ಸ್ಮಾರಕಗಳ ಮಾದರಿಗಳನ್ನು ನಿರ್ಮಿಸಿ, ಶಾಲೆಯಲ್ಲಿ ಪ್ರದರ್ಶಿಸಿರಿ.
- ಪೆರುಮಾಳ್ ಆಳ್ವಿಕೆಯ ಅವಧಿಯಲ್ಲಿ ಅಭಿವೃದ್ಧಿ ಹೊಂದಿದ ವಿವಿಧ ಕಲೆಗಳಿಗೆ ಸಂಬಂಧಿಸಿದ ಚಿತ್ರಗಳು ಮತ್ತು ಮಾಹಿತಿಯನ್ನು ಸಂಗ್ರಹಿಸಿ, ವೀಡಿಯೋಗಳನ್ನು ತಯಾರಿಸಿರಿ.

  *ಸೂಚನೆಗಳು:*
  ವಾಸ್ತುಶಿಲ್ಪ, ಶಿಲ್ಪಕಲೆ, ಚಿತ್ರಕಲೆ, ವಾದ್ಯಕಲೆ, ನೃತ್ಯ, ಸಂಗೀತ ಇತ್ಯಾದಿ.







भारतद ಸಂವಿಧಾನ

ಪ್ರಸ್ತಾವನೆ

ಭಾರತದ ಜನಗಳಾದ ನಾವು ಭಾರತವನ್ನು ಒಂದು [1][ಸಾರ್ವಭೌಮ ಸಮಾಜವಾದೀ ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ] ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ:

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ ;
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ ಸ್ವಾತಂತ್ರ್ಯ ;
ಸ್ಥಾನಮಾನ ಹಾಗೂ ಅವಕಾಶ ಸಮಾನತೆ ;

ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು,[2][ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು] ಸುನಿಶ್ಚಿತಗೊಳಿಸಿ ಅವರಲ್ಲಿ ಭ್ರಾತೃಭಾವನೆಯನ್ನು ವೃದ್ಧಿಗೊಳಿಸಲು; ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;

ನಮ್ಮ ಸಂವಿಧಾನ ಸಭೆಯಲ್ಲಿ 1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.

1. 1976ನೇ ಇಸವಿಯ ಭಾರತ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ಸಂಪೂರ್ಣ ಪ್ರಭುತ್ವ ಸಂಪನ್ನ ಲೋಕತಂತ್ರಾತ್ಮಕ ಗಣರಾಜ್ಯವಾಗಿ" ಎಂಬ ಪದಗಳ ಬದಲಾಗಿ (3-1-1977 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. ಮೇಲ್ಕಂಡ ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ರಾಷ್ಟ್ರದ ಏಕತೆಯನ್ನೂ" ಎಂಬ ಪದಗಳ ಬದಲಾಗಿ (3-1-1977ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

# 9

# ಸಂವಿಧಾನಕ್ಕೊಂದು ಮುನ್ನುಡಿ



ಚಿತ್ರ 9.1

ಮೇಲೆ ನೀಡಿರುವ ಚಿತ್ರಗಳನ್ನು ಗಮನಿಸಿರಿ.

ಇದರಲ್ಲಿ ಸಮಾಜಕ್ಕೆ ಅಪೇಕ್ಷಣೀಯವಾದ ನಡವಳಿಕೆಯನ್ನು ಸೂಚಿಸುವ ಚಿತ್ರಗಳಿಗೆ ಇಮೋಜಿಯನ್ನು 🙂 ರಚಿಸಿ ಸೇರಿಸಿರಿ.

ನೀವು ಯಾವ ಚಿತ್ರಕ್ಕೆ ಇಮೋಜಿ ರಚಿಸಿದ್ದೀರಿ? ಯಾಕೆ?

ಯಾವುದೇ ಸಮಾಜವು ಸುಗಮವಾಗಿ ಮತ್ತು ಶಾಂತಿಯುತವಾಗಿ ಬದುಕಲು ಮತ್ತು ಪ್ರಗತಿ ಸಾಧಿಸಲು ಕಾನೂನು ಮತ್ತು ನಿಯಮಗಳನ್ನು ಪಾಲಿಸುವುದು ಅತ್ಯಗತ್ಯ.

ಕೆಲವು ಕಾನೂನುಗಳ ಪ್ರಕಾರವೇ ಶಾಲೆಗಳಲ್ಲಿ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ನಾವು ಕಾರ್ಯನಿರ್ವಹಿಸುತ್ತೇವೆಂದು ಹಿಂದಿನ ತರಗತಿಗಳಲ್ಲಿ ನೀವು ಕಲಿತಿದ್ದೀರಲ್ಲವೇ?

ನಮ್ಮ ದೇಶವು ಸಾಕಷ್ಟು ವಿಶಾಲವಾದ ಭೂ ಪ್ರದೇಶ, ದೊಡ್ಡ ಜನಸಂಖ್ಯೆ ಇರುವ ಮತ್ತು ಹಲವು ವಿಭಾಗಗಳಿಗೆ ಒಳಪಟ್ಟ ಜನರು ಸಾಮರಸ್ಯದಿಂದ ಒಟ್ಟಿಗೆ ವಾಸಿಸುವ ದೇಶವಾಗಿದೆ. ಕೆಲವು ಕಾನೂನುಗಳು, ನಿಯಮಗಳು ಮತ್ತು ನಿಬಂಧನೆಗಳ ಪ್ರಕಾರ ನಮ್ಮ ದೇಶವು ಇಂತಹ ವೈವಿಧ್ಯವನ್ನು ಹೊಂದಿ ಮುಂದುವರಿಯುತ್ತಿದೆ. ಇದೇ ರೀತಿ ಹೆಚ್ಚಿನ ದೇಶಗಳೂ ಅವುಗಳ ಅಸ್ತಿತ್ವ ಮತ್ತು ಆಡಳಿತ ನಡೆಸಲು ಸಹಾಯ ಮಾಡುವ ಮೂಲಭೂತ ತತ್ವಗಳನ್ನು ಒಳಗೊಂಡಿರುವ ಒಂದು ಏಕೀಕೃತ ದಾಖಲೆಯನ್ನು ಹೊಂದಿವೆ. ಇದುವೇ ಸಂವಿಧಾನವಾಗಿದೆ.

ಒಂದು ರಾಷ್ಟ್ರದಲ್ಲಿ ಸರಕಾರದ ಸಂಘಟನೆ ಮತ್ತು ಕಾರ್ಯ ನಿರ್ವಹಣೆಗೆ ಅಗತ್ಯವಾಗಿರುವ ಮೂಲಭೂತ ಕಾನೂನು, ತತ್ವಗಳು ಮತ್ತು ನಿಬಂಧನೆಗಳನ್ನು ಒಳಗೊಂಡಿರುವ ಅಧಿಕೃತ ದಾಖಲೆಯನ್ನು ಸಂವಿಧಾನ ಎನ್ನುವರು.

ಪಾಲವಿಳ ಯು.ಪಿ ಶಾಲೆಯ ವಿದ್ಯಾರ್ಥಿಗಳು ಸಮಾಜ ವಿಜ್ಞಾನ ಕ್ಲಬ್ಬಿನ ಆಶ್ರಯದಲ್ಲಿ ಹಿರಿಯ ವಕೀಲೆಯೊಬ್ಬರಲ್ಲಿ ನಡೆಸಿದ ಸಂದರ್ಶನವನ್ನು ಗಮನಿಸಿರಿ.




ಚಿತ್ರ 9.2

ಸಂದರ್ಶನದಲ್ಲಿ ಸಂವಿಧಾನಕ್ಕೆ ಸಂಬಂಧಿಸಿದ ಯಾವೆಲ್ಲ ವಿಚಾರಗಳು ಒಳಗೊಂಡಿವೆ?

- ನಮ್ಮ ರಾಷ್ಟ್ರದ ಆಡಳಿತ ವ್ಯವಸ್ಥೆ
- 
- 
- 

## ಸಂವಿಧಾನದ ಪೂರ್ವಜರು

ಪ್ರಪಂಚದಲ್ಲಿ ಮೊತ್ತ ಮೊದಲ ಬಾರಿಗೆ ಸಂವಿಧಾನ ಎಂಬ ಆಶಯಕ್ಕೆ ಕಾರಣವಾದ ಚಾರಿತ್ರಿಕ ಹಿನ್ನೆಲೆಗಳನ್ನು ನಾವು ಪರಿಶೀಲಿಸೋಣ.

### ಹಮ್ಮುರಾಬಿಯ ಕಾನೂನು ಸಂಹಿತೆ

ಪ್ರಾಚೀನ ಬ್ಯಾಬಿಲೋನಿಯಾದ ಆಡಳಿತಗಾರ ಹಮ್ಮುರಾಬಿಯ ಸಂಹಿತೆಯು (ಕ್ರಿ. ಪೂ 1792-1750) ಪ್ರಪಂಚದ ಅತ್ಯಂತ ಹಳೆಯ ಕಾನೂನು ಸಂಹಿತೆಯಲ್ಲಿ ಒಂದಾಗಿದೆ. ಒಂದು ದೇಶದ ಮೂಲ ಕಾನೂನುಗಳನ್ನು ಬದಲಾಯಿಸುವ ಅಧಿಕಾರ ಯಾರಿಗೂ ಇಲ್ಲ ಎಂದು ಈ ಕಾನೂನು ಸಂಹಿತೆಯು ಹೇಳುತ್ತದೆ.


ಚಿತ್ರ 9.3


ಚಿತ್ರ 9.4

### ಮ್ಯಾಗ್ನ ಕಾರ್ಟ

ರಾಜರ ದಬ್ಬಾಳಿಕೆಯಿಂದ ಇಂಗ್ಲೆಂಡಿನ ಜನರು ಬೇಸತ್ತಿದ್ದರು. ಇದರ ವಿರುದ್ಧ ಸಿ. ಇ. 1215-ರಲ್ಲಿ ಜನರು ಜಾನ್ ರಾಜನನ್ನು ದಿಗ್ಬಂಧಿಸಿ ಸಹಿ ಹಾಕಿಸಿದ ಒಪ್ಪಂದವು ಮ್ಯಾಗ್ನಕಾರ್ಟವಾಗಿದೆ. ರಾಜ ಮತ್ತು ಸರಕಾರವು ಕಾನೂನಿಗೆ ಅತೀತರಲ್ಲ ಎಂಬುದನ್ನು ಈ ಒಪ್ಪಂದವು ಸ್ಪಷ್ಟಪಡಿಸುತ್ತದೆ. ಮ್ಯಾಗ್ನಕಾರ್ಟವನ್ನು ಮಾನವ ಹಕ್ಕುಗಳ ಇತಿಹಾಸದಲ್ಲಿ ಒಂದು ಮೈಲುಗಲ್ಲು ಎಂದು ಪರಿಗಣಿಸಲಾಗಿದೆ.

### ಮಹಾಕ್ರಾಂತಿ

17-ನೇ ಶತಮಾನದಲ್ಲಿ ಇಂಗ್ಲೆಂಡಿನಲ್ಲಿ ಪಾರ್ಲಿಮೆಂಟಿನ ಹಿತಾಸಕ್ತಿಗಳಿಗೆದುರಾಗಿ ವರ್ತಿಸಿದ ರಾಜರುಗಳು ಮತ್ತು ಪಾರ್ಲಿಮೆಂಟಿನ ನಡುವೆ ಹಲವಾರು ಸಂಘರ್ಷಗಳು ನಡೆದವು. ಅಂತಹ ಸಂಘರ್ಷಗಳಲ್ಲಿ ಪ್ರಮುಖವಾದದ್ದು ಸಿ. ಇ. 1688-ರ ಮಹಾ ಕ್ರಾಂತಿಯಾಗಿದೆ. ರಾಜನ ಸ್ವೇಚ್ಛಾಧಿಪತ್ಯವನ್ನು ಕೊನೆಗೊಳಿಸಲು ಮತ್ತು ಪಾರ್ಲಿಮೆಂಟಿನ ಅಧಿಕಾರವನ್ನು ಹೆಚ್ಚಿಸಲು ಈ ಕ್ರಾಂತಿಯಿಂದ ಸಾಧ್ಯವಾಯಿತು. ರಾಜನ ಅಧಿಕಾರವನ್ನು ಪಾರ್ಲಿಮೆಂಟಿನ ನಿಯಂತ್ರಣಗಳಿಗೆ ವಿಧೇಯಗೊಳಿಸಲಾಯಿತು. ಇಂಗ್ಲೆಂಡಿನಲ್ಲಿ ಸಂಸತ್ತಿಗೆ ಅಧಿಕಾರವನ್ನು ನೀಡುವ ಸಂವಿಧಾನದ ರಚನೆಗೆ ಇದು ದಾರಿ ಮಾಡಿಕೊಟ್ಟಿತು.


ಚಿತ್ರ 9.5


ಚಿತ್ರ 9.6

### ಅಮೇರಿಕಾದ ಸ್ವಾತಂತ್ರ್ಯ ಘೋಷಣೆ

ಬ್ರಿಟಿಷರ ಆಳ್ವಿಕೆಯಲ್ಲಿದ್ದ ಉತ್ತರ ಅಮೇರಿಕಾದ 13 ವಸಾಹತುಗಳು ಬ್ರಿಟನಿನ ತಪ್ಪಾದ ನೀತಿಗಳಿಗೆದುರಾಗಿ ಹೋರಾಟವನ್ನು ಮಾಡಿದವು. ನಂತರ ಸಿ. ಇ. 1776-ರಲ್ಲಿ ಈ ವಸಾಹತುಗಳು ನಡೆಸಿದ ಘೋಷಣೆಯೇ ಅಮೇರಿಕಾದ ಸ್ವಾತಂತ್ರ್ಯ ಘೋಷಣೆಯಾಗಿದೆ. ಸರಕಾರವನ್ನು ತೆಗೆದುಹಾಕುವ ಹಕ್ಕನ್ನು ಜನರು ಹೊಂದಿದ್ದಾರೆ ಎಂಬುದನ್ನು ಮನವರಿಕೆ ಮಾಡುವಲ್ಲಿ ಈ ಘೋಷಣೆಯು ಯಶಸ್ವಿಯಾಯಿತು. ಇದು ವಿಶ್ವದ ಮೊದಲ ಲಿಖಿತ ಸಂವಿಧಾನವಾದ ಅಮೇರಿಕಾದ ಸಂವಿಧಾನ ರಚನೆಗೆ ಕಾರಣವಾಯಿತು.

## ಫ್ರೆಂಚ್ ಕ್ರಾಂತಿ



ಚಿತ್ರ 9.7

ಇದು 'ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ' ಎಂಬ ಘೋಷಣೆಯಡಿಯಲ್ಲಿ ಫ್ರಾನ್ಸಿನ ಜನರು 1789-ರಲ್ಲಿ ನಡೆಸಿದ ಕ್ರಾಂತಿಯಾಗಿದೆ. ಈ ಕ್ರಾಂತಿಯ ಮೂಲಕ ರಾಜ ಪ್ರಭುತ್ವದ ವಿರುದ್ಧ ಜನರ ಸಾರ್ವಭೌಮತ್ವ ಎಂಬ ಕಲ್ಪನೆಯನ್ನು ಅಂಗೀಕರಿಸಲಾಯಿತು. ಇದರೊಂದಿಗೆ ಫ್ರಾನ್ಸಿನಲ್ಲಿ ಒಂದು ಸಂವಿಧಾನವು ರೂಪಗೊಂಡಿತು ಮತ್ತು ರಾಜನ ಅಧಿಕಾರಗಳನ್ನು ಸಂವಿಧಾನಕ್ಕೆ ವಿಧೇಯಗೊಳಿಸಲಾಯಿತು.

ಮೇಲೆ ಹೇಳಲಾದ ಚಾರಿತ್ರಿಕ ಘಟನೆಗಳಿಂದ ಜನರ ಕ್ಷೇಮ ಮತ್ತು ಪ್ರಗತಿಗಾಗಿ ಒಂದು ಏಕೀಕೃತ ಕಾನೂನು ಸಂಹಿತೆಯ ಅಗತ್ಯವಿದೆ ಎಂದು ನಿಮಗೆ ಮನವರಿಕೆಯಾಯಿತಲ್ಲವೇ? ದಬ್ಬಾಳಿಕೆ ಮತ್ತು ಶೋಷಣೆಯ ವಿರುದ್ಧ ಜನರ ಮಧ್ಯಪ್ರವೇಶವು ಸಂವಿಧಾನಗಳ ರಚನೆಗೆ ಕಾರಣವಾಯಿತು.

**ವರ್ಕ್‌ಶೀಟನ್ನು ಪೂರ್ತಿಗೊಳಿಸಿರಿ.**

| | |
|---|---|
| ರಾಜನ ಅಧಿಕಾರವು ಸಂವಿಧಾನಕ್ಕೆ ವಿಧೇಯವಾಯಿತು. | ಫ್ರೆಂಚ್ ಕ್ರಾಂತಿ |
| ವಿಶ್ವದ ಮೊದಲ ಲಿಖಿತ ಸಂವಿಧಾನ. | |
| ಇತಿಹಾಸದಲ್ಲಿ ಅತ್ಯಂತ ಹಳೆಯ ಕಾನೂನು ಸಂಹಿತೆ. | |
| ರಾಜನ ದಬ್ಬಾಳಿಕೆ ಕೊನೆಗೊಂಡಿತು ಮತ್ತು ಸಂಸತ್ತಿನ ಅಧಿಕಾರ ಹೆಚ್ಚಾಯಿತು. | |
| ಮಾನವ ಹಕ್ಕುಗಳ ಐತಿಹಾಸಿಕ ಮೈಲುಗಲ್ಲು. | |

## ಸಂವಿಧಾನಗಳು ಹಲವು ವಿಧ

ಸಂವಿಧಾನಗಳನ್ನು ಅವುಗಳ ಸ್ವರೂಪ, ತಿದ್ದುಪಡಿ ಪ್ರಕ್ರಿಯೆ ಮತ್ತು ರೂಪೀಕರಣದ ವಿಧಾನ ಇತ್ಯಾದಿ ಆಧಾರಗಳ ಮೇಲೆ ಹಲವು ರೀತಿಯಲ್ಲಿ ವರ್ಗೀಕರಿಸಲಾಗಿದೆ.



| ಲಿಖಿತ | ಅಲಿಖಿತ |
|---|---|
| ಒಂದು ರಾಷ್ಟ್ರದ ಮೂಲಭೂತ ತತ್ವಗಳು ಮತ್ತು ಕಾನೂನುಗಳನ್ನು ವ್ಯವಸ್ಥಿತವಾಗಿ ಬರೆದು ಪುಸ್ತಕ ರೂಪದಲ್ಲಿ ಕ್ರೋಡೀಕರಿಸಿರುವುದು ಲಿಖಿತ ಸಂವಿಧಾನವಾಗಿದೆ.<br>ಉದಾ: ಭಾರತ, ಅಮೇರಿಕಾ ಸಂಯುಕ್ತ ಸಂಸ್ಥಾನ (USA) | ಒಂದು ರಾಷ್ಟ್ರದ ಮೂಲಭೂತ ತತ್ವಗಳು ಮತ್ತು ಕಾನೂನುಗಳನ್ನು ವ್ಯವಸ್ಥಿತವಾಗಿ ಬರೆಯದೇ ಇರುವುದು ಮತ್ತು ಪುಸ್ತಕ ರೂಪದಲ್ಲಿ ಕ್ರೋಡೀಕರಿಸದಿದ್ದರೆ ಅಂತಹ ಸಂವಿಧಾನವನ್ನು ಅಲಿಖಿತ ಸಂವಿಧಾನವೆನ್ನುವರು.<br>ಉದಾ: ಯುನೈಟೆಡ್ ಕಿಂಗ್‌ಡಮ್ (UK), ನ್ಯೂಜಿಲೆಂಡ್ |
| **ಕಠಿಣ** | **ಸರಳ** |
| ಬದಲಾವಣೆ(ತಿದ್ದುಪಡಿ) ಮಾಡಲು ಕಟ್ಟುನಿಟ್ಟಾದ ಕಾರ್ಯವಿಧಾನಗಳು ಅಗತ್ಯವಿರುವ ಸಂವಿಧಾನ.<br>ಉದಾ: ಅಮೇರಿಕಾ ಸಂಯುಕ್ತ ಸಂಸ್ಥಾನ (USA), ಆಸ್ಟ್ರೇಲಿಯಾ. | ಸುಲಭವಾಗಿ ಬದಲಾಯಿಸಬಹುದಾದ (ತಿದ್ದುಪಡಿ) ಸಂವಿಧಾನ<br>ಉದಾ: ಯುನೈಟೆಡ್ ಕಿಂಗ್‌ಡಮ್, ನ್ಯೂಜಿಲೆಂಡ್ |
| **ಜಾರಿಗೊಳಿಸಿರುವುದು** | **ಬೆಳೆದುಬಂದದ್ದು** |
| ಸಂವಿಧಾನ ನಿರ್ಮಾಣ ಸಭೆ ಅಥವಾ ಕೌನ್ಸಿಲನ್ನು ರೂಪೀಕರಿಸಿದ ಅನಂತರ ಬರೆದು ತಯಾರಿಸಿ ಜಾರಿಗೊಂಡ ಸಂವಿಧಾನ.<br>ಉದಾ: ಅಮೆರಿಕ ಸಂಯುಕ್ತ ಸಂಸ್ಥಾನ, ಭಾರತ | ಕಾಲಕ್ಕನುಸರಿಸಿ ಬದಲಾವಣೆಯ ಪರಿಣಾಮವಾಗಿ ರೂಪುಗೊಂಡ ಸಂವಿಧಾನ. ಒಪ್ಪಂದಗಳು, ತೀರ್ಪುಗಳು, ಕಾನೂನುಗಳು ಮತ್ತು ಸಂಪ್ರದಾಯಗಳ ರೂಪದಲ್ಲಿರುವ ವ್ಯವಸ್ಥೆಗಳೂ ರೂಢಿಗಳೂ ಇದರಲ್ಲಿ ಒಳಗೊಂಡಿವೆ.<br>ಉದಾ: ಯುನೈಟೆಡ್ ಕಿಂಗ್‌ಡಮ್, ಕೆನಡ |

ಪಾಠಭಾಗದಲ್ಲಿ ಉದಾಹರಣೆಗಳಾಗಿ ನೀಡಿರುವ ದೇಶಗಳನ್ನು ಅವುಗಳ ಸಂವಿಧಾನದ ಗುಣಲಕ್ಷಣಗಳಿಗೆ ಅನುಸರಿಸಿ ಕೋಷ್ಟಕದಲ್ಲಿ ಕ್ರಮೀಕರಿಸಿ ಬರೆಯಿರಿ.



| ಲಿಖಿತ | ಅಲಿಖಿತ | ಕಠಿಣ | ಸರಳ | ಜಾರಿಗೊಳಿಸಿರುವುದು | ಬೆಳೆದುಬಂದದ್ದು |
|---|---|---|---|---|---|
| | | | | | |

ಹಲವು ವಿಧದ ಸಂವಿಧಾನಗಳನ್ನು ಪರಿಚಯಿಸಿಕೊಂಡಿರಲ್ಲವೇ?

ಇನ್ನು ಸಂವಿಧಾನಕ್ಕೆ ಅಗತ್ಯವಾಗಿ ಇರಬೇಕಾದ ಗುಣಗಳು ಯಾವುವೆಂದು ಪರಿಶೋಧಿಸೋಣ.




'ಸಂವಿಧಾನದಲ್ಲಿ ಇರಬೇಕಾದ ಅಗತ್ಯವಾದ ಗುಣಗಳು' ಎಂಬ ವಿಷಯದಲ್ಲಿ ಕಿರು ಟಿಪ್ಪಣಿಯನ್ನು ತಯಾರಿಸಿರಿ.

## ಸಂವಿಧಾನದ ವ್ಯವಸ್ಥೆ

ಸಂವಿಧಾನದ ಸಾಮಾನ್ಯ ಲಕ್ಷಣಗಳ ಪರಿಚಯ ನಮಗಾಗಿದೆ. ಇನ್ನು ಸಂವಿಧಾನದ ವ್ಯವಸ್ಥೆ ಏನೆಂದು ಪರಿಶೀಲಿಸೋಣ.



ಟೀಚರ್: ಮನು, ಇವತ್ತು ಸಂಚಾರ ನಿಯಮಗಳನ್ನು ಉಲ್ಲಂಘಿಸಿ ನೀನು ಸೈಕಲ್ ಸವಾರಿ ಮಾಡುವುದನ್ನು ನಾನು ಕಂಡಿದ್ದೇನೆ. ಇನ್ನು ಮುಂದೆ ಹಾಗೆ ಮಾಡಬಾರದು.

ಮನು : ಕ್ಷಮಿಸಿ ಟೀಚರೇ; ಸೈಕಲ್ ಓಡಿಸುವವರು ನಿಯಮಗಳನ್ನು ಪಾಲಿಸಬೇಕೆ?

ಟೀಚರ್: ಎಲ್ಲಾ ಪ್ರಯಾಣಿಕರು ರಸ್ತೆ ನಿಯಮಗಳನ್ನು ಪಾಲಿಸುವುದು ಅತ್ಯಗತ್ಯ. ಅದು ಸಾಮಾನ್ಯ ಜನರಿಗೆ ಮಾತ್ರವಲ್ಲ ಅಧಿಕಾರದಲ್ಲಿರುವವರಿಗೂ ಅನ್ವಯಿಸುತ್ತದೆ.

ಟೀಚರ್ ಮತ್ತು ಮನು ಅವರೊಳಗಿನ ಸಂಭಾಷಣೆಯನ್ನು ಗಮನಿಸಿದಿರಲ್ಲವೇ?

ಆಡಳಿತಗಾರರು ಕೂಡ ಕಾನೂನುಗಳನ್ನು ಪಾಲಿಸಲು ಜವಾಬ್ದಾರರೆಂದು ನಿಮಗೆ ತಿಳಿಯಿತಲ್ಲವೇ? ವ್ಯಕ್ತಿಗಳ ಮೇಲೆ ಕಾನೂನಿನ ನಿಯಂತ್ರಣವು ಇರುವಂತೆ ಅಧಿಕಾರಿಗಳಿಗೂ ಕೆಲವು ನಿಯಂತ್ರಣಗಳಿವೆ. ಮಿತಿಗಳಿಲ್ಲದ ಅಧಿಕಾರಗಳನ್ನು ಆಡಳಿತಾಧಿಕಾರಿಗಳಿಗೆ ನೀಡಿದರೆ ಅದು ಜನರ ಸ್ವಾತಂತ್ರ್ಯವನ್ನು ಬಾಧಿಸುವುದು ಮಾತ್ರವಲ್ಲದೆ ಸ್ವೇಚ್ಛಾಧಿಪತ್ಯಕ್ಕೂ ಕಾರಣವಾಗುತ್ತದೆ. ಸಂವಿಧಾನದ ವ್ಯವಸ್ಥೆಗಳು ಇದಕ್ಕೆದುರಾಗಿ ನೆಲೆನಿಲ್ಲುತ್ತವೆ. ಸಾಂವಿಧಾನಿಕ ವ್ಯವಸ್ಥೆಗಳು ಸಂವಿಧಾನದ ಮೂಲಕ ಸರಕಾರದ ಅಧಿಕಾರಗಳನ್ನು ಪರಿಮಿತಗೊಳಿಸುವ ರಾಜಕೀಯ ವ್ಯವಸ್ಥೆಯಾಗಿದೆ.

ಆಡಳಿತಗಾರರನ್ನು ನಿಯಂತ್ರಿಸುವುದು, ಕಾನೂನಿನ ವ್ಯವಸ್ಥೆಯನ್ನು ಖಚಿತಪಡಿಸುವುದು ಮತ್ತು ಜನರ ಹಕ್ಕುಗಳನ್ನು ವ್ಯಾಖ್ಯಾನಿಸುವುದು ಸಹ ಸಾಂವಿಧಾನಿಕ ವ್ಯವಸ್ಥೆಯಲ್ಲಿ ಒಳಗೊಂಡಿರುತ್ತದೆ.

**ಅರಿಸ್ಟಾಟಲ್ ಮತ್ತು ಸಾಂವಿಧಾನಿಕ ವ್ಯವಸ್ಥೆ**

ಸಂವಿಧಾನ ಮತ್ತು ಸಾಂವಿಧಾನಿಕ ವ್ಯವಸ್ಥೆಯ ಪರಿಕಲ್ಪನೆಯನ್ನು ಅರಿಸ್ಟಾಟಲ್ ಅವರು ಮೊದಲಾಗಿ ಪ್ರತಿಪಾದಿಸಿದರು. 'ಒಂದು ರಾಷ್ಟ್ರದ ಆಡಳಿತಗಾರರ ವ್ಯವಸ್ಥೆ' ಎಂದು ಸಂವಿಧಾನಕ್ಕೆ ಅವರು ನೀಡಿರುವ ಪ್ರಾಥಮಿಕ ವ್ಯಾಖ್ಯಾನವಾಗಿದೆ. ಸಾಮಾನ್ಯ ಕಾನೂನುಗಳು ಮತ್ತು ಸಾಂವಿಧಾನಿಕ ಕಾನೂನುಗಳು ಎಂದು ಕಾನೂನುಗಳನ್ನು ಅವರು ಎರಡಾಗಿ ವಿಂಗಡಿಸಿದರು.

ಈ ಕೆಳಗಿನ ಹೇಳಿಕೆಗಳಲ್ಲಿ ಸಾಂವಿಧಾನಿಕ ವ್ಯವಸ್ಥೆಗಳಿಗೆ ಹೊಂದಿಕೆಯಾಗುವ ಹೇಳಿಕೆಗಳನ್ನು ಗುರುತಿಸಿ ವೃತ್ತಕ್ಕೆ ಬಣ್ಣ ನೀಡಿರಿ.

| | |
|---|---|
| ಆಡಳಿತಾಧಿಕಾರಿಗಳ ಅಧಿಕಾರಗಳ ಮೇಲೆ ಮಿತಿಗಳನ್ನು ನಿಗದಿಪಡಿಸುವುದು. | ○ |
| ನಾಗರಿಕರ ಹಕ್ಕುಗಳನ್ನು ವ್ಯಾಖ್ಯಾನಿಸುವುದು. | ○ |
| ಸ್ವೇಚ್ಛಾಧಿಕಾರವನ್ನು ಪ್ರೋತ್ಸಾಹಿಸುವುದು. | ○ |
| ಆಡಳಿತಗಾರರಿಗೆ ಪರಿಧಿ ಇಲ್ಲದ ಅಧಿಕಾರಗಳನ್ನು ನೀಡುವುದು. | ○ |
| ನಿಯಮ ವ್ಯವಸ್ಥೆಯನ್ನು ಖಾತ್ರಿಪಡಿಸುವುದು. | ○ |

ಪ್ರತಿಯೊಂದು ದೇಶದ ಸಂವಿಧಾನವು ಸುದೀರ್ಘವಾದ ಅನೇಕ ಪ್ರಕ್ರಿಯೆಗಳ ಪರಿಣಾಮವಾಗಿ ರೂಪುಗೊಂಡಿರುತ್ತದೆ. ನಮ್ಮ ದೇಶದ ಸಂವಿಧಾನದ ಚರಿತ್ರೆಯೂ ಇದಕ್ಕಿಂತ ಭಿನ್ನವಾಗಿಲ್ಲ. ಭಾರತದ ಸಂವಿಧಾನವು ಹೇಗೆ ರೂಪುಗೊಂಡಿತು ಎಂಬುದನ್ನು ಪರಿಶೀಲಿಸೋಣ.

## ಭಾರತದ ಸಂವಿಧಾನ

**ರಾಷ್ಟ್ರಪತಿಯಿಂದ ಪ್ರಮಾಣ ವಚನ ಅಥವಾ ಪ್ರತಿಜ್ಞಾ ವಚನ**

"...................... ಎಂಬ ಹೆಸರಿನ ನಾನು, ಭಾರತದ ರಾಷ್ಟ್ರಪತಿ ಪದದ ಕಾರ್ಯಪಾಲನೆಯನ್ನು (ಅಥವಾ ರಾಷ್ಟ್ರಪತಿಯ ಪ್ರಕಾರ್ಯಗಳ ನಿರ್ವಹಣೆಯನ್ನು) ನಿಷ್ಠಾಪೂರ್ವಕವಾಗಿ ಮಾಡುತ್ತೇನೆಂದು ಮತ್ತು ನನಗೆ ಸಾಮರ್ಥ್ಯವಿದ್ದಷ್ಟೂ ಭಾರತದ ಸಂವಿಧಾನದ ಮತ್ತು ಕಾನೂನಿನ ಪರಿರಕ್ಷಣೆ, ಸಂರಕ್ಷಣೆ ಮತ್ತು ಪ್ರತಿರಕ್ಷಣೆ ಮಾಡುತ್ತೇನೆಂದು ಮತ್ತು ಭಾರತದ ಜನತೆಯ ಸೇವೆಯಲ್ಲಿ ಮತ್ತು ಯೋಗಕ್ಷೇಮ ಸಾಧನೆಯಲ್ಲಿ ನಿರತನಾಗಿರುತ್ತೇನೆಂದೂ, ದೇವರ ಹೆಸರಿನಲ್ಲಿ ಪ್ರತಿಜ್ಞೆ ಮಾಡುತ್ತೇನೆ.
ಶ್ರದ್ಧಾ ಪೂರ್ವಕವಾಗಿ ಪ್ರತಿಜ್ಞೆ ಮಾಡುತ್ತೇನೆ."

ಆಕರ: ಭಾರತದ ಸಂವಿಧಾನ

ರಾಷ್ಟ್ರಪತಿಗಳ ಪ್ರಮಾಣವಚನದ ವಾಕ್ಯಗಳನ್ನು ಗಮನಿಸಿರಿ. ಇದು ನಮ್ಮ ಸಂವಿಧಾನದ ಮಹತ್ವವನ್ನು ಎತ್ತಿ ತೋರಿಸುತ್ತದೆ. ಪ್ರಪಂಚದಲ್ಲಿ ಅತ್ಯಂತ ದೊಡ್ಡದಾದ ಮತ್ತು ಲಿಖಿತ ರೂಪದಲ್ಲಿರುವ ಸಂವಿಧಾನವು ಭಾರತದ್ದಾಗಿದೆ. ಅದರ ಮೂಲವನ್ನು ಪರಿಶೀಲಿಸೋಣ.

ಭಾರತೀಯ ಸಂವಿಧಾನದ ಮೂಲವು ಬ್ರಿಟಿಷ್ ಆಳ್ವಿಕೆಯ ಭಾರತದ ಇತಿಹಾಸದೊಂದಿಗೆ ಸಂಬಂಧ ಹೊಂದಿರುತ್ತದೆ.

| | |
|---|---|
| ಇಂಗ್ಲೀಷ್ ಈಸ್ಟ್ ಇಂಡಿಯಾ ಕಂಪೆನಿ | ಭಾರತದೊಂದಿಗೆ ವ್ಯಾಪಾರ ಸಂಬಂಧ ಸ್ಥಾಪಿಸುವ ಸಲುವಾಗಿ ಸಿ. ಇ. 1600-ರಲ್ಲಿ ಇಂಗ್ಲೀಷ್ ಈಸ್ಟ್ ಇಂಡಿಯಾ ಕಂಪೆನಿಯನ್ನು ಸ್ಥಾಪಿಸಲಾಯಿತು. ವ್ಯಾಪಾರಕ್ಕಾಗಿ ಬಂದ ಬ್ರಿಟೀಷರು ಕ್ರಮೇಣ ಅಧಿಕಾರಿಗಳಾಗಿ ಬದಲಾಗುವುದರೊಂದಿಗೆ ಭಾರತದ ಆಡಳಿತವು ಕಂಪೆನಿಯ ಕೈವಶವಾಯಿತು. |
| 1857-ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ | ಬ್ರಿಟಿಷರ ವಿರುದ್ಧ ಭಾರತೀಯರು ನಡೆಸಿದ ಮೊದಲ ಸಾಮೂಹಿಕ ಪ್ರತಿಭಟನೆ. ಇದು ಇಂಗ್ಲೀಷ್ ಈಸ್ಟ್ ಇಂಡಿಯಾ ಕಂಪೆನಿಯ ಆಡಳಿತದ ಅಂತ್ಯಕ್ಕೆ ಕಾರಣವಾಯಿತು. ಅನಂತರ ಬ್ರಿಟನ್‌ನ ರಾಣಿಯು ಭಾರತದ ಆಡಳಿತವನ್ನು ನೇರವಾಗಿ ವಹಿಸಿಕೊಂಡರು. |
| ಭಾರತೀಯ ಕೌನ್ಸಿಲ್ಸ್ ಕಾಯಿದೆಗಳು | ಭಾರತದಲ್ಲಿ ಬ್ರಿಟಿಷ್ ಆಡಳಿತದ ಕಾಲದಲ್ಲಿ ಭಾರತೀಯರ ಭಾಗವಹಿಸುವಿಕೆಯನ್ನು ಖಚಿತಪಡಿಸಿಕೊಳ್ಳಲು ಸಹಾಯ ಮಾಡಿದ ಕಾನೂನುಗಳು. |
| ಸ್ವಾತಂತ್ರ್ಯ ಚಳುವಳಿಗಳು | ಬ್ರಿಟಿಷರಿಗೆದುರಾಗಿ ಭಾರತೀಯರು ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಚಳುವಳಿಗಳಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪ್ರಮುಖ ಪಾತ್ರ ವಹಿಸಿತು. ಭಾರತಕ್ಕೆ ಒಂದು ಸಂವಿಧಾನವನ್ನು ರಚಿಸಲು ಸ್ವತಂತ್ರ ಸಂವಿಧಾನ ಸಭೆಯ ಅವಶ್ಯಕತೆಯನ್ನು ಈ ಚಳುವಳಿಯು ಅಧಿಕೃತವಾಗಿ ಪ್ರಸ್ತಾಪಿಸಿರುತ್ತದೆ. |
| ಗವರ್ನ್‌ಮೆಂಟ್ ಆಫ್ ಇಂಡಿಯಾ ಕಾಯಿದೆಗಳು | ಆಡಳಿತದಲ್ಲಿ ಭಾರತದ ಪಾಲುಗಾರಿಕೆಯನ್ನು ನಿಧಾನವಾಗಿ ಹೆಚ್ಚಿಸಲು ಮತ್ತು ಭಾರತದಲ್ಲಿ ಉತ್ತಮ ಆಡಳಿತವನ್ನು ಖಾತರಿಗೊಳಿಸಲು ಬ್ರಿಟಿಷರು ಜಾರಿಗೊಳಿಸಿದ ಕಾನೂನುಗಳು. |
| ಕ್ಯಾಬಿನೆಟ್ ಮಿಷನ್ | ಭಾರತಕ್ಕೆ ಸಂಪೂರ್ಣ ಸ್ವಯಂ ಆಡಳಿತ ಅಧಿಕಾರವನ್ನು ಒದಗಿಸಲು ಬ್ರಿಟಿಷ್ ಸರಕಾರವು ಭಾರತಕ್ಕೆ ಕ್ಯಾಬಿನೆಟ್ ಮಿಷನನ್ನು ಕಳುಹಿಸಿತು. ಇದರಂತೆ ಭಾರತಕ್ಕೆ ಒಂದು ಸಂವಿಧಾನವನ್ನು ತಯಾರಿಸುವ ಉದ್ದೇಶದೊಂದಿಗೆ 1946-ರಲ್ಲಿ ಭಾರತದ ಸಂವಿಧಾನ ಸಭೆಯನ್ನು ಸ್ಥಾಪಿಸಲಾಯಿತು. |

ಡಾ. ರಾಜೇಂದ್ರ ಪ್ರಸಾದ್ ಅವರು ಸಂವಿಧಾನ ರಚನಾ ಸಭೆಯ ಅಧ್ಯಕ್ಷರಾಗಿದ್ದರು. ಡಾ. ಬಿ.ಆರ್ ಅಂಬೇಡ್ಕರ್ ಅಧ್ಯಕ್ಷರಾಗಿರುವ ಕರಡು ರಚನಾ ಸಮಿತಿಯು ಸಂವಿಧಾನದ ಕರಡನ್ನು ಸಿದ್ಧಪಡಿಸಿತು. ಸಂವಿಧಾನ ರಚನಾ ಸಭೆಯು 1949-ರ ನವೆಂಬರ್ 26-ರಂದು ಸಂವಿಧಾನವನ್ನು ಅಂಗೀಕರಿಸಿತು. ನವೆಂಬರ್ 26-ನ್ನು ನಾವು ಸಂವಿಧಾನ ದಿನವನ್ನಾಗಿ ಆಚರಿಸುತ್ತೇವೆ. ಸಂವಿಧಾನವು 1950-ನೇ ಜನವರಿ 26-ರಂದು ಅಧಿಕೃತವಾಗಿ ಜಾರಿಗೆ ಬಂತು. ಅಂದಿನಿಂದ ಭಾರತವು ಒಂದು ಸಾರ್ವಭೌಮ, ಪ್ರಜಾಪ್ರಭುತ್ವ, ಗಣರಾಜ್ಯ ಎಂದು ಕರೆಯಲ್ಪಡುತ್ತದೆ.

**ಕ್ಯಾಬಿನೆಟ್ ಮಿಷನ್**

ಭಾರತಕ್ಕೆ ಸಾರ್ವಭೌಮ ಅಧಿಕಾರವನ್ನು ಹಸ್ತಾಂತರಿಸುವ ಕುರಿತು ಭಾರತೀಯ ನಾಯಕರೊಂದಿಗೆ ಚರ್ಚಿಸಲು ಬ್ರಿಟಿಷ್ ಸರಕಾರ ನೇಮಿಸಿದ ಮೂವರು ಸದಸ್ಯರ ಸಮಿತಿಯು ಕ್ಯಾಬಿನೆಟ್ ಮಿಷನ್ ಆಗಿದೆ. ಅವರು ಭಾರತದ ಪ್ರಮುಖ ರಾಜಕೀಯ ಪಕ್ಷಗಳ ನಾಯಕರೊಂದಿಗೆ ಚರ್ಚೆ ನಡೆಸಿದರು. ಭಾರತಕ್ಕೆ ಸಂವಿಧಾನವನ್ನು ರಚಿಸುವುದಕ್ಕಾಗಿ ಸಂವಿಧಾನ ರಚನಾ ಸಭೆಯ ಬೇಡಿಕೆಯನ್ನು ಕ್ಯಾಬಿನೆಟ್ ಮಿಷನ್ ಒಪ್ಪಿಕೊಂಡಿತು. ಕ್ಯಾಬಿನೆಟ್ ಮಿಷನ್ ಭಾರತದ ಭವಿಷ್ಯದ ರಾಜಕೀಯ ವ್ಯವಸ್ಥೆಗಾಗಿ ರೂಪಿಸಿದ ಯೋಜನೆಯಾಗಿದೆ.

ಭಾರತದ ಸಂವಿಧಾನವು ಬೆಳೆದು ಬಂದ ದಾರಿಯನ್ನು ಸೂಚಿಸುವ ಭಿತ್ತಿಪತ್ರಿಕೆಯನ್ನು ತಯಾರಿಸಿರಿ.

## ಭಾರತದ ಸಂವಿಧಾನದ ಪ್ರಸ್ತಾವನೆ

### ಭಾರತದ ಸಂವಿಧಾನ

#### ಪ್ರಸ್ತಾವನೆ

ಭಾರತದ ಜನಗಳಾದ ನಾವು ಭಾರತವನ್ನು ಒಂದು [1]**[ಸಾರ್ವಭೌಮ ಸಮಾಜವಾದೀ ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ]** ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ:

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ** ;

ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ **ಸ್ವಾತಂತ್ರ್ಯ** ;

ಸ್ಥಾನಮಾನ ಹಾಗೂ ಅವಕಾಶ **ಸಮಾನತೆ** ;

ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು,[2][ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು] ಸುನಿಶ್ಚಿತಗೊಳಿಸಿ ಅವರಲ್ಲಿ **ಭ್ರಾತೃಭಾವನೆಯನ್ನು** ವೃದ್ಧಿಗೊಳಿಸಲು; ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;

**ನಮ್ಮ ಸಂವಿಧಾನ ಸಭೆಯಲ್ಲಿ** 1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ **ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.**

---

1. 1976ನೇ ಇಸವಿಯ ಭಾರತ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ಸಂಪೂರ್ಣ ಪ್ರಭುತ್ವ ಸಂಪನ್ನ ಲೋಕತಂತ್ರಾತ್ಮಕ ಗಣರಾಜ್ಯವಾಗಿ" ಎಂಬ ಪದಗಳ ಬದಲಾಗಿ (3-1-1977 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. ಮೇಲ್ಕಂಡ ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ರಾಷ್ಟ್ರದ ಏಕತೆಯನ್ನೂ" ಎಂಬ ಪದಗಳ ಬದಲಾಗಿ (3-1-1977ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

ಮೇಲೆ ನೀಡಲಾದ ಸಂವಿಧಾನದ ಪ್ರಸ್ತಾವನೆಯನ್ನು ಪರಿಶೀಲಿಸಿರಿ. ಸಂವಿಧಾನದ ಪ್ರಮುಖ ಆಶಯಗಳು, ಮೌಲ್ಯಗಳು ಮತ್ತು ದೃಷ್ಟಿಕೋನಗಳು ಪ್ರಸ್ತಾವನೆಯಲ್ಲಿ ಪ್ರತಿಫಲಿಸುತ್ತದೆ. ನಮ್ಮ ಸಂವಿಧಾನವು ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಭಾರತದ ಜನರ ಬಯಕೆಗಳು ಮತ್ತು ಕಂಡ ಕನಸುಗಳನ್ನು ಈಡೇರಿಸಲು ಪರ್ಯಾಪ್ತವಾಗುವ ಮಾರ್ಗಸೂಚಿಯಾಗಿದೆ. ರಾಷ್ಟ್ರದ ಅಧಿಕಾರವು ಜನರಿಂದ ರೂಪುಗೊಂಡಿದೆ ಎಂದು ಭಾರತದ ಸಂವಿಧಾನವು ಸೂಚಿಸುತ್ತದೆ. ರಾಷ್ಟ್ರದ ಸ್ವರೂಪ, ಸಂವಿಧಾನದ ಗುರಿಗಳು, ಸಂವಿಧಾನವನ್ನು ಅಂಗೀಕರಿಸಿದ ದಿನಾಂಕ ಎಂಬಿವುಗಳನ್ನು ಪ್ರಸ್ತಾವನೆಯಲ್ಲಿ ಹೇಳಲಾಗಿದೆ.

ಭಾರತೀಯ ಸಂವಿಧಾನದ ಪ್ರಸ್ತಾವನೆಯಲ್ಲಿ ಉಲ್ಲೇಖಿಸಲಾದ ಮೂಲಭೂತ ಉದ್ದೇಶಗಳನ್ನು ತಿಳಿದುಕೊಳ್ಳೋಣ.

## ಭಾರತದ ಸಂವಿಧಾನ: ಮೂಲಭೂತ ಉದ್ದೇಶಗಳು

**ಸಾರ್ವಭೌಮತ್ವ**

ಬಾಹ್ಯ ಹಸ್ತಕ್ಷೇಪ ಅಥವಾ ಒತ್ತಡಕ್ಕೆ ಒಳಗಾಗದೆ ನಿರ್ಧಾರಗಳನ್ನು ತೆಗೆದುಕೊಳ್ಳುವ ರಾಷ್ಟ್ರದ ಹಕ್ಕು.

**ಸಮಾಜವಾದ**

ಎಲ್ಲರಿಗೂ ಸಮಾನ ಸ್ಥಾನಮಾನ, ಸಮಾನ ಅವಕಾಶವನ್ನು ಒದಗಿಸಿ ಸಾಮಾಜಿಕ ನ್ಯಾಯವನ್ನು ಖಾತರಿಪಡಿಸಲಾಗುತ್ತದೆ.

**ಮತ ನಿರಪೇಕ್ಷತೆ**

ರಾಷ್ಟ್ರಕ್ಕೆ ಅಧಿಕೃತವಾಗಿ ಯಾವುದೇ ಮತ ವಿರುವುದಿಲ್ಲ. ವ್ಯಕ್ತಿಗಳು ತಮಗೆ ಇಷ್ಟವಿರುವ ಮತದಲ್ಲಿ ನಂಬಿಕೆ ಇಡಲು, ಆಚರಿಸಲು ಮತ್ತು ಪ್ರಚಾರ ಮಾಡುವ ಹಕ್ಕನ್ನು ಹೊಂದಿದ್ದಾರೆ. ರಾಷ್ಟ್ರವು ಯಾವುದೇ ಮತದಲ್ಲಿ ತಾರತಮ್ಯ ಮನೋಭಾವವನ್ನು ಹೊಂದಿರುವುದಿಲ್ಲ.

**ಪ್ರಜಾಪ್ರಭುತ್ವ**

ಜನರಿಂದ ಆಯ್ಕೆಯಾದ ಪ್ರತಿನಿಧಿಗಳು ಆಡಳಿತವನ್ನು ನಡೆಸುತ್ತಾರೆ. ಆ ಮೂಲಕ ಜನರು ಸಾರ್ವಭೌಮತೆಯನ್ನು ಹೊಂದುತ್ತಾರೆ.

**ಗಣರಾಜ್ಯ**

ಗಣರಾಜ್ಯವೆಂದರೆ ರಾಷ್ಟ್ರದ ಮುಖ್ಯಸ್ಥರನ್ನು ಆಯ್ಕೆ ಮಾಡುವ ವ್ಯವಸ್ಥೆಯಾಗಿದೆ. ಭಾರತದ ರಾಷ್ಟ್ರ ಮುಖ್ಯಸ್ಥರಾದ ರಾಷ್ಟ್ರಪತಿಗಳು (President) ಚುನಾಯಿಸಲ್ಪಡುವ ವ್ಯಕ್ತಿ ಆಗಿರಬೇಕೆಂದು ನಮ್ಮ ಸಂವಿಧಾನವು ಷರತ್ತು ವಿಧಿಸುತ್ತದೆ.

ರಾಷ್ಟ್ರವು ಪೌರರಿಗೆ ಖಾತರಿಪಡಿಸಲಿರುವ ನ್ಯಾಯ, ಸ್ವಾತಂತ್ರ್ಯ, ಸಮಾನತೆ ಎಂಬಿವುಗಳ ಕುರಿತೂ ಪ್ರಸ್ತಾವನೆಯಲ್ಲಿ ಪ್ರತಿಪಾದಿಸಲಾಗಿದೆ. ಮಾತ್ರವಲ್ಲದೆ ವ್ಯಕ್ತಿಯ ಗೌರವ ಮತ್ತು ರಾಷ್ಟ್ರದ ಏಕತೆ ಮತ್ತು ಅಖಂಡತೆಯನ್ನು ಖಾತರಿಪಡಿಸಿ ಜನರ ಮಧ್ಯೆ ಸಹೋದರತೆಯನ್ನು ಬೆಳೆಸಲೂ ಪ್ರಸ್ತಾವನೆಯು ಗುರಿಯನ್ನಿರಿಸಿಕೊಂಡಿದೆ.

ಈ ಕೆಳಗಿನ ವಿಶೇಷತೆಗಳು ಸಂವಿಧಾನದ ಪ್ರಸ್ತಾವನೆಯಲ್ಲಿ ಪರಾಮರ್ಶಿಸಿರುವ ಯಾವ ಯಾವ ಉದ್ದೇಶಗಳನ್ನು ಪ್ರತಿಬಿಂಬಿಸುತ್ತವೆ.

| ವಿಶೇಷತೆಗಳು | ಉದ್ದೇಶಗಳು |
|---|---|
| ರಾಷ್ಟ್ರಕ್ಕೆ ಅಧಿಕೃತ ಮತವೆಂಬುದಿಲ್ಲ. | |
| ಜನರೇ ಸಾರ್ವಭೌಮರು. | |
| ಚುನಾಯಿಸಲ್ಪಟ್ಟ ವ್ಯಕ್ತಿಯು ರಾಷ್ಟ್ರದ ಮುಖ್ಯಸ್ಥನಾಗಿರುತ್ತಾನೆ. | |
| ಬಾಹ್ಯ ಹಸ್ತಕ್ಷೇಪವಿಲ್ಲದೆ ತೀರ್ಮಾನಗಳನ್ನು ಕೈಗೊಳ್ಳುವ ರಾಷ್ಟ್ರದ ಅಧಿಕಾರ. | |
| ಅಸಮಾನತೆಗಳನ್ನು ಕಡಿಮೆ ಮಾಡಿ ಸಾಮಾಜಿಕ ನ್ಯಾಯವನ್ನು ಖಚಿತಪಡಿಸುತ್ತದೆ. | |

ಮಾನವ ಸಮೂಹದ ವಿಕಾಸದ ಚರಿತ್ರೆಯನ್ನು ಪರಿಶೋಧಿಸಿದರೆ ಸಂವಿಧಾನಗಳು ಆಧುನಿಕ ಕಾಲಘಟ್ಟದ ಉತ್ಪನ್ನಗಳಾಗಿ ಪರಿಗಣಿಸಲ್ಪಡುತ್ತವೆ. ಆಧುನಿಕ ರಾಷ್ಟ್ರಗಳ ಅಸ್ತಿತ್ವ, ಸುಗಮವಾದ ಕಾರ್ಯನಿರ್ವಹಣೆ ಮತ್ತು ಪ್ರಗತಿಗೆ ಪ್ರಬಲವಾದ ಒಂದು ಸಂವಿಧಾನವು ಅನಿವಾರ್ಯವಾಗಿದೆ. ರಾಷ್ಟ್ರ ನಿರ್ಮಾಣಕ್ಕೆ ಸಹಾಯಕವಾಗುವ ಮೂಲಭೂತವಾದ ಕಾನೂನು ವ್ಯವಸ್ಥೆಯನ್ನು ನೀಡುವುದು ಸಂವಿಧಾನದ ಕರ್ತವ್ಯವಾಗಿದೆ. ಸಂವಿಧಾನವು ಸರಿಯಾಗಿ ಪಾಲಿಸಲ್ಪಡುವಾಗ ರಾಷ್ಟ್ರದ ಕನಸುಗಳು ಮತ್ತು ನಿರೀಕ್ಷೆಗಳು ಸಾಕ್ಷಾತ್ಕರಿಸಲ್ಪಡುವುದು. ಸಂವಿಧಾನದ ಪ್ರಸ್ತಾವನೆಯು ಸಂವಿಧಾನದಷ್ಟೆ ಪ್ರಾಧಾನ್ಯವನ್ನು ಹೊಂದಿದೆ. ಸಂವಿಧಾನದ ಉದ್ದೇಶ ಮತ್ತು ಗುರಿಗಳನ್ನು ಪ್ರಸ್ತಾಪಿಸುವುದು ಸಂವಿಧಾನದ ಪ್ರಸ್ತಾವನೆಯಾಗಿದೆ. ಭಾರತದ ಜನತೆಯ ದೃಢನಿಶ್ಚಯವು ನಮ್ಮ ಸಂವಿಧಾನದ ಆತ್ಮಸತ್ವವಾದ ಪ್ರಸ್ತಾವನೆಯಲ್ಲಿ ಪ್ರತಿಫಲಿಸುತ್ತದೆ. ಸಂವಿಧಾನವು ರೂಪುಗೊಂಡು ಅನೇಕ ಸಂವತ್ಸರಗಳು ಕಳೆದರೂ ಅದೇ ಶಕ್ತಿ ಸಾಮರ್ಥ್ಯದಿಂದ ಇಂದೂ ನೆಲೆನಿಲ್ಲಲು ಸಾಧ್ಯವಾಗುತ್ತದೆ. ಇದನ್ನು ಭಾರತದ ಸಂವಿಧಾನದ ಒಂದು ಪ್ರಧಾನ ವಿಶೇಷತೆಯಾಗಿ ಪರಿಗಣಿಸಬಹುದು.

## ಮುಂದುವರಿದ ಚಟುವಟಿಕೆಗಳು

- 'ಭಾರತದ ಸಂವಿಧಾನದ ರೂಪೀಕರಣ: ನಡೆದು ಬಂದ ಹಾದಿ' ಎಂಬ ವಿಷಯದ ಆಧಾರದಲ್ಲಿ ಡಿಜಿಟಲ್ ಪ್ರಸಂಟೇಶನ್ ತಯಾರಿಸಿ ಪ್ರದರ್ಶಿಸಿರಿ.
- ಸಮಾಜವಿಜ್ಞಾನ ಕ್ಲಬ್ಬಿನ ನೇತೃತ್ವದಲ್ಲಿ ಸಂವಿಧಾನದ ಕುರಿತು ಹೆಚ್ಚಿನ ತಿಳುವಳಿಕೆಯನ್ನು ಗಳಿಸಲು ವಕೀಲರೊಂದಿಗೆ ಸಂದರ್ಶನ ಕಾರ್ಯಕ್ರಮವನ್ನು ಆಯೋಜಿಸಿರಿ. ವಿಡಿಯೋ ಕಾನ್ಫರೆನ್ಸಿಂಗಿನ ಸಾಧ್ಯತೆಗಳನ್ನೂ ಉಪಯೋಗಿಸಿಕೊಳ್ಳಬಹುದು.
- ಸಂವಿಧಾನ ದಿನದಂದು ಪ್ರಸ್ತಾವನೆಯ ಪ್ರಾಧಾನ್ಯವನ್ನು ತಿಳಿಸುವ ಫ್ಲಕ್ಕಾರ್ಡುಗಳನ್ನು ತಯಾರಿಸಿ ಶಾಲೆಯಲ್ಲಿ ರ್‍ಯಾಲಿಯನ್ನು ಆಯೋಜಿಸಿರಿ.



10

# ಸಾಗರಗಳ ಮೂಲಕ...

"ವಯಲುಂ, ಪುಝಯುಂ ಕಡನ್ನು ಪೋಕಾಂ
ಕಡಲ್ ಕಡಲಿಲ್ ಪಕರ್ನ್ನ್ ಪೋಕಾಂ
ಪಝಯಕಾಲತ್ತು ಕೊಲಂಬಸ್ ಪೋಯಪೋಲ್
ಪುತಿಯ ಲೋಕಂಙಳ್ ತಿರಞುಪೋಕಾಂ; ನಮ್ಮಳ್
ಪುತುವಾನವಟ್ಟಙಳ್ ತೇಡಿಪ್ಪೋಕಾಂ"

ವೆಳ್ಳಪ್ಪೊಕ್ಕಂ - ಎನ್. ವಿ ಕೃಷ್ಣ ವಾರಿಯರ್

"ಹೊಲಗಳನ್ನು ನದಿಗಳನ್ನು ದಾಟೋಣ
ಸಮುದ್ರ ಸಮುದ್ರಗಳ ಬದಲಿಸಿ ಸಾಗೋಣ
ಹಿಂದೆ ಕೊಲಂಬಸ್ ಸಾಗಿದ ತೆರ ಹೋಗೋಣ
ನವಲೋಕಗಳ ಹುಡುಕಿ ಹೋಗೋಣ: ನಾವು
ನವದಿಗಂತಗಳನ್ನು ಶೋಧಿಸೋಣ."

ವೆಳ್ಳಪ್ಪೊಕ್ಕಂ(ನೆರೆ) - ಎನ್.ವಿ ಕೃಷ್ಣ ವಾರಿಯರ್

ಸಾಹಸ ಯಾನಕ್ಕೆ ಹೆಸರಾಗಿದ್ದ ಕೊಲಂಬಸಿನಂತಹ ನಾವಿಕರ ಕುರಿತು ನೀವು ಕೇಳಿದ್ದೀರಲ್ಲವೇ. ಹೊಸ ಲೋಕಗಳನ್ನು ಅನ್ವೇಷಿಸಿ ವಿಶಾಲವಾದ ಸಾಗರಗಳ ಮೂಲಕ ಅವರು ಕೈಗೊಂಡ ಯಾತ್ರೆಗಳು ಚರಿತ್ರೆಯಲ್ಲಿ ಸ್ಥಾನ ಪಡೆದವುಗಳಾಗಿವೆ. ಸಾಗರಗಳ ಕುರಿತು ತಿಳಿಯಲು ನಾವೊಂದು ಯಾತ್ರೆ ಕೈಗೊಂಡರಾಗದೆ?

ಭೂಮಿಯಲ್ಲಿ ಜೀವವನ್ನು ಉಳಿಸಿಕೊಳ್ಳುವ ಪ್ರಮುಖ ಘಟಕಗಳಲ್ಲಿ ನೀರು ಒಂದಾಗಿದೆ. ಭೂಮಿಯ ಮೇಲ್ಮೈಯ ಶೇಕಡಾ 71 ರಷ್ಟು ಜಲವಾಗಿದೆ. ಸಾಗರಗಳು, ಸರೋವರಗಳು, ನದಿಗಳು, ತೊರೆಗಳು, ಒರತೆಗಳು, ಜಲಾಶಯಗಳು ಬಾವಿಗಳು ನೀರಿನ ವಿವಿಧ ಮೂಲಗಳಾಗಿವೆ ಎಂದು ನಿಮಗೆ ತಿಳಿದಿದೆಯಲ್ಲವೇ? ಇವುಗಳಲ್ಲಿ ಮೇಲ್ಮೈ ಜಲಮೂಲಗಳು ಮತ್ತು ಅಂತರ್ಜಲ ಜಲಮೂಲಗಳು ಸೇರಿವೆ. ಮೇಲ್ಮೈ ನೀರಿನ ಮೂಲಗಳು ಭೂಮಿಯ ಮೇಲೆ ಕಂಡುಬರುವುದಾದರೆ ಅಂತರ್ಜಲ ಮೂಲಗಳು ಮೇಲ್ಮೈಗೆ ಹತ್ತಿರವಾಗಿ ಭೂಮಿಯ ಅಂತರ್ಭಾಗದಲ್ಲಿ ಕಂಡು ಬರುತ್ತವೆ.

ಕೊಟ್ಟಿರುವ ಚಿತ್ರಗಳನ್ನು ನಿರೀಕ್ಷಿಸಿ ಆಶಯ ಚಿತ್ರವನ್ನು ಪೂರ್ತಿಗೊಳಿಸಿರಿ.



ಬಾವಿ



ಸರೋವರ



ನೀರಿನ ಒರತೆ



ಕೊಳವೆಬಾವಿ



ನದಿ



ಸಮುದ್ರ

ಜಲಮೂಲಗಳು

ಮೇಲ್ಮೈ ಜಲಮೂಲಗಳು
- ನದಿ
- ..............................
- ..............................

ಅಂತರ್ಜಲ ಮೂಲಗಳು
- ನೀರಿನ ಒರತೆ
- ..............................
- ..............................

ದಿನನಿತ್ಯದ ಬಳಕೆಗೆ ಉಪಯೋಗಿಸುವ ಜಲ ಯಾವೆಲ್ಲಾ ಮೂಲಗಳಿಂದ ಲಭಿಸುವುದು?

- ನೀರಿನ ಒರತೆ
-
-
-

ಭೂಮಿಯ ಜಲವನ್ನು ಜೀವಜಾಲಗಳು ನಿರಂತರವಾಗಿ ಉಪಯೋಗಿಸಿದರೂ ಮುಗಿಯದಿರಲು ಕಾರಣವೇನು?

ಜಲಮಂಡಲದಲ್ಲಿ ನೀರಿನ ಚಕ್ರೀಯ ಚಲನೆಯು (ಜಲಚಕ್ರ) ನೀರಿನ ಮೂಲಗಳಲ್ಲಿರುವ ನೀರು ಬಳಕೆಗೆ ಅನುಗುಣವಾಗಿ ಮುಗಿಯದೇ ಇರಲು ಕಾರಣವಾಗಿದೆ.

**ಜಲಮಂಡಲ**
ಘನ, ದ್ರವ, ಅನಿಲ ಎಂಬೀ ಸ್ಥಿತಿಗಳಲ್ಲಿ ಭೂಮಿಯ ಮೇಲ್ಮೈಯಲ್ಲಿ, ಅಂತರ್ಭಾಗದಲ್ಲಿ ಮತ್ತು ವಾತಾವರಣದಲ್ಲಿ ಕಂಡುಬರುವ ಒಟ್ಟು ನೀರಿನ ಪ್ರಮಾಣವೇ ಜಲಮಂಡಲ.

## ಜಲಚಕ್ರ

ಭೂಮಿಯ ಅಂತರ್ಭಾಗದಲ್ಲಿ, ಭೂಮಿಯ ಮೇಲ್ಮೈಯಲ್ಲಿ ಮತ್ತು ವಾತಾವರಣದಲ್ಲಿ ನೀರಿನ ಚಕ್ರೀಯ ಚಲನೆಯೇ ಜಲಚಕ್ರ. ಈ ಚಕ್ರಿಯ ಚಲನೆ ಹೇಗೆ ಕಾರ್ಯನಿರ್ವಹಿಸುತ್ತದೆ ಎಂದು ಪರಿಶೀಲಿಸೋಣ.



ಚಿತ್ರ 10.1 ಜಲಚಕ್ರ

ಚಿತ್ರವನ್ನು ಗಮನಿಸಿದಿರಲ್ಲವೇ.

ಭೂಮಿಯ ಮೇಲ್ಮೈಯಲ್ಲಿರುವ ವಿವಿಧ ಜಲಮೂಲಗಳಲ್ಲಿರುವ ಜಲವು ಬಾಷ್ಪೀಕರಣದ ಮೂಲಕ ನೀರಾವಿಯಾಗಿ ಬದಲಾಗುತ್ತದೆ. ಹೀಗೆ ವಾತಾವರಣಕ್ಕೆ ತಲುಪುವ ನೀರಾವಿ ಘನೀಕರಣಗೊಂಡು ಮೋಡಗಳಾಗಿ ರೂಪುಗೊಳ್ಳುತ್ತವೆ ಮೋಡಗಳು ಮಾತ್ರವಲ್ಲದೆ ಮಂಜು, ತುಷಾರ ಮೊದಲಾದವುಗಳು ಘನೀಕರಣದ ಇತರ ರೂಪಗಳಾಗಿವೆ. ಮೋಡಗಳು ಮಳೆಯ ರೂಪದಲ್ಲಿ ನೀರಿನ ಹನಿಗಳಾಗಿ ಭೂಮಿಗೆ ಬೀಳುತ್ತವೆ. ಮಳೆ, ಮಂಜು ಬೀಳುವುದು, ಆಲಿಕಲ್ಲು ಮಳೆ ಮೊದಲಾದವುಗಳು ಮಳೆಯ ವಿವಿಧ ರೂಪಗಳಾಗಿವೆ.

**ಬಾಷ್ಪೀಕರಣ (Evaporation)**
ಒಂದು ದ್ರವವು ಉಷ್ಣತೆಯ ಸಹಾಯದಿಂದ ನೀರಾವಿಯಾಗಿ ಅಥವಾ ಅನಿಲವಾಗಿ ಬದಲಾಗುವ ಕ್ರಿಯೆ.

**ಘನೀಕರಣ (Condensation)**
ವಾಯುವಿನಲ್ಲಿರುವ ನೀರಿನ ಕಣ (ನೀರಾವಿ) ತಣಿದು ನೀರಾಗಿ ಬದಲಾಗುವ ಪ್ರಕ್ರಿಯೆ.

**ಮಳೆ (Precipitation)**
ಮೋಡಗಳಲ್ಲಿನ ನೀರಿನ ಹನಿಗಳು ನಿರಂತರವಾದ ಘನಿಕರಣದ ಮೂಲಕ ಗಾತ್ರ ಮತ್ತು ಭಾರ ಹೆಚ್ಚಾದಾಗ ವಾತಾವರಣದಲ್ಲಿ ತಂಗಿ ನಿಲ್ಲಲು ಸಾಧ್ಯವಾಗದೆ ನೆಲಕ್ಕೆ ಬೀಳುವ ಪ್ರಕ್ರಿಯೆ.

ಹೀಗೆ ಭೂಮಿಯ ಮೇಲ್ಮೈಯಲ್ಲಿರುವ ಜಲವು ಬಾಷ್ಪೀಕರಣ, ಘನೀಕರಣ, ಮಳೆ ಎಂಬೀ ಪ್ರಕ್ರಿಯೆಗಳ ಮೂಲಕ ಚಕ್ರೀಯವಾಗಿ ಚಲಿಸುತ್ತಿರುತ್ತದೆ.

ನೀರು ಜೀವದ ಉಳಿವಿಗೆ ಅತ್ಯಗತ್ಯವಾದ ಒಂದು ಘಟಕವಾಗಿದೆ. ಆದರೆ ಭೂಮಿಯಲ್ಲಿ ಎಲ್ಲಾ ಕಡೆಯೂ ನೀರು ಸಮಾನ ರೀತಿಯಲ್ಲಿ ವಿತರಿಸಲ್ಪಟ್ಟಿದೆಯೇ?

ಕೊಟ್ಟಿರುವ ಚಿತ್ರದಿಂದ ನೀರಿನ ವಿತರಣೆಯನ್ನು ಗಮನಿಸಿರಿ.




ಚಿತ್ರ 10.2

ಭೂಮಿಯಲ್ಲಿರುವ ನೀರಿನ 97 ಶೇಕಡ ಲವಣಜಲವಾಗಿದೆ ಎಂದು ತಿಳಿಯಿತಲ್ಲವೇ. ಭೂಮಿಯಲ್ಲಿರುವ ಒಟ್ಟು ಶುದ್ಧಜಲದ ಪ್ರಮಾಣ 3 ಶೇಕಡವಾಗಿದೆ. ಅದರಲ್ಲಿ ಹೆಚ್ಚಿನ ಭಾಗವು ಮಂಜುಗಡ್ಡೆಗಳು, ಹಿಮನದಿಗಳಲ್ಲಿ ಹೆಪ್ಪುಗಟ್ಟಿದೆ. ಜೀವಿಗಳಿಗೆ ಬಳಸಲು ಲಭ್ಯವಿರುವ ಶುದ್ಧಜಲದ ಪ್ರಮಾಣವು ಸೀಮಿತವಾಗಿದೆ.

ಶುದ್ಧಜಲದಂತೆ ಸಾಗರಜಲವು ಭೂಮಿಯ ಮೇಲಿನ ಮಾನವರ ಉಳಿವಿಗೆ ಅತ್ಯಗತ್ಯವಾಗಿದೆ. ಹವಾಗುಣವನ್ನು ನಿಯಂತ್ರಿಸುವುದರಲ್ಲಿ, ಜೀವಿಪರಿಸ್ಥಿತಿ ವ್ಯವಸ್ಥೆಗಳನ್ನು ಬೆಂಬಲಿಸುವುದರಲ್ಲಿ ಮತ್ತು ಮಾನವನ ಜೀವನಕ್ಕೆ ಅಗತ್ಯವಾದ ಸಂಪನ್ಮೂಲಗಳನ್ನು ಒದಗಿಸುವುದರಲ್ಲಿ ಸಾಗರಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ.

## ಸಾಗರಗಳು

ವಿಶ್ವ ಸಾಗರ ದಿನಕ್ಕಾಗಿ ಮಕ್ಕಳು ತಯಾರಿಸಿದ ಫಲಕಗಳನ್ನು ಗಮನಿಸಿ.




ಭೂಮಿಯ ಮೇಲಿನ ಜೀವರಾಶಿಗಳ ಉಳಿವಿಗೆ ಸಾಗರಗಳ ಪಾತ್ರವು ನಿರ್ಣಾಯಕವಾಗಿದೆ. ಸಾಗರಗಳ ವಿಶೇಷತೆಗಳ ಬಗ್ಗೆ ಇನ್ನಷ್ಟು ತಿಳಿದುಕೊಳ್ಳೋಣ.

ಸಾಗರಗಳು ಭೂಖಂಡಗಳ ನಡುವೆ ಇರುವ ವಿಶಾಲವಾದ ಜಲರಾಶಿಗಳಾಗಿವೆ. ಸಮುದ್ರಗಳು, ಕೊಲ್ಲಿ ಎಂಬಿವುಗಳು ಸಾಗರಗಳ ಭಾಗಗಳಾಗಿವೆ. ಸಾಗರಗಳ ಕುರಿತಾದ ಅಧ್ಯಯನವನ್ನು ಸಾಗರಶಾಸ್ತ್ರ (Oceanography) ಎಂದು ಕರೆಯಲಾಗುತ್ತದೆ. ಸಾಗರಜಲದ ಸಂಕೀರ್ಣವಾದ ಚಲನಶೀಲತೆಯನ್ನು ತಿಳಿಯಲು ಸಾಗರಶಾಸ್ತ್ರವು ಸಹಾಯ ಮಾಡುತ್ತದೆ. ಮಾತ್ರವಲ್ಲದೆ ಹವಾಗುಣ ಬದಲಾವಣೆ, ಸಾಗರ ಮಲಿನೀಕರಣ ಮತ್ತು ಜೀವವೈವಿಧ್ಯದ ಶೋಷಣೆ ಮೊದಲಾದ ಸವಾಲುಗಳನ್ನು ಎದುರಿಸಲು ಸಾಗರ ಶಾಸ್ತ್ರದ ಅಧ್ಯಯನವು ಸಹಾಯಕವಾಗುತ್ತದೆ.

**ಜೂನ್ 8** **ವಿಶ್ವ ಸಾಗರದಿನ**

ಪ್ರತಿ ವರ್ಷ ಜೂನ್ 8 ನ್ನು ವಿಶ್ವ ಸಾಗರದಿನವನ್ನಾಗಿ ಆಚರಿಸುತ್ತೇವೆ. ಸಾಗರಗಳ ಮಹತ್ವವನ್ನು ತಿಳಿಯುವುದು ಇದರ ಪ್ರಧಾನ ಉದ್ದೇಶವಾಗಿದೆ. ಮಾನವರ ಅವೈಜ್ಞಾನಿಕ ಹಸ್ತಕ್ಷೇಪಗಳು ಸಾಗರ ಜೀವಜಾಲ ವ್ಯವಸ್ಥೆಯ ಮೇಲೆ ಪ್ರತಿಕೂಲವಾದ ಪರಿಣಾಮ ಬೀರುತ್ತದೆ. ಆದುದರಿಂದ ಇದು ಸಾಗರಗಳನ್ನು ರಕ್ಷಿಸುವ ಅಗತ್ಯವನ್ನು ನಮಗೆ ನೆನಪಿಸುವ ದಿನವೂ ಆಗಿದೆ.

**ಸಮುದ್ರ:** ಸಮುದ್ರವು ಭಾಗಶಃ ಭೂಮಿಯಿಂದ ಆವೃತವಾದ ನೀರಿನ ಭಾಗವಾಗಿದೆ. ಉದಾ: ಅರಬ್ಬಿ ಸಮುದ್ರ

**ಕೊಲ್ಲಿ:** ಕೊಲ್ಲಿ ಎಂದರೆ ಭೂಮಿಯ ಒಳಭಾಗಕ್ಕೆ ವಿಸ್ತರಿಸಿರುವ ನೀರಿನ ಪ್ರದೇಶ. ಉದಾ: ಬಂಗಾಳ ಕೊಲ್ಲಿ

**ಜಲಸಂಧಿ:** ಜಲಸಂಧಿಯು ಎರಡು ಸಮುದ್ರಗಳು ಅಥವಾ ಸಾಗರಗಳನ್ನು ಜೋಡಿಸುವ ಅಗಲ ಕಿರಿದಾದ ಸಾಗರ ಭಾಗವಾಗಿದೆ.

ಉದಾ: ಪಾಕ್ ಜಲಸಂಧಿ




ಜಾಗತಿಕ ಭೂಪಟವನ್ನು ನಿರೀಕ್ಷಿಸಿ ಸಾಗರಗಳ ಹೆಸರನ್ನು ಪಟ್ಟಿ ಮಾಡಿರಿ.




ಭೂಪಟ 10.1

- ಪೆಸಿಫಿಕ್ ಸಾಗರ
- 
- 
- 
- 

**ಐ.ಎನ್.ಎಸ್.ವಿ ತಾರಿಣಿಯಲ್ಲಿ ಪಾಯಿಂಟ್ ನೆಮೊವನ್ನು ದಾಟಿದ ಭಾರತೀಯ ಮಹಿಳೆಯರು**

ದೆಹಲಿ : ನೌಕಾಸಾಗರ್ ಪರಿಕ್ರಮ II ರ ಭಾಗವಾಗಿ ಸಾಗರ ಮಾರ್ಗವಾಗಿ ಜಗತ್ತನ್ನು ಸುತ್ತಿದ ಭಾರತೀಯ ನೌಕಾಪಡೆಯ ಲೆಫ್ಟಿನೆಂಟ್ ಕಮಾಂಡರುಗಳಾದ ದಿಲ್ನಾ ಕೆ. ಮತ್ತು ರೂಪ ಎ. ಅವರು ಜನವರಿ 30, 2025 ರಂದು 'ಪಾಯಿಂಟ್ ನೆಮೊ' ವನ್ನು ದಾಟಿದರು.

ವಾರ್ತೆಯನ್ನು ಗಮನಿಸಿದಿರಲ್ಲವೇ?

'ಪಾಯಿಂಟ್ ನೆಮೊ' (Point Nemo) ಎಂಬ ಸಾಗರ ಭಾಗದ ಬಗ್ಗೆ ತಿಳಿದಿರುವಿರಾ?

ಪಾಯಿಂಟ್ ನೆಮೊವು ತೀರದಿಂದ ಅತಿ ದೂರದಲ್ಲಿರುವ ಸಾಗರ ಭಾಗವಾಗಿದೆ. ಈ ಬಿಂದುವಿನಿಂದ ಹತ್ತಿರದ ತೀರಕ್ಕೆ ತಲುಪಬೇಕಾದರೆ ಅಂದಾಜು 2,000 ಕಿಲೋಮೀಟರ್‌ಗಿಂತ ಅಧಿಕ ದೂರ ಸಂಚರಿಸಬೇಕು. ಪಾಯಿಂಟ್ ನೆಮೊವು ಪೆಸಿಫಿಕ್ ಸಾಗರದಲ್ಲಿದೆ.

## ಪೆಸಿಫಿಕ್ ಸಾಗರ

ಪೆಸಿಫಿಕ್ ಸಾಗರವು ಅತಿ ದೊಡ್ಡದಾದ ಮತ್ತು ಆಳವಿರುವ ಸಾಗರವಾಗಿದೆ. ಭೂ ಮೇಲ್ಮೈಯ ಮೂರರಲ್ಲಿ ಒಂದು ಭಾಗವು ಈ ಸಾಗರದಿಂದ ಆವರಿಸಲ್ಪಟ್ಟಿದೆ.




ಭೂಪಟ 10.2

**ಪೆಸಿಫಿಕ್**

ವಿಶ್ವ ಸಂಚಾರಿ ಆದ ಫರ್ಡಿನಾಂಡ್ ಮೆಗಲನ್ ಪೆಸಿಫಿಕ್ ಸಾಗರಕ್ಕೆ ಈ ಹೆಸರನ್ನು ನೀಡಿದನು. ಅವರು ಈ ಸಾಗರವನ್ನು 'ಮಾರ್ ಪೆಸಿಫಿಕೊ' ಎಂದು ಕರೆದರು. ಈ ಶಬ್ದಕ್ಕೆ ಶಾಂತ ಎಂಬ ಅರ್ಥವಿದೆ. ಈ ಸಾಗರವು ಅಟ್ಲಾಂಟಿಕ್ ಸಾಗರಕ್ಕಿಂತಲೂ ಶಾಂತವಾಗಿ ಕಂಡುಬರುವುದರಿಂದ ಅವರು ಪೆಸಿಫಿಕ್ ಎಂಬ ಹೆಸರಿಟ್ಟರು.

ಭೂಪಟವನ್ನು ನಿರೀಕ್ಷಿಸಿ ಪೆಸಿಫಿಕ್ ಸಾಗರದೊಂದಿಗೆ ತಾಗಿಕೊಂಡಿರುವ ಭೂಖಂಡಗಳನ್ನು ಕಂಡುಹಿಡಿಯಿರಿ.

ಅತಿ ಹೆಚ್ಚು ದ್ವೀಪಗಳು ಈ ಸಾಗರದಲ್ಲಿ ಕಂಡುಬರುತ್ತವೆ. ಫಿಲಿಪ್ಪೈನ್ಸ್ , ಜಪಾನ್, ಹವಾಯಿ, ನ್ಯೂಜಿಲ್ಯಾಂಡ್ ಮೊದಲಾದವುಗಳು ಪೆಸಿಫಿಕ್ ಸಾಗರದಲ್ಲಿ ಕಂಡು ಬರುವ ಕೆಲವು ಪ್ರಧಾನ ದ್ವೀಪಗಳಾಗಿವೆ. ಮರಿಯಾನ ಟ್ರೆಂಚಿನ ಚಾಲೆಂಜರ್ ಡೀಪ್ ಪೆಸಿಫಿಕ್ ಸಾಗರದ ಅತಿ ಆಳವಾದ ಭಾಗವಾಗಿದೆ.

ಅನೇಕ ಕಂದಕಗಳೂ ಸಕ್ರಿಯ ಅಗ್ನಿ ಪರ್ವತಗಳೂ ಈ ಸಾಗರದ ವಿಶೇಷತೆಗಳಾಗಿವೆ.

ಪೆಸಿಫಿಕ್ ಸಾಗರಕ್ಕೆ ಸಂಬಂಧಿಸಿದ ಪಟ್ಟಿ ಪೂರ್ತಿಗೊಳಿಸಿರಿ.

| ಪ್ರಧಾನ ದ್ವೀಪಗಳು | ಅತಿ ಆಳವಾದ ಭಾಗ | ಗಡಿ ಹಂಚಿಕೊಂಡಿರುವ ಭೂಖಂಡಗಳು |
|---|---|---|
| | | |

## ಅಟ್ಲಾಂಟಿಕ್ ಸಾಗರ

**‘ಟೈಟನ್’ ಎಂಬ ಜಲಾಂತರ್ಗಾಮಿ ನೌಕೆ ನಾಶವಾಯಿತು.**

ವಾಷಿಂಗ್ಟನ್: ಮಾತೃವಾಹಕವಾದ ಪೋಲಾರ್ ಪ್ರಿನ್ಸ್ ಹಡಗಿನ ಜೊತೆಗಿನ ಸಂಪರ್ಕವು ನಷ್ಟ ಹೊಂದಿದ ಕೂಡಲೇ ಸಾಗರವಾಹಕ ನೌಕೆಯಾದ ಟೈಟನ್ ನುಚ್ಚುನೂರಾಯಿತು. 1912 ರಲ್ಲಿ ಅಟ್ಲಾಂಟಿಕ್ ಸಾಗರದಲ್ಲಿ ಮುಳುಗಿಹೋದ ಟೈಟಾನಿಕ್ ಎಂಬ ಐಷಾರಾಮಿ ಹಡಗಿನ ಅವಶೇಷಗಳನ್ನು ನೋಡಲು ಸಾಗರದ ಅಡಿಭಾಗಕ್ಕೆ ಪ್ರಯಾಣ ಮಾಡಿದ ಐದು ಜನರ ಗುಂಪು ಈ ರೀತಿಯಲ್ಲಿ ಅಪಘಾತಕ್ಕೀಡಾಯಿತು.

ವಾರ್ತೆಯಲ್ಲಿ ಉಲ್ಲೇಖಿಸಲಾದ ಅಟ್ಲಾಂಟಿಕ್ ಸಾಗರದ ಹೆಚ್ಚಿನ ವಿಶೇಷತೆಗಳನ್ನು ಪರಿಚಯಿಸಿಕೊಳ್ಳೋಣ.

ಅಟ್ಲಾಂಟಿಕ್ ಸಾಗರವು ಗಾತ್ರದಲ್ಲಿ ಎರಡನೇ ಅತಿ ದೊಡ್ಡ ಸಾಗರವಾಗಿದೆ. ಇದರ ಆಕಾರವು ಇಂಗ್ಲೀಷ್ ಅಕ್ಷರ ಮಾಲೆಯ ‘S’ ಅಕ್ಷರವನ್ನು ಹೋಲುತ್ತದೆ. ವಿಶ್ವದ ಅತ್ಯಂತ ಜನನಿಬಿಡ ಹಡಗು ಮಾರ್ಗವು ಈ ಸಾಗರದಲ್ಲಿದೆ.

ಸಮುದ್ರದ ಬಹುತೇಕ ಮಧ್ಯಭಾಗದಲ್ಲಿ, ಉತ್ತರ-ದಕ್ಷಿಣ ದಿಕ್ಕಿನಲ್ಲಿ ನೆಲೆಗೊಂಡಿರುವ ಸಮುದ್ರದೊಳಗಿನ ಪರ್ವತ ಶ್ರೇಣಿಯಾದ ಮಧ್ಯ-ಅಟ್ಲಾಂಟಿಕ್ ಪರ್ವತ ಶ್ರೇಣಿಯು ಇದರ ಮತ್ತೊಂದು ವಿಶೇಷತೆಯಾಗಿದೆ. ಪ್ಯೂರ್ಟೋರಿಕೊ ಟ್ರೆಂಚಿನ ಮಿಲ್‌ವೊಕಿ ಡೀಪ್ ಈ ಸಾಗರದ ಅತ್ಯಂತ ಆಳವಾದ ಭಾಗವಾಗಿದೆ. ನ್ಯೂಫೌಂಡ್‌ಲ್ಯಾಂಡ್, ಐಸ್ಲ್ಯಾಂಡ್ ಮೊದಲಾದವುಗಳು ಅಟ್ಲಾಂಟಿಕ್ ಸಾಗರದ ಪ್ರಧಾನ ದ್ವೀಪಗಳಾಗಿವೆ.




ಭೂಪಟ 10.3

ಅಟ್ಲಾಸ್, ಗ್ಲೋಬ್ ಮೊದಲಾದವುಗಳ ಸಹಾಯದೊಂದಿಗೆ ಅಟ್ಲಾಂಟಿಕ್ ಸಾಗರದೊಂದಿಗೆ ತಾಗಿಕೊಂಡಿರುವ ಭೂಖಂಡಗಳನ್ನು ಕಂಡುಹಿಡಿಯಿರಿ.

ಸೂಚನೆಗಳ ಆಧಾರದಲ್ಲಿ ಅಟ್ಲಾಂಟಿಕ್ ಸಾಗರದ ಗುರುತು ಚೀಟಿ ತಯಾರಿಸಿರಿ.

**ಹೆಸರು** :

**ಭೌಗೋಳಿಕ ಗಡಿಗಳು** :

**ಪ್ರಧಾನ ದ್ವೀಪಗಳು** :

**ಅತಿ ಆಳವಾದ ಕಂದಕ** :

**ಅಭಿವೃದ್ಧಿಯ ಪಥದಲ್ಲಿ ವಿಝಿಂಝಾಂ ಅಂತಾರಾಷ್ಟ್ರೀಯ ಬಂದರು**

**ಹೊಸ ದಾಖಲೆಯತ್ತ ವಿಝಿಂಝಾಂ**

**ವಿಝಿಂಝಾಂ: ಭಾರತದಿಂದ ಜಗತ್ತಿಗಿರುವ ಹೊಸ ಹೆಬ್ಬಾಗಿಲು**

ವಾರ್ತಾ ಶೀರ್ಷಿಕೆ ಗಮನಿಸಿದಿರಲ್ಲವೇ? ವಿಝಿಂಝಾಂ ಬಂದರು ಯಾವ ಸಾಗರ ತೀರದಲ್ಲಿದೆ?

- 

## ಇಂಡಿಯನ್ ಸಾಗರ (ಹಿಂದೂ ಮಹಾಸಾಗರ)

ಇಂಡಿಯನ್ ಸಾಗರ(ಹಿಂದೂ ಮಹಾಸಾಗರ)ವು ಒಂದು ದೇಶದ ಹೆಸರಲ್ಲಿ ಗುರುತಿಸಲ್ಪಡುವ ಏಕೈಕ ಸಾಗರವಾಗಿದೆ. ಇದು ಗಾತ್ರದಲ್ಲಿ ಮೂರನೆಯ ಸ್ಥಾನವನ್ನು ಪಡೆದಿದೆ.

ಇಂಡಿಯನ್ ಸಾಗರದೊಂದಿಗೆ ತಾಗಿಕೊಂಡಿರುವ ಭೂಖಂಡಗಳನ್ನು ಗುರುತಿಸಿರಿ.




ಭೂಪಟ 10.4

ಬಂಗಾಳಕೊಲ್ಲಿ, ಅರಬ್ಬಿ ಸಮುದ್ರ ಮೊದಲಾದವುಗಳು ಇಂಡಿಯನ್ ಸಾಗರದ ಭಾಗವಾಗಿವೆ. ಜಾವ ಟ್ರೆಂಚ್ ಈ ಸಾಗರದ ಅತಿ ಆಳವಾದ ಪ್ರದೇಶವಾಗಿದೆ. ಅಂಡಮಾನ್ ನಿಕೋಬಾರ್ ದ್ವೀಪಗಳು, ಲಕ್ಷದ್ವೀಪ, ಮಾಲ್ದೀವ್ಸ್, ಶ್ರೀಲಂಕಾ ಮೊದಲಾದವುಗಳು ಈ ಸಮುದ್ರದಲ್ಲಿರುವ ಪ್ರಧಾನ ದ್ವೀಪಗಳಾಗಿವೆ. ಮಲಾಕ್ಕಾ ಜಲಸಂಧಿ ಇಂಡಿಯನ್ ಸಾಗರ ಮತ್ತು ಪೆಸಿಫಿಕ್ ಸಾಗರವನ್ನು ತಮ್ಮೊಳಗೆ ಜೋಡಿಸುತ್ತದೆ.

**ಗ್ಲೋಬ್, ಅಟ್ಲಾಸ್ ಎಂಬಿವುಗಳ ಸಹಾಯದಿಂದ ಇಂಡಿಯನ್ ಸಾಗರದೊಂದಿಗೆ ಗಡಿಗಳನ್ನು ಹಂಚಿಕೊಂಡಿರುವ ದೇಶಗಳನ್ನು ಕಂಡುಹಿಡಿಯಿರಿ.**

## ದಕ್ಷಿಣ ಸಾಗರ

ಗ್ಲೋಬ್, ಅಟ್ಲಾಸ್ ಮೊದಲಾದವುಗಳನ್ನು ನಿರೀಕ್ಷಿಸಿ ಅಂಟಾರ್ಟಿಕ್ ಭೂಖಂಡವನ್ನು ಆವರಿಸಿಕೊಂಡಿರುವ ಸಾಗರವನ್ನು ಕಂಡುಹಿಡಿಯಿರಿ.










**ಭೂಪಟ 10.5**

ಅಂಟಾರ್ಟಿಕ್‌ನ ಸುತ್ತಲೂ ಅಂದಾಜು 60 ಡಿಗ್ರಿ ದಕ್ಷಿಣ ಅಕ್ಷಾಂಶದವರೆಗೆ ದಕ್ಷಿಣ ಸಾಗರ ಆವರಿಸಿಕೊಂಡಿದೆ. ಆರ್ಟಿಕ್ ಬಿಟ್ಟು ಉಳಿದೆಲ್ಲಾ ಸಾಗರಗಳೊಂದಿಗೆ ಗಡಿ ಹಂಚಿಕೊಂಡಿರುವ ಈ ಸಾಗರವು ಗಾತ್ರದಲ್ಲಿ ನಾಲ್ಕನೇ ಸ್ಥಾನದಲ್ಲಿದೆ. ಡೋಲ್‌ಮೆನ್, ಹೇಡ್ ಮೊದಲಾದವುಗಳು ಈ ಸಮುದ್ರದ ಕೆಲವು ದ್ವೀಪಗಳಾಗಿವೆ. ಸೌತ್ ಸ್ಯಾಂಡಿವಿಚ್ ಟ್ರೆಂಚಿನ ಫಾಕ್ಟೋರಿಯನ್ ಕಂದಕವು ಇಲ್ಲಿಯ ಅತ್ಯಂತ ಆಳವಾದ ಭಾಗವಾಗಿದೆ.

## ಆರ್ಟಿಕ್ ಸಾಗರ

ಹೆಚ್ಚಿನ ಭಾಗವು ಆರ್ಟಿಕ್ ವೃತ್ತದೊಳಗಿರುವ ಸಾಗರವಾಗಿದೆ. ಆರ್ಟಿಕ್ ಸಾಗರದಲ್ಲಿ ಉತ್ತರ ಧ್ರುವವಿದೆ. ಇದು ಅತಿ ಚಿಕ್ಕ ಮತ್ತು ಆಳ ಕಡಿಮೆಯಿರುವ ಸಾಗರವಾಗಿದೆ. ವರ್ಷದ ಹೆಚ್ಚಿನ ಭಾಗವೂ ಇಲ್ಲಿ ಮಂಜುಗಡ್ಡೆಯಾಗಿರುತ್ತದೆ. ಮೊಲ್ಲೋಯ್ ಕಂದಕವು ಈ ಸಾಗರದ ಅತಿ ಆಳವಾದ ಭಾಗವಾಗಿದೆ. ಆರ್ಟಿಕ್ ಸಾಗರವು ಏಷ್ಯಾ, ಯುರೋಪ್, ಉತ್ತರ ಅಮೆರಿಕ ಎಂಬೀ ಭೂಖಂಡಗಳ ಉತ್ತರ ಗಡಿಯಾಗಿದೆ.

ಸಾಗರಗಳಿಗೆ ಸಂಬಂಧಿಸಿದ ವರ್ಕ್ ಶೀಟ್ ಪೂರ್ತಿಗೊಳಿಸಿರಿ.

| ಸಾಗರಗಳು | ಗಾತ್ರಕ್ಕೆ ಹೊಂದಿಕೊಂಡು | ಆಳವಾದ ಭಾಗ | ಪ್ರಧಾನ ದ್ವೀಪಗಳು |
|---|---|---|---|
| ದಕ್ಷಿಣ ಸಾಗರ | | | |
| ಆರ್ಟಿಕ್ ಸಾಗರ | | | |
| ಪೆಸಿಫಿಕ್ ಸಾಗರ | | | |
| ಅಟ್ಲಾಂಟಿಕ್ ಸಾಗರ | | | |
| ಇಂಡಿಯನ್ ಸಾಗರ | | | |

## ಸಾಗರಜಲವೂ ಚಲನೆಗಳೂ




ಶೈಕ್ಷಣಿಕ ಪ್ರವಾಸದ ಭಾಗವಾಗಿ ಮೊದಲ ಸಲ ಸಮುದ್ರ ನೋಡಲು ಇಡುಕ್ಕಿಯಿಂದ ಹೋದ ದಿಯಾಳ ಅನುಭವ ಟಿಪ್ಪಣಿಯನ್ನು ಓದಿದಿರಲ್ಲವೆ.

ಅಲೆಗಳು ಎಂದರೇನು?

ಅಲೆಗಳೆಂದರೆ ಗಾಳಿಯು ಸಾಗರದ ಮೇಲ್ಮೈಯಲ್ಲಿ ಉಂಟು ಮಾಡುವ ಚಲನೆಗಳಾಗಿವೆ. ಗಾಳಿಯು ಉಂಟು ಮಾಡುವ ಶಕ್ತಿಯುತವಾದ ಪ್ರವಾಹಗಳು ಸಾಗರದ ಮೇಲ್ಮೈಯಲ್ಲಿ ಏರಿಳಿತಗಳನ್ನು ಉಂಟುಮಾಡುತ್ತವೆ. ನೀರಿನ ಮೇಲ್ಮೈಗೆ ಗಾಳಿ ಸ್ಪರ್ಶಿಸಿದಾಗ ಸಾಧಾರಣವಾಗಿ ಅಲೆಗಳು ಉಂಟಾಗುತ್ತವೆ. ಸಾಗರ ನೀರಿನ ಈ ನಿರಂತರ ಏರಿಳಿತಗಳು ಅಲೆಗಳಾಗಿವೆ.

ಗಾಳಿಯ ವೇಗವು ಹೆಚ್ಚಾಗುವುದಕ್ಕೆ ಅನುಸಾರವಾಗಿ ಅಲೆಗಳ ಗಾತ್ರಗಳು ಹೆಚ್ಚಾಗುತ್ತವೆ. ಅಲೆಗಳಲ್ಲದೆ ಸಾಗರ ನೀರಿನ ಚಲನೆಗಳಲ್ಲಿ ಉಬ್ಬರವಿಳಿತಗಳು ಮತ್ತು ಸಾಗರ ಪ್ರವಾಹಗಳು ಸೇರಿವೆ. ಅವುಗಳನ್ನು ವಿವರವಾಗಿ ಪರಿಶೀಲಿಸೋಣ.

ಉಬ್ಬರವಿಳಿತಗಳು ಎಂದರೆ ಸಾಗರದ ನೀರು ನಿಯಮಿತ ಅಂತರದಲ್ಲಿ ಏರಿಳಿತಗಳಿಗೊಳಗಾಗುವ ವಿದ್ಯಮಾನವಾಗಿದೆ. ಸಾಗರದ ನೀರಿನ ಮಟ್ಟದಲ್ಲಿನ ಏರಿಕೆಯನ್ನು ಉಬ್ಬರವೆಂದೂ ಕುಸಿತವನ್ನು ಇಳಿಕೆ ಎಂದೂ ಕರೆಯುತ್ತಾರೆ.

ಸಾಗರದ ಒಳಭಾಗದ ಮೂಲಕ ನದಿಗಳು ಹರಿಯುವುದೆಂದು ಭಾವಿಸಿರಿ. ಸಾಗರದ ಜಲವು ಕಿಲೋಮೀಟರ್‌ಗಳ ವರೆಗೆ ನದಿಗಳಂತೆ ಸಾಗರದೊಳಗೆ ಹರಿಯುತ್ತದೆ. ಹೀಗೆ ಸಾಗರದಲ್ಲಿ ನಿಶ್ಚಿತ ದಿಕ್ಕಿನ ಕಡೆಗೆ ನಿಶ್ಚಿತ ದಾರಿಯಲ್ಲಿ ನಿರಂತರವಾಗಿ ನೀರು ಹರಿಯುವ ವಿದ್ಯಮಾನವನ್ನು ಸಾಗರಪ್ರವಾಹ ಎಂದು ಕರೆಯುತ್ತಾರೆ. ಎಲ್ಲಾ ಸಾಗರಗಳಲ್ಲಿಯೂ ಇಂತಹ ನೀರಿನ ಹರಿವುಗಳುಂಟು.

### ಉಬ್ಬರ-ಇಳಿತಗಳು

ಉಬ್ಬರ ಇಳಿತಗಳೆಂದರೆ ಚಂದ್ರ ಮತ್ತು ಸೂರ್ಯನ ಗುರುತ್ವಾಕರ್ಷಣೆಯ ಬಲ ಮತ್ತು ಕೇಂದ್ರಪಗಾಮಿ ಬಲಗಳಿಂದ ಉಂಟಾಗುವ ಸಾಗರಮಟ್ಟದಲ್ಲಿನ ಏರಿಕೆ ಮತ್ತು ಕುಸಿತಗಳಾಗಿವೆ. ಗುರುತ್ವಾಕರ್ಷಣೆಯ ಬಲದಿಂದಾಗಿ ಚಂದ್ರನತ್ತ ಮುಖ ಮಾಡಿರುವ ಭೂಮಿಯ ಬದಿಯಲ್ಲಿ ಮತ್ತು ಕೇಂದ್ರಪಗಾಮಿ ಬಲದಿಂದಾಗಿ ವಿರುದ್ಧ ದಿಕ್ಕಿನಲ್ಲಿ ಉಬ್ಬರಗಳು ಏಕಕಾಲದಲ್ಲಿ ಸಂಭವಿಸುತ್ತವೆ. ಈ ಸಮಯದಲ್ಲಿ ಭೂಮಿಯ ಇತರ ಸಾಗರ ಭಾಗಗಳಲ್ಲಿ ಇಳಿತಗಳು ಸಂಭವಿಸುತ್ತವೆ.

### ಸಾಗರ ಜಲಪ್ರವಾಹಗಳು

ಸಾಗರದಲ್ಲಿ ನಿಶ್ಚಿತ ಹಾದಿಯಲ್ಲಿ ಸಾಗರದ ನೀರು ನಿರಂತರವಾಗಿ ಹರಿಯುವ ವಿದ್ಯಮಾನವನ್ನು ಸಾಗರ ಜಲ ಪ್ರವಾಹ ಎನ್ನುವರು. ಗಾಳಿ, ಸಾಗರಜಲದ ತಾಪಮಾನದಲ್ಲಿನ ವ್ಯತ್ಯಾಸ, ಲವಣಾಂಶದಲ್ಲಿನ ವ್ಯತ್ಯಾಸಗಳು, ಭೂಮಿಯ ಭ್ರಮಣ ಮೊದಲಾದವುಗಳು ಸಾಗರ ಜಲಪ್ರವಾಹಕ್ಕೆ ಕೆಲವು ಕಾರಣಗಳಾಗಿವೆ.

ಆಶಯ ಚಿತ್ರವನ್ನು ಪೂರ್ತಿಗೊಳಿಸಿರಿ.

**ಸಾಗರ ಜಲಚಲನೆಗಳು**

| | | |
|---|---|---|
| ........................ <br> ಗಾಳಿಯು ಸಾಗರದ ಮೇಲ್ಮೈಯಲ್ಲಿ ಉಂಟುಮಾಡುವ ಚಲನೆ | ಉಬ್ಬರ ಇಳಿತಗಳು <br> ........................ <br> ........................ | ........................ <br> ........................ <br> ........................ |

ದಿಯಾ ಸಾಗರದ ನೀರಿನ ರುಚಿ ನೋಡಿದ ಅನುಭವದ ಬಗ್ಗೆ ನೀವು ಓದಿದ್ದೀರಲ್ಲವೆ?

ಸಾಗರದ ನೀರಿಗೆ ಉಪ್ಪು ರುಚಿ ಯಾಕೆ ಎಂದು ನಿಮಗೆ ಗೊತ್ತಿದೆಯೆ?

ಎಲ್ಲಾ ಮೂಲಗಳಿಂದ ಲಭಿಸುವ ನೀರಿನಲ್ಲೂ ಕರಗಿದ ರೂಪದಲ್ಲಿ ಖನಿಜಲವಣಗಳು ಇರುತ್ತವೆ. ಹಾಗಿದ್ದರೂ ಸಾಗರದ ನೀರಿನಲ್ಲಿ ಲವಣಾಂಶದ ಪ್ರಮಾಣವು ಅಧಿಕವಾಗಿದೆ. ಆದುದರಿಂದ ಸಾಗರದ ನೀರು ಉಪ್ಪು ರುಚಿಯಾಗಿದೆ. ನೀರಿನಲ್ಲಿ ಕರಗಿ ಸೇರಿದ ಎಲ್ಲಾ ಮೂಲವಸ್ತುಗಳ ಒಟ್ಟು ಪ್ರಮಾಣವೇ ಲವಣತ್ವವಾಗಿದೆ.

## ಸಾಗರವೂ ಮಾನವರೂ

ಸಾಗರಗಳು ಅಮೂಲ್ಯವಾದ ಸಂಪನ್ಮೂಲಗಳ ಮೂಲವಾಗಿವೆ. ಸಾಗರಗಳು ನಮ್ಮ ಜೀವನದ ಮೇಲೆ ಹೇಗೆ ಪರಿಣಾಮ ಬೀರುತ್ತವೆ? ಚಿತ್ರವನ್ನು ಗಮನಿಸಿ ಪಟ್ಟಿ ಮಾಡಿರಿ.




- ಹವಾಗುಣವನ್ನು ನಿಯಂತ್ರಿಸುತ್ತದೆ.
- 
- 
- 

ಪ್ರಾಚೀನ ಕಾಲದಿಂದಲೂ ಮಾನವರು ತಮ್ಮ ಜೀವನೋಪಾಯಕ್ಕಾಗಿ ಸಾಗರಗಳನ್ನು ಅವಲಂಬಿಸಿದ್ದಾರೆ. ಮತ್ಸ್ಯಸಂಪತ್ತಿನ ಜೊತೆಗೆ ಸಾಗರಗಳು ಇತರ ಅಮೂಲ್ಯ ಸಂಪನ್ಮೂಲಗಳನ್ನು ಒದಗಿಸುತ್ತವೆ. ಸಾಗರ ಮಾರ್ಗಗಳ ಮೂಲಕ ಅಂತಾರಾಷ್ಟ್ರೀಯ ವ್ಯಾಪಾರ ಸಂಬಂಧಗಳನ್ನು ಬೆಳೆಸಲು ಸಾಗರಗಳು ಸಹಾಯ ಮಾಡುತ್ತವೆ. ಜಾಗತಿಕ ತಾಪಮಾನ ಏರಿಕೆಯನ್ನು ನಿಯಂತ್ರಿಸುವಲ್ಲಿ ಮತ್ತು ಆಮ್ಲಜನಕವನ್ನು ಉತ್ಪಾದಿಸುವಲ್ಲಿ ಸಾಗರಗಳು ಮಹತ್ವದ ಪಾತ್ರ ವಹಿಸುತ್ತವೆ. ಸಾಗರ ಕರಾವಳಿಗಳು ಜನಪ್ರಿಯ ಪ್ರವಾಸಿ ತಾಣಗಳಾಗಿವೆ.

## ಸಾಗರ ಜಲ ಮಲಿನೀಕರಣ



ಚಿತ್ರ 10.3



ಚಿತ್ರ 10.4



ಚಿತ್ರ 10.5



ಚಿತ್ರ 10.6

ಚಿತ್ರಗಳನ್ನು ಗಮನಿಸಿದಿರಲ್ಲವೆ.

ಇಂತಹ ದೃಶ್ಯಗಳು ನಿಮಗೆ ಪರಿಚಿತವೇ?

ಸಾಗರಗಳು ಅನೇಕ ಸವಾಲುಗಳನ್ನು ಎದುರಿಸುತ್ತವೆ. ಮಲಿನೀಕರಣವು ಸಾಗರಗಳು ಎದುರಿಸುತ್ತಿರುವ ಪ್ರಮುಖ ಸಮಸ್ಯೆಯಾಗಿದೆ. ರಾಸಾಯನಿಕಗಳು ಮತ್ತು ಇತರ ಹಾನಿಕಾರಕ ವಸ್ತುಗಳು ಸಾಗರವನ್ನು ಸೇರುವುದು ಸಾಗರದ ಜೀವಪರಿಸ್ಥಿತಿ ವ್ಯವಸ್ಥೆಗಳಿಗೆ ಬೆದರಿಕೆಯಾಗಿದೆ. ಮಾಲಿನ್ಯವು ಸಾಗರಗಳ ಮೇಲೆ ಮಾತ್ರವಲ್ಲದೆ ನದಿಗಳು ಮತ್ತು ಸರೋವರಗಳಂತಹ ಸಿಹಿ ನೀರಿನ ಮೂಲಗಳ ಮೇಲೂ ಪರಿಣಾಮ ಬೀರುತ್ತದೆ.

## ಸಾಗರಜಲ ಸಂರಕ್ಷಣಾ ಮಾರ್ಗಗಳು

ಸಾಗರಜಲ ಸಂರಕ್ಷಣಾ ಮಾರ್ಗಗಳನ್ನು ಪರಿಶೋಧಿಸೋಣ.

- ಪ್ಲಾಸ್ಟಿಕ್, ರಾಸಾಯನಿಕಗಳು, ಇತ್ಯಾದಿಗಳು ಸಾಗರಗಳನ್ನು ಸೇರುವುದನ್ನು ತಡೆಯುವುದು.
- ಸಾಗರ ತೀರಗಳನ್ನು ಮಾಲಿನ್ಯಮುಕ್ತಗೊಳಿಸಿ ಸಂರಕ್ಷಿಸುವುದು.
- ಸಾಗರಗಳ ಸಂರಕ್ಷಣೆಯ ಕುರಿತು ಜಾಗೃತಿ ಮೂಡಿಸುವುದು.
- ಅವೈಜ್ಞಾನಿಕ ಮೀನುಗಾರಿಕೆಯನ್ನು ನಿಯಂತ್ರಿಸುವುದು.
- ಸಾಗರದ ಜೀವಪರಿಸ್ಥಿತಿ ವ್ಯವಸ್ಥೆಗಳನ್ನು ಸಂರಕ್ಷಿಸುವುದು.
- 

ಸಾಗರಜಲ ಸಂರಕ್ಷಣೆಯ ಮಹತ್ವವನ್ನು ಸೂಚಿಸುವ ಘೋಷಣಾ ವಾಕ್ಯಗಳನ್ನು ತಯಾರಿಸಿರಿ.

ಸಾಗರಗಳು ಮತ್ತು ಅವುಗಳ ವಿಶೇಷತೆಗಳನ್ನು ತಿಳಿದುಕೊಂಡಿದ್ದೇವೆ. ಸೂಕ್ಷ್ಮಜೀವಿಗಳಿಂದ ತಿಮಿಂಗಿಲದವರೆಗೆ ವಿಭಿನ್ನ ಜೀವರಾಶಿಗಳು, ವೈವಿಧ್ಯಮಯವಾದ ಸಸ್ಯಜಾಲಗಳನ್ನೊಳಗೊಂಡಿರುವ ಸಾಗರ ಜೀವಪರಿಸ್ಥಿತಿ ವ್ಯವಸ್ಥೆಯನ್ನು ಸಂರಕ್ಷಿಸುವುದು ಅತ್ಯಗತ್ಯ. ನೀರಿನ ದುರುಪಯೋಗ ಮತ್ತು ಮಲಿನೀಕರಣವು ಭೂಮಿಯ ಮೇಲಿನ ಜೀವರಾಶಿಗಳ ಅಸ್ತಿತ್ವಕ್ಕೆ ಅಪಾಯವನ್ನುಂಟುಮಾಡುತ್ತದೆ. ಆದುದರಿಂದ ಜಲ ಸಂರಕ್ಷಣೆಗೆ ನಾವೆಲ್ಲ ಕೈಜೋಡಿಸೋಣ. ಭೂಮಿಯು ಯಾವಾಗಲೂ ಜಲಗ್ರಹವಾಗಿ ಉಳಿಯಲಿ.

## ಮುಂದುವರಿದ ಚಟುವಟಿಕೆಗಳು

- ಸಾಗರಗಳು ಮತ್ತು ಅವುಗಳ ವಿಶೇಷತೆಗಳ ಕುರಿತು ಹೆಚ್ಚಿನ ಮಾಹಿತಿ ಸಂಗ್ರಹಿಸಿ ಪ್ರಸೆಂಟೇಶನ್ ತಯಾರಿಸಿರಿ.
- ಜಲ ಮಾಲಿನ್ಯಕ್ಕೆ ಸಂಬಂಧಿಸಿದ ಪತ್ರಿಕಾ ವರದಿಗಳು, ಚಿತ್ರಗಳನ್ನು ಸಂಗ್ರಹಿಸಿ ಡಿಜಿಟಲ್ ಆಲ್ಬಂ ತಯಾರಿಸಿರಿ.
- ಸಮಾಜ ವಿಜ್ಞಾನ ಕ್ಲಬ್ಬಿನ ನೇತೃತ್ವದಲ್ಲಿ 'ಸಾಗರ ದಿನ'ಕ್ಕೆ ಸಂಬಂಧಿಸಿ 'ಸಾಗರವೂ ಮಾನವರೂ' ಎಂಬ ವಿಷಯದ ಕುರಿತು ಭಾಷಣ ಸ್ಪರ್ಧೆಯನ್ನು ಆಯೋಜಿಸಿರಿ.




# 11

# ಸೇರಿಸೋಣ... ಕಾಯ್ದಿರಿಸೋಣ...




ಚಿತ್ರ 11.1




ಚಿತ್ರ 11.2

ಟೀಚರ್ ಮತ್ತು ಮಕ್ಕಳ ನಡುವಿನ ಸಂಭಾಷಣೆಯನ್ನು ಗಮನಿಸಿದಿರಲ್ಲವೆ. ಅವರು ಯಾವುದರ ಕುರಿತು ಮಾತನಾಡಿದರು?

•

ನಿಮಗೆಲ್ಲರಿಗೂ ಬ್ಯಾಂಕ್ ಖಾತೆಗಳಿವೆಯೇ? ಬ್ಯಾಂಕ್ ಮತ್ತು ಬ್ಯಾಂಕ್ ಅಕೌಂಟ್‌ಗಳ ಕುರಿತು ನಾವು ಪರಿಶೀಲಿಸುವ. ಬ್ಯಾಂಕ್ ಎಂದರೇನು?

> ಕೆಲವು ಮಾನದಂಡಗಳನ್ನು ಅನುಸರಿಸಿ ಸಾರ್ವಜನಿಕರಿಂದ ಹಣವನ್ನು ಠೇವಣಿಗಳಾಗಿ ಸ್ವೀಕರಿಸುವ ಮತ್ತು ಅಗತ್ಯ ಇರುವವರಿಗೆ ಸಾಲ ನೀಡುವ ಹಣಕಾಸು ಸಂಸ್ಥೆಗಳು ಬ್ಯಾಂಕುಗಳಾಗಿವೆ.

ಇಂದಿನ ಬ್ಯಾಂಕುಗಳು ಹೇಗೆ ಅಸ್ತಿತ್ವಕ್ಕೆ ಬಂದವು ಎಂಬುದನ್ನು ಪರಿಶೀಲಿಸೋಣ.

## ಬ್ಯಾಂಕುಗಳ ರೂಪೀಕರಣ

ಉಳಿಕೆಯಾದ ಹಣವನ್ನು ಅಗತ್ಯವಿರುವ ವ್ಯಕ್ತಿಗಳಿಗೆ ಸಾಲ ನೀಡಲು ಆರಂಭಿಸಿರುವುದು ಪ್ರಾದೇಶಿಕ ಹಣ ವ್ಯವಹಾರ ನಡೆಸುವ ವ್ಯಕ್ತಿಗಳ ಸೃಷ್ಟಿಗೆ (Local Money Lenders)ಕಾರಣವಾಯಿತು. ಸಾಲದ ಅಗತ್ಯವಿರುವ ಜನರು ಹೆಚ್ಚಾದಂತೆ ಸಾಲ ನೀಡುವವರು ಹೆಚ್ಚಿನ ಹಣವನ್ನು ಕಂಡುಕೊಳ್ಳಬೇಕಾಯಿತು. ಇದಕ್ಕಾಗಿ ಅವರು ಠೇವಣಿಗಳನ್ನು ಸ್ವೀಕರಿಸಬೇಕಾಗಿ ಬಂದುದು, ಹಣದ ವ್ಯವಹಾರದ ಸಂಸ್ಥೆಗಳ ರೂಪೀಕರಣಕ್ಕೆ ದಾರಿ ಮಾಡಿ ಕೊಟ್ಟಿತು. ಹಣ ಮರುಪಾವತಿಗಿರುವ ಸಾಮರ್ಥ್ಯ, ನಂಬಿಕೆ ಇತ್ಯಾದಿ ಮಾನದಂಡಗಳ ಆಧಾರದಲ್ಲಿ ಈ ಸಂಸ್ಥೆಗಳು ಅಗತ್ಯವಿರುವವರಿಗೆ ಹಣವನ್ನು ಸಾಲವಾಗಿ ನೀಡುತ್ತಿದ್ದವು. ಕ್ರಮೇಣ ಠೇವಣಿ ಸ್ವೀಕಾರ ಮತ್ತು ಸಾಲ ನೀಡುವಿಕೆ ಹೆಚ್ಚಾದಾಗ ವ್ಯಕ್ತಿಗಳಿಗೆ ಈ ಕಾರ್ಯವನ್ನು ಸ್ವಂತವಾಗಿ ನಿರ್ವಹಿಸಿಕೊಂಡು ಹೋಗಲು ಸಾಧ್ಯವಾಗಲಿಲ್ಲ. ಇದು ಬ್ಯಾಂಕ್‌ನಂತಹ ಹಣಕಾಸು ಸಂಸ್ಥೆಗಳ ಉದಯಕ್ಕೆ ದಾರಿ ಮಾಡಿಕೊಟ್ಟಿತು.

### ಹಣ ಎಂದರೇನು?

ಸರಕು ಮತ್ತು ಸೇವೆಗಳ ವಿನಿಮಯಕ್ಕೆ ಬದಲಾಗಿ ಸ್ವೀಕರಿಸುವ ಯಾವುದನ್ನೂ ಸಾಮಾನ್ಯವಾಗಿ ಹಣ ಎಂದು ಕರೆಯಬಹುದು. ಹಣವು ಸರಕು ಮತ್ತು ಸೇವೆಗಳ ಮೌಲ್ಯವನ್ನು ನಿರ್ಧರಿಸಲು ಮತ್ತು ಅವುಗಳ ವಿನಿಮಯವನ್ನು ಸುಗಮಗೊಳಿಸಲು ಸಹಾಯ ಮಾಡುತ್ತದೆ.







### ಬ್ಯಾಂಕ್

ಇಟಾಲಿಯನ್ ಪದಗಳಾದ ಬಾಂಕ (Banca) ಮತ್ತು ಫ್ರೆಂಚ್ ಭಾಷೆಯ ಬಾಂಕ್ (Banque) ಎಂಬೀ ಪದಗಳಿಂದ ಇಂಗ್ಲಿಷ್ ಭಾಷೆಯ ಬ್ಯಾಂಕ್ (Bank) ಎಂಬ ಪದ ಉಂಟಾಯಿತು. ಎರಡೂ ಪದಗಳ ಅರ್ಥ ಬೆಂಚು ಎಂಬುದಾಗಿದೆ. ಹಿಂದೆ ಇಟಲಿಯ ಬೀದಿಗಳಲ್ಲಿ ಚಿನ್ನ ಮತ್ತು ಬೆಳ್ಳಿಯನ್ನು ಒತ್ತೆಯಾಗಿ ಸ್ವೀಕರಿಸಿ ವ್ಯಾಪಾರಿಗಳು ಹಣವನ್ನು ಸಾಲವಾಗಿ ಕೊಡುತ್ತಿದ್ದರು. ನಾಣ್ಯಗಳನ್ನು ಸಾಲಾಗಿ ಇರಿಸಿ ಬೆಂಚುಗಳಲ್ಲಿ ಕುಳಿತು ಅವರು ಈ ವ್ಯವಹಾರವನ್ನು ನಡೆಸುತ್ತಿದ್ದರು.

ಸ್ಥಳೀಯ ಹಣದ ವ್ಯವಹಾರ ಸಂಸ್ಥೆಗಳು ಬ್ಯಾಂಕುಗಳಾಗಿ ಬೆಳೆದಾಗ ಆರ್ಥಿಕ ಚಟುವಟಿಕೆಗಳಲ್ಲಿ ಏನೆಲ್ಲ ಬದಲಾವಣೆಗಳು ಉಂಟಾದವು ಎಂದು ನೋಡೋಣ.

ಹೆಚ್ಚಿನವರಿಗೆ ಸಾಲ ದೊರೆಯಲು ಆರಂಭವಾಯಿತು.

ಶೋಷಣೆಯ ಮಟ್ಟವು ಕಡಿಮೆಯಾಯಿತು.

ಜನರಿಗೆ ಉಳಿತಾಯದ ಹವ್ಯಾಸ ಹೆಚ್ಚಾಯಿತು.

ಭಾರತದಲ್ಲಿ ಇಂಗ್ಲೀಷ್ ಈಸ್ಟ್ ಇಂಡಿಯಾ ಕಂಪೆನಿಯ ಆಗಮನದೊಂದಿಗೆ ಹೊಸ ಬ್ಯಾಂಕಿಂಗ್ ವ್ಯವಸ್ಥೆಯು ಆರಂಭವಾಯಿತು. 1770ರಲ್ಲಿ ಸ್ಥಾಪನೆಯಾದ 'ಬ್ಯಾಂಕ್ ಆಫ್ ಹಿಂದುಸ್ತಾನ್' ಭಾರತದ ಮೊದಲ ಬ್ಯಾಂಕ್ ಆಗಿದೆ. 1899ರಲ್ಲಿ ಸ್ಥಾಪನೆಯಾದ ಕಲ್ಲಿಕೋಟೆಯಲ್ಲಿ ಪ್ರಧಾನ ಕಛೇರಿ ಇರುವ ನೆಡುಂಗಾಡಿ ಬ್ಯಾಂಕ್ ಕೇರಳದ ಮೊದಲ ಬ್ಯಾಂಕ್ ಆಗಿರುತ್ತದೆ. ಅಪ್ಪು ನೆಡುಂಗಾಡಿ ಈ ಬ್ಯಾಂಕಿನ ಸ್ಥಾಪಕರು.

1935 ರಲ್ಲಿ ಸ್ಥಾಪನೆಯಾದ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾವು ಭಾರತದ ಕೇಂದ್ರ ಬ್ಯಾಂಕ್ ಆಗಿರುತ್ತದೆ. ಇದರ ಪ್ರಧಾನ ಕಛೇರಿ ಮುಂಬೈಯಲ್ಲಿದೆ.

ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಪ್ರಧಾನ ಕಾರ್ಯಗಳು ಯಾವುವು ಎಂದು ಪರಿಶೋಧಿಸುವ.

## ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ

**ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ**

- ಒಂದು ರೂಪಾಯಿ ನೋಟು ಹೊರತುಪಡಿಸಿ ಉಳಿದೆಲ್ಲಾ ಕರೆನ್ಸಿ ನೋಟುಗಳನ್ನು ಮುದ್ರಿಸುತ್ತದೆ.
- ಸಾಲಗಳನ್ನು ನಿಯಂತ್ರಿಸುತ್ತದೆ.
- ಬ್ಯಾಂಕ್‌ಗಳ ಬ್ಯಾಂಕ್ ಆಗಿ ಕಾರ್ಯ ನಿರ್ವಹಿಸುತ್ತದೆ.
- ಸರಕಾರದ ಬ್ಯಾಂಕ್ ಆಗಿ ಕಾರ್ಯ ನಿರ್ವಹಿಸುತ್ತದೆ.

**ರಿಸರ್ವ್ ಬ್ಯಾಂಕಿನ ಮಾಹಿತಿಗಳನ್ನು ಒಳಗೊಂಡ ವಾಚನ ಕಾರ್ಡು ತಯಾರಿಸಿರಿ.**

ಹೆಸರು :
ಸ್ಥಾಪನೆ :
ಕಾರ್ಯಗಳು :

## ಬ್ಯಾಂಕ್‌ಗಳ ಕಾರ್ಯಚಟುವಟಿಕೆ



ಆಸ್ತಿ ಮಾರಾಟದಿಂದ ಬಂದ 5 ಲಕ್ಷ ರೂಪಾಯಿ ನನ್ನ ಕೈಯಲ್ಲಿ ಇದೆ. ಮುಂದಿನ ವರ್ಷ ಮಗಳ ಉನ್ನತ ಶಿಕ್ಷಣಕ್ಕೆ ಇದು ಬೇಕಾಗುತ್ತದೆ. ಅಲ್ಲಿಯವರೆಗೆ ಈ ಹಣದಿಂದ ನಾನು ಆದಾಯ ಗಳಿಸಲು ಬಯಸುತ್ತೇನೆ.

ನಾನು ಖರೀದಿಸಲು ಬಯಸುವ ಮನೆಗೆ 12 ಲಕ್ಷ ರೂಪಾಯಿಗಳು. ನನ್ನ ಬಳಿ ಕೇವಲ 5 ಲಕ್ಷ ರೂಪಾಯಿ ಮಾತ್ರ ಇದೆ. ಉಳಿದ 7 ಲಕ್ಷ ರೂಪಾಯಿಗಳನ್ನು ನಾನು ಸಾಲವಾಗಿ ಪಡೆಯಬಹುದು. ನಾನು ಅದನ್ನು 15 ವರ್ಷದೊಳಗೆ ಕಂತುಗಳಲ್ಲಿ ಪಾವತಿಸಬಹುದು.



ಎರಡು ಸನ್ನಿವೇಶಗಳನ್ನು ಗಮನಿಸಿ. ಎರಡು ವ್ಯಕ್ತಿಗಳ ಅಗತ್ಯಗಳು ಯಾವುವು?

ವ್ಯಕ್ತಿಗಳ ಇಂತಹ ಅಗತ್ಯಗಳನ್ನು ಬ್ಯಾಂಕುಗಳು ಪೂರೈಸುತ್ತವೆ. ಠೇವಣಿದಾರರು ಮತ್ತು ಸಾಲಗಾರರ ನಡುವೆ ಮಧ್ಯವರ್ತಿಗಳಾಗಿ ಬ್ಯಾಂಕುಗಳು ಕಾರ್ಯನಿರ್ವಹಿಸುತ್ತವೆ. ಸಾರ್ವತ್ರಿಕ ಕಾನೂನು ಸಂಹಿತೆ ಮತ್ತು ಮಾನದಂಡಗಳ ಆಧಾರದ ಮೇಲೆ ಇವು ಕಾರ್ಯ ನಿರ್ವಹಿಸುತ್ತವೆ.

**ಚಿತ್ರವನ್ನು ನಿರೀಕ್ಷಿಸಿ ಪಟ್ಟಿಯನ್ನು ಪೂರ್ತಿಗೊಳಿಸಿರಿ.**




| ಠೇವಣಿದಾರರು | ಸಾಲ ಸ್ವೀಕರಿಸುವವರು |
|---|---|
| • | • |
| • | • |
| • | • |

ಬ್ಯಾಂಕುಗಳು ಜನರಿಂದ, ಸಂಸ್ಥೆಗಳಿಂದ ಮತ್ತು ಸರಕಾರದಿಂದ ಠೇವಣಿಗಳನ್ನು ಸ್ವೀಕರಿಸುತ್ತವೆ. ನಿರ್ದಿಷ್ಟ ಅವಧಿಯ ನಂತರ ಬ್ಯಾಂಕ್ ಠೇವಣಿಗಳನ್ನು ಬಡ್ಡಿಯೊಂದಿಗೆ ಹಿಂದಿರುಗಿಸುತ್ತದೆ. ಅಂತಹ ಠೇವಣಿಗಳಿಂದ ಅಗತ್ಯ ಇರುವವರಿಗೆ ಬ್ಯಾಂಕ್ ಹಣವನ್ನು ಸಾಲವಾಗಿ ನೀಡುತ್ತದೆ. ಸಾಲಗಾರರು ಈ ಮೊತ್ತವನ್ನು ಬಡ್ಡಿಯೊಂದಿಗೆ ಬ್ಯಾಂಕ್‌ಗೆ ಮರುಪಾವತಿಸುತ್ತಾರೆ. ಬ್ಯಾಂಕಿಂಗ್ ವ್ಯವಹಾರವನ್ನು ನಿರ್ವಹಿಸುವ ವ್ಯಕ್ತಿ ಅಥವಾ ಸಂಸ್ಥೆಯನ್ನು ಬ್ಯಾಂಕರ್ ಎಂದು ಕರೆಯಲಾಗುತ್ತದೆ.

ಬ್ಯಾಂಕುಗಳು ಠೇವಣಿದಾರರು ಮತ್ತು ಸಾಲಗಾರರ ನಡುವಿನ ಮಧ್ಯವರ್ತಿಗಳಾಗಿವೆ ಎನ್ನುವ ಹೇಳಿಕೆಯನ್ನು ಸಮರ್ಥಿಸಿರಿ.

ಜಾಹೀರಾತುಗಳನ್ನು ಗಮನಿಸಿರಿ.



ಚಿತ್ರ 11.3



ಚಿತ್ರ 11.4

ಈ ಜಾಹೀರಾತುಗಳು ಯಾವುದರ ಕುರಿತಾಗಿವೆ.

ಸಾಲವನ್ನು ಮರುಪಾವತಿ ಮಾಡುವಾಗ ನೀಡಬೇಕಾದ ಅಧಿಕ ಮೊತ್ತ ಮತ್ತು ಹೂಡಿಕೆ ಮಾಡಿದ ಹಣವನ್ನು ಹಿಂಪಡೆಯುವಾಗ ದೊರೆಯುವ ಹೆಚ್ಚುವರಿ ಮೊತ್ತವನ್ನು ಬಡ್ಡಿ ಎಂದು ಕರೆಯಲಾಗುತ್ತದೆ.

ಠೇವಣಿ ಮತ್ತು ಸಾಲ ಎರಡರ ಮೇಲೂ ಬಡ್ಡಿ ಇರುತ್ತದೆ. ಸಾಲ ಪಡೆಯುವ ವ್ಯಕ್ತಿಗಳಿಂದ ಬ್ಯಾಂಕ್ ಒಂದು ನಿರ್ದಿಷ್ಟ ಮೊತ್ತವನ್ನು ಬಡ್ಡಿಯಾಗಿ ಪಡೆಯುತ್ತದೆ. ಇದನ್ನು ಬ್ಯಾಂಕಿನ ಕಾರ್ಯ ಚಟುವಟಿಕೆಗಳಿಗೆ ಹಣಕಾಸು ಒದಗಿಸಲು ಮತ್ತು ಬ್ಯಾಂಕಿನಲ್ಲಿ ಹಣವನ್ನು ಠೇವಣಿಯಾಗಿ ಇಡುವವರಿಗೆ ಬಡ್ಡಿಯನ್ನು ಪಾವತಿಸಲು ಬಳಸಲಾಗುತ್ತದೆ.

ಮೇಲೆ ನೀಡಲಾದ ಚಿತ್ರವನ್ನು ಪರಿಶೋಧಿಸಿರಿ. ಠೇವಣಿ ಮತ್ತು ಸಾಲ ಇವೆರಡರಲ್ಲಿ ಯಾವುದಕ್ಕೆ ಬಡ್ಡಿದರ ಹೆಚ್ಚೆಂದು ಕಂಡುಹಿಡಿಯಿರಿ. ಯಾಕೆ? ಚರ್ಚಿಸಿರಿ.

## ಖಾತೆಯನ್ನು ತೆರೆಯೋಣ



***"ನಾನು ನನ್ನ ತಾಯಿಯೊಂದಿಗೆ ಬ್ಯಾಂಕ್ ಖಾತೆ ತೆರೆಯಲು ಹೋಗಿದ್ದೆ. ನನ್ನ ತಾಯಿಯ ಕೈಯಲ್ಲಿ ಪಾಸ್ ಪೋರ್ಟ್ ಗಾತ್ರದ ಛಾಯಾಚಿತ್ರ ಮತ್ತು ನನ್ನ ಆಧಾರ್ ಕಾರ್ಡಿನ ಪ್ರತಿ ಮತ್ತಿತರ ದಾಖಲೆಗಳಿದ್ದವು. ಖಾತೆ ತೆರೆಯಲು ಫಾರಂನ್ನು ಭರ್ತಿ ಮಾಡಿ ಸಹಿ ಮಾಡಿದ್ದೆ. ನನ್ನ ತಾಯಿ ಭರ್ತಿ ಮಾಡಿದ ಅರ್ಜಿ ಮತ್ತು ಕೈಯಲ್ಲಿದ್ದ ದಾಖಲೆಗಳನ್ನು ಕೌಂಟರ್‌ಗೆ ನೀಡಿದರು."***

ಖಾತೆ ತೆರೆಯಲು ಬ್ಯಾಂಕ್‌ಗೆ ಹೋದ ರಿಯಾಳ ಅನುಭವವನ್ನು ಓದಿದಿರಲ್ಲವೇ? ಬ್ಯಾಂಕ್ ಖಾತೆ ತೆರೆದ ನಿಮ್ಮ ಅನುಭವವನ್ನು ತರಗತಿಯಲ್ಲಿ ಹಂಚಿಕೊಳ್ಳಿರಿ.

ಖಾತೆ ತೆರೆಯಲು ಭರ್ತಿ ಮಾಡಿದ ಅರ್ಜಿಯೊಂದಿಗೆ ಬ್ಯಾಂಕಿಗೆ ಸಲ್ಲಿಸಿದ ದಾಖಲೆಗಳು ಯಾವುವು? ಪಟ್ಟಿ ಮಾಡಿರಿ.

- 
- 

### ಬ್ಯಾಂಕ್ ಖಾತೆ ಎಂದರೇನು?

ಬ್ಯಾಂಕ್ ಖಾತೆ ಎಂದರೆ ಬ್ಯಾಂಕ್ ಮತ್ತು ಗ್ರಾಹಕರ ನಡುವಿನ ಹಣಕಾಸಿನ ವ್ಯವಹಾರಗಳನ್ನು ಮಾಡುವ ವ್ಯವಸ್ಥೆಯಾಗಿದೆ. ಇವುಗಳನ್ನು ಪಾಸ್ ಬುಕ್‌ನಲ್ಲಿ ದಾಖಲಿಸಲಾಗುತ್ತದೆ.

**ಪಾಸ್ ಬುಕ್**

ಪಾಸ್ ಬುಕ್ ಎನ್ನುವುದು ಬ್ಯಾಂಕ್ ಮತ್ತು ಗ್ರಾಹಕರ ನಡುವಿನ ಹಣಕಾಸಿನ ವಹಿವಾಟನ್ನು ದಾಖಲಿಸುವ ವ್ಯವಸ್ಥೆಯಾಗಿದೆ. ಇದು ಖಾತೆದಾರನ ಹೆಸರು, ವಿಳಾಸ, ಖಾತೆಯ ಸ್ವರೂಪ, ಖಾತೆ ಸಂಖ್ಯೆ, ಬ್ಯಾಂಕಿಗೆ ಸಂಬಂಧಿಸಿದ ಪ್ರಮುಖ ಮಾಹಿತಿಗಳನ್ನು ಒಳಗೊಂಡಿದೆ.

10 ವರ್ಷದಿಂದ ಮೇಲ್ಪಟ್ಟ ಎಲ್ಲರಿಗೂ ತಮ್ಮದೇ ಆದ ಬ್ಯಾಂಕ್ ಖಾತೆಯನ್ನು ತೆರೆಯಬಹುದಾಗಿದೆ. 10 ವರ್ಷಕ್ಕಿಂತ ಕೆಳಗೆ ಪ್ರಾಯವಿರುವವರು ತಮ್ಮ ಪೋಷಕರೊಂದಿಗೆ ಜಂಟಿ ಖಾತೆಯನ್ನು ತೆರೆಯಬಹುದು. ಈಗ ಖಾತೆಗಳನ್ನು ಓನ್ಲೈನ್ ಆಗಿಯೂ ತೆರೆಯಬಹುದಾಗಿದೆ.

ವಿದ್ಯಾರ್ಥಿಗಳು ಬ್ಯಾಂಕ್ ಖಾತೆ ಹೊಂದುವುದರಿಂದ ಏನೇನು ಪ್ರಯೋಜನಗಳಿವೆಯೆಂದು ಕಂಡುಹಿಡಿದು ಪಟ್ಟಿಯನ್ನು ಪೂರ್ತಿಗೊಳಿಸಿರಿ.

- ವಿವಿಧ ಅನುದಾನಗಳನ್ನು ಸ್ವೀಕರಿಸುವುದು.
- 
- 
- 

## ವಿವಿಧ ರೀತಿಯ ಖಾತೆಗಳು ಮತ್ತು ಠೇವಣಿಗಳು



ಚಿತ್ರ 11.5

ಆಕಾಶ್: ಟೀಚರ್, ರಿಯಾಳ ಪಾಸ್ ಬುಕ್‌ನಲ್ಲಿ ರಿಯಾಳ ಫೋಟೋ ಮಾತ್ರ ಇದೆ. ಆದರೆ ನನ್ನ ಪಾಸ್ ಬುಕ್‌ನಲ್ಲಿ ನನ್ನ ಮತ್ತು ನನ್ನ ತಾಯಿಯ ಫೋಟೋ ಇದೆ. ಅದೇನು?

ಟೀಚರ್ : ಆಕಾಶ್, ಅವೆರಡು ಎರಡು ರೀತಿಯ ಖಾತೆಗಳಾಗಿವೆ.

ಮಾಲೀಕತ್ವದ ಆಧಾರದ ಮೇಲೆ ಬ್ಯಾಂಕ್ ಖಾತೆಗಳನ್ನು ಪ್ರಧಾನವಾಗಿ 3 ವಿಧಗಳಲ್ಲಿ ವಿಂಗಡಿಸಬಹುದು.

**ಬ್ಯಾಂಕ್ ಖಾತೆಗಳು**

**ವೈಯಕ್ತಿಕ ಖಾತೆ**
Individual Account

ಒಬ್ಬ ವ್ಯಕ್ತಿಯ ಹೆಸರಿನಲ್ಲಿ ತೆರೆಯಲಾದ ಖಾತೆ. ಆ ವ್ಯಕ್ತಿ ಮಾತ್ರ ಆ ಖಾತೆಯ ಮೂಲಕ ಬ್ಯಾಂಕಿನೊಂದಿಗೆ ವಹಿವಾಟು ನಡೆಸಬಹುದು.

**ಜಂಟಿ ಖಾತೆ**
Joint Account

ಎರಡು ಅಥವಾ ಹೆಚ್ಚು ವ್ಯಕ್ತಿಗಳು ಅಥವಾ ಸಂಸ್ಥೆಗಳು ಸೇರಿ ಒಟ್ಟಾಗಿ ತೆರೆಯುವ ಖಾತೆಗಳೇ ಜಂಟಿ ಖಾತೆಗಳು.

**ಸಾಂಸ್ಥಿಕ ಖಾತೆ**
Institutional Account

ಒಂದು ಸಂಸ್ಥೆಯ ಹೆಸರಿನಲ್ಲಿ ತೆರೆಯಲಾಗುವ ಖಾತೆಯಾಗಿದೆ. ಖಾತೆಯನ್ನು ತೆರೆಯುವುದು ಮತ್ತು ವ್ಯವಹಾರ ನಡೆಸುವುದು ಖಾತೆಯ ಅಧಿಕೃತ ವ್ಯಕ್ತಿಯಾಗಿದ್ದಾರೆ.

ವಿವಿಧ ವಿಧದ ಖಾತೆಗಳ ಪರಿಚಯವಾಯಿತಲ್ಲವೇ? ಠೇವಣಿಗಳನ್ನು ಅವುಗಳ ಗುಣಲಕ್ಷಣಗಳ ಆಧಾರದ ಮೇಲೆ ವಿವಿಧ ಪ್ರಕಾರಗಳಾಗಿ ವರ್ಗೀಕರಿಸಬಹುದು. ಅವುಗಳು ಯಾವುವು ಎಂದು ನೋಡೋಣ.

**ಠೇವಣಿಗಳು**

| ಉಳಿತಾಯ ಠೇವಣಿ (Savings Deposit) | ಪ್ರಚಲಿತ ಠೇವಣಿ (Current Deposit) | ಸ್ಥಿರ ಠೇವಣಿ (Fixed Deposit) | ಆವರ್ತಿತ ಠೇವಣಿ (Recurring Deposit) |
|---|---|---|---|

## ಉಳಿತಾಯ ಠೇವಣಿ (Savings Deposit)

ವ್ಯಕ್ತಿಗಳಲ್ಲಿ ಉಳಿತಾಯದ ಅಭ್ಯಾಸವನ್ನು ಬೆಳೆಸುವುದಕ್ಕಾಗಿ ಇರುವ ಠೇವಣಿಯಾಗಿದೆ. ವ್ಯಕ್ತಿಗತವಾಗಿಯೂ ಜಂಟಿಯಾಗಿಯೂ ಉಳಿತಾಯದ ಖಾತೆಯನ್ನು ಆರಂಭಿಸಬಹುದು. ಈ ಠೇವಣಿಗಳ ಮೇಲೆ ಬ್ಯಾಂಕುಗಳು ಕಡಿಮೆ ಬಡ್ಡಿ ದರವನ್ನು ನೀಡುತ್ತವೆ. ಎಷ್ಟು ಸಲ ಬೇಕಾದರೂ ಹಣವನ್ನು ಜಮೆ ಮಾಡಬಹುದು. ಆದರೆ ಹಣವನ್ನು ಹಿಂಪಡೆಯಲು ಕೆಲವು ನಿರ್ಬಂಧಗಳಿವೆ.

## ಪ್ರಚಲಿತ ಠೇವಣಿ (Current Deposit)

ಇದು ವ್ಯಾಪಾರಿಗಳು ಮತ್ತು ಉದ್ಯಮಿಗಳನ್ನು ಗುರಿಯಾಗಿಟ್ಟುಕೊಂಡು ಮಾಡಿದ ಠೇವಣಿಯಾಗಿದೆ. ಒಂದು ದಿನದಲ್ಲಿ ಎಷ್ಟು ಬೇಕಾದರೂ ವಹಿವಾಟುಗಳನ್ನು ಮಾಡಬಹುದು. ಹಣವನ್ನು ಜಮೆ ಮಾಡಲು ಮತ್ತು ಹಿಂಪಡೆಯಲು ಯಾವುದೇ ನಿರ್ಬಂಧಗಳಿಲ್ಲ. ಈ ಖಾತೆಯ ಠೇವಣಿಗೆ ಬಡ್ಡಿಯನ್ನು ಪಾವತಿಸಲಾಗುವುದಿಲ್ಲ.

## ಸ್ಥಿರ ಠೇವಣಿ (Fixed Deposit)

ಸ್ಥಿರ ಠೇವಣಿ ಖಾತೆ ಎಂದರೆ ಒಂದು ಬಾರಿ ಠೇವಣಿಯಿರಿಸಿ ನಿರ್ದಿಷ್ಟ ಅವಧಿಯ ಅನಂತರ ಬಡ್ಡಿಯೊಂದಿಗೆ ಠೇವಣಿಯನ್ನು ಹಿಂಪಡೆಯುವ ಖಾತೆ. ಅಂತಹ ಠೇವಣಿಗಳ ಮೇಲೆ ಬ್ಯಾಂಕುಗಳು ಹೆಚ್ಚಿನ ಬಡ್ಡಿಯನ್ನು ನೀಡುತ್ತವೆ.

## ಆವರ್ತಿತ ಠೇವಣಿ (Recurring Deposit)

ಇದು ಸ್ಥಿರ ಠೇವಣಿಯ ಮತ್ತೊಂದು ರೂಪವಾಗಿದೆ. ಈ ಖಾತೆಗಳಲ್ಲಿ ನಿಗದಿತ ಮೊತ್ತವನ್ನು ಒಂದು ನಿಯಮಿತ ಮಧ್ಯಂತರಗಳಲ್ಲಿ (ದೈನಂದಿನ, ವಾರಕ್ಕೊಮ್ಮೆ, ಮಾಸಿಕ) ನಿಕ್ಷೇಪ ಮಾಡಲಾಗುತ್ತದೆ. ಕಾಲಾವಧಿಯು ಮುಕ್ತಾಯವಾದರೆ ಮಾತ್ರ ಮೊತ್ತವನ್ನು ಹಿಂಪಡೆಯಬಹುದು. ಇದರಲ್ಲಿ ಉಳಿತಾಯ ಖಾತೆಗಿಂತ ಹೆಚ್ಚಿನ ಬಡ್ಡಿ ದೊರೆಯುತ್ತದೆ.

ವರ್ಕ್ ಶೀಟ್ ಪೂರ್ತಿಗೊಳಿಸಿರಿ.

| ಠೇವಣಿಗಳು | ಅವಧಿ | ಬಡ್ಡಿ | ಹಿಂಪಡೆಯುವುದು |
|---|---|---|---|
| ಉಳಿತಾಯ ಠೇವಣಿ | ಅನ್ವಯಿಸುವುದಿಲ್ಲ | ............................ | ನಿರ್ಬಂಧಗಳಿವೆ |
| ಪ್ರಚಲಿತ ಠೇವಣಿ | ಅನ್ವಯಿಸುವುದಿಲ್ಲ | ............................ | ............................ |
| ............................ | ಅನ್ವಯಿಸುತ್ತದೆ | ............................ | ಅವಧಿಯ ನಂತರ ಮಾತ್ರ |
| ಆವರ್ತಿತ ಠೇವಣಿ | ............................ | ಹೆಚ್ಚಿನ ಬಡ್ಡಿ | ............................ |

ಉಡುಗೊರೆಯಾಗಿಯೋ ಪಾಕೆಟ್ ಮನಿಯಾಗಿಯೋ ನಿಮಗೆ ದೊರೆತ ಹಣವನ್ನು ನೀವು ಹೇಗೆ ಉಳಿಸುವಿರಿ? ಅದನ್ನು ಉಳಿತಾಯ ಮಾಡಿದರೆ ಭವಿಷ್ಯದಲ್ಲಿ ನಿಮ್ಮ ಅಗತ್ಯಗಳಿಗೆ ಉಪಯೋಗಿಸಲು ಸಾಧ್ಯವಿಲ್ಲವೇ? ಉಳಿತಾಯದ ಅಭ್ಯಾಸವನ್ನು ಬೆಳೆಸಲು ಶಾಲೆಗಳಲ್ಲಿ ಯಾವುದಾದರೂ ವ್ಯವಸ್ಥೆಗಳಿವೆಯೇ? ಕಂಡುಹಿಡಿದು ಬರೆಯಿರಿ.



ಸಂಚಯಿಕಾ 1970-ರ ಆರಂಭದಲ್ಲಿ ಶಾಲಾ ವಿದ್ಯಾರ್ಥಿಗಳಿಗಾಗಿ ಕೇಂದ್ರ ಸರಕಾರವು ಆರಂಭಿಸಿದ ಉಳಿತಾಯ ಯೋಜನೆಯಾಗಿದೆ. ಈಗ ಇದನ್ನು ವಿದ್ಯಾರ್ಥಿಗಳ ಉಳಿತಾಯ ಯೋಜನೆಯೆಂದು (Students Savings Scheme) ಕರೆಯಲಾಗುತ್ತದೆ. ವಿದ್ಯಾರ್ಥಿಗಳಲ್ಲಿ ಉಳಿತಾಯದ ಅಭ್ಯಾಸವನ್ನು ಉತ್ತೇಜಿಸಲು ಮತ್ತು ಬ್ಯಾಂಕಿಂಗ್ ಚಟುವಟಿಕೆಗಳ ಬಗ್ಗೆ ಜಾಗೃತಿ ಮೂಡಿಸಲು ಈ ಯೋಜನೆಯನ್ನು ರೂಪೀಕರಿಸಲಾಗಿದೆ. ಇದು ರಾಷ್ಟ್ರೀಯ ಉಳಿತಾಯ ಯೋಜನೆಯಡಿಯಲ್ಲಿ ಕಾರ್ಯನಿರ್ವಹಿಸುತ್ತದೆ. ಈ ಯೋಜನೆಗೆ ಸೇರುವ ವಿದ್ಯಾರ್ಥಿಗಳಿಗೆ ಶಾಲೆಗಳಿಂದ ತಮ್ಮ ಖಾತೆ ಸಂಖ್ಯೆಯೊಂದಿಗೆ ಪಾಸ್ ಬುಕ್ ವಿತರಿಸಲಾಗುತ್ತದೆ.

## ವಿವಿಧ ರೀತಿಯ ಬ್ಯಾಂಕ್‌ಗಳು

Union Bank of India

केनरा बैंक Canara Bank

SBI

KERALA BANK
Kerala State Co-operative Bank

ಚಿತ್ರ 11.6

ಕೊಲಾಷ್ ಚಿತ್ರವನ್ನು ಗಮನಿಸಿದಿರಲ್ಲವೇ?

ಈ ಬ್ಯಾಂಕುಗಳ ಹೆಸರು ನಿಮಗೆ ಪರಿಚಿತವೇ? ನಿಮಗೆ ತಿಳಿದಿರುವ ಇತರ ಬ್ಯಾಂಕುಗಳ ಹೆಸರನ್ನು ಸೇರಿಸಿರಿ.

- 
- 
- 
- 

ವಿವಿಧ ರೀತಿಯ ಬ್ಯಾಂಕುಗಳ ಪರಿಚಯ ಮಾಡಿಕೊಳ್ಳೋಣ.

**ವಿವಿಧ ರೀತಿಯ ಬ್ಯಾಂಕುಗಳು**

- ವಾಣಿಜ್ಯ ಬ್ಯಾಂಕುಗಳು
- ಸಹಕಾರಿ ಬ್ಯಾಂಕುಗಳು
- ಅಭಿವೃದ್ಧಿ ಬ್ಯಾಂಕುಗಳು

## ವಾಣಿಜ್ಯ ಬ್ಯಾಂಕುಗಳು

ವಾಣಿಜ್ಯ ಬ್ಯಾಂಕುಗಳು ಬ್ಯಾಂಕಿಂಗ್ ವಲಯದಲ್ಲಿ ಅತ್ಯಂತ ಹಳೆಯ ಮತ್ತು ವ್ಯಾಪಕವಾಗಿ ಶಾಖೆಗಳನ್ನು ಹೊಂದಿರುವ ಬ್ಯಾಂಕುಗಳಾಗಿವೆ. ಅವು ಠೇವಣಿಗಳನ್ನು ಸ್ವೀಕರಿಸುವುದು, ಸಾಲಗಳನ್ನು ನೀಡುವುದು, ಲಾಕರ್ ಸೌಲಭ್ಯಗಳು, ಡೆಬಿಟ್ ಕಾರ್ಡ್, ಕ್ರೆಡಿಟ್ ಕಾರ್ಡ್, ಆನ್ಲೈನ್ ಬ್ಯಾಂಕಿಂಗ್ ಎಂಬಿತ್ಯಾದಿ ಸೇವೆಗಳನ್ನು ಗ್ರಾಹಕರಿಗೆ ಒದಗಿಸುತ್ತವೆ. ಸಾರ್ವಜನಿಕ ವಲಯದ ಬ್ಯಾಂಕುಗಳು ಮತ್ತು ಖಾಸಗಿ ಬ್ಯಾಂಕ್‌ಗಳು ಎಂದು ವಾಣಿಜ್ಯ ಬ್ಯಾಂಕುಗಳನ್ನು ಎರಡಾಗಿ ವಿಭಾಗಿಸಬಹುದು. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (SBI) ಭಾರತದ ಅತಿ ದೊಡ್ಡ ಸಾರ್ವಜನಿಕ ವಲಯದ ವಾಣಿಜ್ಯ ಬ್ಯಾಂಕ್ ಆಗಿದೆ.

**ಸಾರ್ವಜನಿಕ ವಲಯದ ಬ್ಯಾಂಕುಗಳು ಮತ್ತು ಖಾಸಗಿ ವಲಯದ ಬ್ಯಾಂಕುಗಳು**

ಸಾರ್ವಜನಿಕ ವಲಯದ ಬ್ಯಾಂಕುಗಳು ಸಂಪೂರ್ಣವಾಗಿ ಸರಕಾರದ ಸ್ವಾಮ್ಯದ ಬ್ಯಾಂಕುಗಳಾಗಿವೆ. ಉದಾ: ಯೂನಿಯನ್ ಬ್ಯಾಂಕ್, ಕೆನರಾ ಬ್ಯಾಂಕ್.

ಖಾಸಗಿ ಬ್ಯಾಂಕ್‌ಗಳು ಖಾಸಗಿ ವ್ಯಕ್ತಿಗಳ ಒಡೆತನದ ಬ್ಯಾಂಕುಗಳಾಗಿವೆ. ಈ ಬ್ಯಾಂಕ್‌ಗಳು ರಿಸರ್ವ್ ಬ್ಯಾಂಕಿನ ನಿಯಮಗಳಿಗೆ ಒಳಪಟ್ಟಿರುತ್ತವೆ. ಉದಾ: ಸೌತ್ ಇಂಡಿಯನ್ ಬ್ಯಾಂಕ್, ಫೆಡರಲ್ ಬ್ಯಾಂಕ್

## ಸಹಕಾರಿ ಬ್ಯಾಂಕುಗಳು

ಸಹಕಾರಿ ಬ್ಯಾಂಕುಗಳು ರೈತರು, ಕುಶಲಕರ್ಮಿಗಳು ಮತ್ತು ಸಣ್ಣ ಉದ್ಯಮಿಗಳಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡುವ ಗುರಿಯೊಂದಿಗೆ ಪ್ರಾರಂಭವಾದ ಬ್ಯಾಂಕುಗಳಾಗಿವೆ. ಸ್ವ-ಸಹಾಯ ಮತ್ತು ಪರಸ್ಪರ ಸಹಾಯವನ್ನು ಉತ್ತೇಜಿಸುವುದು, ಜನರಲ್ಲಿ ಉಳಿತಾಯದ ಅಭ್ಯಾಸವನ್ನು ಬೆಳೆಸುವುದು, ಹೂಡಿಕೆಯನ್ನು ಹೆಚ್ಚಿಸುವುದು ಮತ್ತು ಖಾಸಗಿ ಲೇವಾದೇವಿದಾರರ ಶೋಷಣೆಯಿಂದ ಜನರನ್ನು ರಕ್ಷಿಸುವುದು ಸಹಕಾರಿ ಬ್ಯಾಂಕುಗಳ ಮುಖ್ಯ ಉದ್ದೇಶವಾಗಿದೆ. ಕೇರಳ ಸರ್ಕಾರದಿಂದ ರಚಿಸಲ್ಪಟ್ಟ ಕೇರಳ ಬ್ಯಾಂಕ್ ಅಂತಹ ಒಂದು ಬ್ಯಾಂಕ್ ಆಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುವ ಸಹಕಾರಿ

ಬ್ಯಾಂಕುಗಳನ್ನು ಗ್ರಾಮೀಣ ಸಹಕಾರಿ ಬ್ಯಾಂಕುಗಳು ಎಂದು ಕರೆಯಲಾಗುತ್ತದೆ. ನಗರ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುವ ಬ್ಯಾಂಕುಗಳನ್ನು ನಗರ ಸಹಕಾರಿ ಬ್ಯಾಂಕುಗಳು ಎಂದು ಕರೆಯಲಾಗುತ್ತದೆ.

**ಕೇರಳ ಬ್ಯಾಂಕ್**

KERALA BANK
Kerala State Co-operative Bank

'ಕೇರಳ ಬ್ಯಾಂಕ್' ಕೇರಳ ಸರಕಾರವು ರೂಪೀಕರಿಸಿದ ಒಂದು ಸಹಕಾರಿ ಬ್ಯಾಂಕ್ ಆಗಿದೆ. ಕೇರಳ ಸ್ಟೇಟ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಅನ್ನು ಕೇರಳ ಬ್ಯಾಂಕ್ ಎಂಬ ಹೆಸರಿನಿಂದ ಕರೆಯಲಾಗುತ್ತದೆ. ರಾಜ್ಯ ಸಹಕಾರಿ ಬ್ಯಾಂಕ್ ಮತ್ತು ಜಿಲ್ಲಾ ಸಹಕಾರಿ ಬ್ಯಾಂಕುಗಳನ್ನು ವಿಲೀನಗೊಳಿಸುವ ಮೂಲಕ ಕೇರಳ ಬ್ಯಾಂಕನ್ನು ರಚಿಸಲಾಯಿತು. ಬ್ಯಾಂಕಿನ ಪ್ರಧಾನ ಕಚೇರಿ ತಿರುವನಂತಪುರದಲ್ಲಿದೆ.

## ಅಭಿವೃದ್ಧಿ ಬ್ಯಾಂಕ್‌ಗಳು

ಕೈಗಾರಿಕೆ, ವಾಣಿಜ್ಯ ಮತ್ತು ಕೃಷಿ ವಲಯಗಳಿಗೆ ದೀರ್ಘಾವಧಿಯ ಸಾಲಗಳನ್ನು ಒದಗಿಸುವ ಬ್ಯಾಂಕುಗಳು ಅಭಿವೃದ್ಧಿ ಬ್ಯಾಂಕ್‌ಗಳಾಗಿವೆ. ಉದಾಹರಣೆ: ಇಂಡಸ್ಟ್ರಿಯಲ್ ಫಿನಾನ್ಸ್ ಕಾರ್ಪೋರೇಶನ್ ಆಫ್ ಇಂಡಿಯ (IFCI), ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ (NABARD).

ವಿವಿಧ ಬ್ಯಾಂಕುಗಳ ವಿಶೇಷತೆಗಳ ಕುರಿತು ಒಂದು ಪೇನಲ್ ಚರ್ಚೆ ಆಯೋಜಿಸಿರಿ.

## ಬದಲಾಗುತ್ತಿರುವ ಬ್ಯಾಂಕಿಂಗ್ ಮುಖ




ಚಿತ್ರ 11.7

ಚಿತ್ರಗಳನ್ನು ಗಮನಿಸಿರಿ. ಇಂತಹ ನವೀನ ವ್ಯವಸ್ಥೆಗಳ ಬಳಕೆಯನ್ನು ನೀವು ಗಮನಿಸಿದ್ದೀರಾ.

ಆಧುನಿಕ ಯುಗದಲ್ಲಿ ಬ್ಯಾಂಕಿಂಗ್ ಅತ್ಯಂತ ವೇಗವಾಗಿ ಬದಲಾಗುತ್ತಿರುವ ಕ್ಷೇತ್ರವಾಗಿದೆ. ಕಾಲ ಬದಲಾದಂತೆ ತಮ್ಮ ಗ್ರಾಹಕರಿಗೆ ಉತ್ತಮ ಸೇವೆಗಳನ್ನು ಒದಗಿಸಲು ಬ್ಯಾಂಕುಗಳು ಅನೇಕ ವ್ಯವಸ್ಥೆಗಳನ್ನು ಜಾರಿಗೆ ತರುತ್ತವೆ. ವಹಿವಾಟು ನಡೆಸಲು ನೇರವಾಗಿ ಬ್ಯಾಂಕಿಗೆ ಹೋಗುವ ಕಾಲವು ಬದಲಾಗಿದೆ. ಮೊಬೈಲ್ ಆಪ್‌ಗಳು, ಇಂಟರ್ ನೆಟ್ ಬ್ಯಾಂಕಿಂಗ್ ಇತ್ಯಾದಿಗಳು

ಬಂದ ನಂತರ ಬ್ಯಾಂಕಿಂಗ್ ಸೇವೆಗಳು ಗ್ರಾಹಕರಿಗೆ ಸುಲಭವಾಗಿ ಲಭ್ಯವಾಗುತ್ತಿವೆ. ನಗದು ಕೊಂಡೊಯ್ಯದೆ ವಹಿವಾಟು ನಡೆಸಬಹುದಾದ ವ್ಯವಸ್ಥೆಯಾಗಿ ಬ್ಯಾಂಕಿಂಗ್ ವ್ಯವಸ್ಥೆಯು ಇಂದು ರೂಪಾಂತರಗೊಂಡಿದೆ. ಅವು ಯಾವುವೆಂದು ತಿಳಿದುಕೊಳ್ಳೋಣ.

### ಎ.ಟಿ.ಎಂ. (Automated Teller Machine)

ಬ್ಯಾಂಕಿಗೆ ಹೋಗದೆ ಯಾವುದೇ ಸಮಯದಲ್ಲಿ ನಮ್ಮ ಖಾತೆಯಿಂದ ಹಣವನ್ನು ಹಿಂಪಡೆಯಲು ಎ.ಟಿ.ಎಂ. ಸಹಾಯ ಮಾಡುತ್ತದೆ. ಸಿ.ಡಿ.ಎಂ. (Cash Deposit Machine) ಸೌಲಭ್ಯವನ್ನು ಉಪಯೋಗಿಸಿಕೊಂಡು ನಾವು ಯಾವುದೇ ಸಮಯದಲ್ಲಿ ಹಣವನ್ನು ಠೇವಣಿ ಮಾಡಬಹುದು.

### ಯು.ಪಿ.ಐ (Unified Payments Interface)

ಒಂದಕ್ಕಿಂತ ಹೆಚ್ಚು ಬ್ಯಾಂಕ್ ಅಕೌಂಟುಗಳನ್ನು ಒಂದು ಮೊಬೈಲ್ ಅಪ್ಲಿಕೇಶನ್‌ನ ಮೂಲಕ ಉಪಯೋಗಿಸಲು ಸಾಧ್ಯವಾಗುವ ಡಿಜಿಟಲ್ ವಿಧಾನವಾಗಿದೆ. ಬ್ಯಾಂಕಿಗೋ, ಎ.ಟಿ.ಎಂ.ಗೋ ಹೋಗದೆ ಹಣದ ವ್ಯವಹಾರಗಳನ್ನು ನಡೆಸಲು ಈ ವ್ಯವಸ್ಥೆಯಿಂದ ಸಾಧ್ಯವಾಗುತ್ತದೆ. ಯಾವ ಸಮಯದಲ್ಲಿಯೂ ಹಣಕಾಸಿನ ವ್ಯವಹಾರವನ್ನು ಈ ವ್ಯವಸ್ಥೆಯ ಮೂಲಕ ನಡೆಸಬಹುದು. ಕ್ಯೂ.ಆರ್. ಕೋಡ್ (Quick Response Code) ಮೊಬೈಲ್ ಫೋನ್ ನಂಬರ್, ಅಕೌಂಟ್ ನಂಬರುಗಳನ್ನು ಉಪಯೋಗಿಸಿ ವ್ಯವಹಾರಗಳನ್ನು ನಡೆಸಬಹುದು.

#### ಕ್ರೆಡಿಟ್ ಕಾರ್ಡ್ ಮತ್ತು ಡೆಬಿಟ್ ಕಾರ್ಡ್



ಕ್ರೆಡಿಟ್ ಕಾರ್ಡ್‌ಗಳು ಮತ್ತು ಡೆಬಿಟ್ ಕಾರ್ಡ್‌ಗಳು ಬ್ಯಾಂಕುಗಳು ಗ್ರಾಹಕರಿಗೆ ಹಣದ ವಹಿವಾಟು ನಡೆಸಲು ನೀಡುವ ಕಾರ್ಡ್‌ಗಳಾಗಿವೆ. ಗ್ರಾಹಕರು ಇದರ ಮೂಲಕ ಪಡೆಯುವ ಮುಖ್ಯ ಅನುಕೂಲವೆಂದರೆ ಅವರು ಹಣವನ್ನು ಕೊಂಡೊಯ್ಯಬೇಕಾಗಿಲ್ಲ. ಆದರೆ ಖಾತೆಯಲ್ಲಿ ಹಣವಿದ್ದರೆ ಮಾತ್ರ ಡೆಬಿಟ್ ಕಾರ್ಡನ್ನು ಬಳಸಬಹುದು. ಕ್ರೆಡಿಟ್ ಕಾರ್ಡ್ ಎಂದರೆ ಖಾತೆಯಲ್ಲಿ ಹಣವಿಲ್ಲದಿದ್ದರೂ ಸಹ ವಹಿವಾಟುಗಳನ್ನು ಮಾಡಲು ನಿಮಗೆ ಸಹಾಯ ಮಾಡುವ ಕಾರ್ಡ್. ಬ್ಯಾಂಕುಗಳು ನಿರ್ದಿಷ್ಟ ಅವಧಿಗೆ ಕ್ರೆಡಿಟ್ ಕಾರ್ಡ್ ಮಾಲೀಕರಿಗೆ ಹಣವನ್ನು ಸಾಲವಾಗಿ ನೀಡುತ್ತವೆ. ಸಮಯದ ಮಿತಿಯೊಳಗೆ ಹಣವನ್ನು ಮರುಪಾವತಿಸದಿದ್ದರೆ ಬ್ಯಾಂಕುಗಳು ಬಡ್ಡಿಯನ್ನು ವಿಧಿಸುತ್ತವೆ.

ಡಿಜಿಟಲ್ ಉಪಕರಣಗಳು/ಕಾರ್ಡುಗಳು ಎಂಬಿವುಗಳನ್ನು ಉಪಯೋಗಿಸಿಕೊಂಡು ಹಣಕಾಸು ವಹಿವಾಟುಗಳನ್ನು ನಡೆಸಬಹುದಾದ ಸಂದರ್ಭಗಳನ್ನು ಕಂಡುಹಿಡಿದು ಬರೆಯಿರಿ.

- 
- 
- 

## ಎಚ್ಚರಿಕೆಯೊಂದಿಗೆ ಬ್ಯಾಂಕಿಂಗ್

ಸಾಲದ ಆಪ್‌ಗಳು: ಪೊಲೀಸರು ಎಚ್ಚರಿಕೆಯನ್ನು ನೀಡಿದ್ದಾರೆ.

ಡಿಜಿಟಲ್ ಬಂಧನದ ಮೂಲಕ ಹಣದ ಸುಲಿಗೆ

ಒನ್ಲೈನ್ ವ್ಯಾಪಾರ: ಖಾತೆಯಿಂದ ಲಕ್ಷ ಗಟ್ಟಲೆ ರೂಪಾಯಿ ನಷ್ಟ.

ಒ.ಟಿ.ಪಿ. ತೆಗೆದುಕೊಳ್ಳುವ ಮೂಲಕ ಹಣ ವಂಚನೆ.

ಮೇಲಿನ ಸುದ್ದಿಗಳನ್ನು ಗಮನಿಸಿದ್ದೀರಲ್ಲವೇ?
ಇಂದು ಸೈಬರ್ ಲೋಕದಲ್ಲಿ ಇಂತಹ ವಂಚನೆಗಳು ವ್ಯಾಪಕವಾಗಿವೆ. ಅವುಗಳನ್ನು ಗುರುತಿಸಿ ತಡೆಗಟ್ಟಲು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆಗಳ ಕುರಿತು ತಿಳಿದುಕೊಳ್ಳೋಣ.

ಎ.ಟಿ.ಎಂ. ಪಿನ್ ಮತ್ತು ಒ.ಟಿ.ಪಿ. ಗಳನ್ನು ಹಂಚಿಕೊಳ್ಳಬೇಡಿ.

ಅನುಮಾನಾಸ್ಪದ ಆನ್ಲೈನ್ ಲಿಂಕ್‌ಗಳನ್ನು ತೆರೆಯಬೇಡಿ.

ಖಾತೆಯ ಮಾಹಿತಿಯನ್ನು ಕೇಳುವ ಫೋನ್ ಸಂದೇಶಗಳಿಗೆ ಉತ್ತರಿಸಬೇಡಿ.

ನಿಮ್ಮ ಎ.ಟಿ.ಎಂ. ಪಿನ್ ಅನ್ನು ನಿಮ್ಮ ಫೋನ್ ನಲ್ಲಿ ಇಟ್ಟುಕೊಳ್ಳಬೇಡಿ.

ಬಲವಾದ ಪಾಸ್‌ವರ್ಡ್‌ಗಳನ್ನು ಬಳಸಿರಿ. ನಿಮ್ಮ ಪಾಸ್ ವರ್ಡ್‌ಗಳನ್ನು ಆಗಾಗ ಬದಲಾಯಿಸಿ.

ನೀವು ಆನ್ಲೈನ್ ಹಣಕಾಸು ವಂಚನೆಯನ್ನು ಗಮನಿಸಿದರೆ ದೂರು ಕೊಡುವುದಕ್ಕೆ 'ಸಹಾಯವಾಣಿ'ಯ ವ್ಯವಸ್ಥೆಗಳು ಈಗ ಇವೆ.




ಚಿತ್ರ 11.9

ಆನ್ಲೈನ್ ವಂಚನೆಯ ವಿರುದ್ಧ ಸಮಾಜದಲ್ಲಿ ಜಾಗೃತಿ ಮೂಡಿಸಲು ಒಂದು ಪೋಸ್ಟರ್ ತಯಾರಿಸಿರಿ.

ಬ್ಯಾಂಕುಗಳ ಸ್ಥಾಪನೆಯಿಂದ ಡಿಜಿಟಲ್ ಬ್ಯಾಂಕಿಂಗ್‌ನವರೆಗೆ ನಾವು ನೂತನ ತಂತ್ರಜ್ಞಾನಗಳನ್ನು ಪರಿಚಯಿಸಿಕೊಂಡಿದ್ದೇವೆ. ಆರ್ಥಿಕ ಪ್ರಗತಿಯನ್ನು ಸಾಧಿಸುವಲ್ಲಿ ಬ್ಯಾಂಕುಗಳ ಪಾತ್ರವು ಅಮೂಲ್ಯವಾಗಿದೆ. ಆಧುನಿಕ ತಂತ್ರಜ್ಞಾನದ ಬೆಳವಣಿಗೆಯು ಬ್ಯಾಂಕಿಂಗ್ ಸೇವೆಗಳು ಮತ್ತು ಹಣದ ವಹಿವಾಟುಗಳನ್ನು ಹೆಚ್ಚು ಅನುಕೂಲಕರವಾಗಿಸಿದೆ. ಇದು ಎಲ್ಲಾ ವರ್ಗದ ಜನರಿಗೆ ಬ್ಯಾಂಕಿಂಗ್ ಸೇವೆಗಳು ಲಭ್ಯವಾಗುವಂತೆ ಮಾಡಿದೆ. ಪ್ರಸ್ತುತ ಯುಗದಲ್ಲಿ ಬ್ಯಾಂಕಿಂಗ್ ವಹಿವಾಟುಗಳಲ್ಲಿ ಹೆಚ್ಚು ಜಾಗರೂಕತೆ ಮತ್ತು ಸೂಕ್ಷ್ಮತೆಯನ್ನು ಹೊಂದುವುದು ಅನಿವಾರ್ಯವಾಗಿದೆ.

## ಮುಂದುವರಿದ ಚಟುವಟಿಕೆಗಳು

- ನಿಮ್ಮ ಶಾಲೆಯ ಮುಖ್ಯಸ್ಥರನ್ನು ಸಂದರ್ಶನ ಮಾಡಿರಿ ಮತ್ತು ಶಾಲೆಯಲ್ಲಿರುವ ವಿವಿಧ ಖಾತೆಗಳನ್ನು ಪಟ್ಟಿ ಮಾಡಿರಿ.
- ಬ್ಯಾಂಕಿಗೆ ಭೇಟಿ ನೀಡಿ ಅಲ್ಲಿ ನಡೆಯುತ್ತಿರುವ ಹಣಕಾಸಿನ ವಹಿವಾಟುಗಳನ್ನು ಗಮನಿಸಿ ಟಿಪ್ಪಣಿಯನ್ನು ಸಿದ್ಧಪಡಿಸಿರಿ.
- ಬ್ಯಾಂಕಿಂಗ್ ಕ್ಷೇತ್ರದಲ್ಲಿ ನಡೆಯುವ ವಂಚನೆಗೆ ಸಂಬಂಧಿಸಿದ ಸುದ್ದಿಗಳನ್ನು ಸಂಗ್ರಹಿಸಿರಿ ಮತ್ತು ಸಮಾಜ ವಿಜ್ಞಾನ ಕ್ಲಬ್ಬಿನ ನೇತೃತ್ವದಲ್ಲಿ ಜಾಗೃತಿ ತರಬೇತಿಯನ್ನು ಆಯೋಜಿಸಿರಿ.
- ಹಣಕಾಸು ಸಂಸ್ಥೆಗಳಿಗೆ ಸಂಬಂಧಿಸಿದ ಲೋಗೋಗಳನ್ನು ಸಂಗ್ರಹಿಸಿ 'ನನ್ನ ಸಮಾಜ ವಿಜ್ಞಾನ ನಿರೀಕ್ಷಣಾ ಪುಸ್ತಕ'ಕ್ಕೆ ಸೇರಿಸಿರಿ.
- ಈ ಕೆಳಗಿನ ಉದ್ದೇಶಗಳಿಗೆ ಯಾವ ಖಾತೆ ಸೂಕ್ತವಾಗಿದೆ ಎಂಬುದನ್ನು ಕಂಡುಹಿಡಿದು ವರ್ಕ್ ಶೀಟನ್ನು ಪೂರ್ತಿಗೊಳಿಸಿರಿ.

| ಸಂದರ್ಭ | ಖಾತೆ |
|---|---|
| ಮಕ್ಕಳ ಭವಿಷ್ಯದ ಶಿಕ್ಷಣಕ್ಕಾಗಿ, ಚಿಟ್ ಫಂಡಿನಿಂದ ಪಡೆದ ಹಣವನ್ನು ಬ್ಯಾಂಕಿನಲ್ಲಿ ಹೂಡಿಕೆ ಮಾಡುವುದು. | ಸ್ಥಿರ ನಿಕ್ಷೇಪ |
| ಮಾಸಿಕ ಪಿಂಚಣಿ ಮೊತ್ತವನ್ನು ಠೇವಣಿ ಇಡಲು ಮತ್ತು ವೆಚ್ಚಗಳಿಗಾಗಿ ಹಣವನ್ನು ಹಿಂಪಡೆಯಲು | |
| ವ್ಯಾಪಾರದ ದೈನಂದಿನ ಆದಾಯವನ್ನು ನಿಕ್ಷೇಪಿಸಲು ಮತ್ತು ಅಗತ್ಯವಿದ್ದಾಗ ಹಿಂಪಡೆಯಲು. | |
| ನಿಮ್ಮ ಸ್ವಂತ ಮನೆಯನ್ನು ಹೊಂದುವ ಕನಸನ್ನು ನನಸಾಗಿಸಲು ಪ್ರತಿ ತಿಂಗಳು ಒಂದು ನಿರ್ದಿಷ್ಟ ಮೊತ್ತವನ್ನು ಹೂಡಿಕೆ ಮಾಡುವುದು. | |





12

# ಜಪಾನ್: ಚರಿತ್ರೆ ಮತ್ತು ವರ್ತಮಾನ



1945 ಆಗಸ್ಟ್ 6, ಸಡಾಕೋ ಸಸಾಕಿಗೆ ಎರಡು ವರ್ಷವಾಗಿತ್ತು. ಸಸಾಕಿಯು ಹಿರೋಶಿಮಾದಿಂದ ಎರಡು ಕಿಲೋಮೀಟರ್ ದೂರದಲ್ಲಿ ವಾಸವಾಗಿದ್ದಳು. ಸಸಾಕಿ ಆಕಾಶದಲ್ಲಿ ಹಾರಾಡುವ ದೃಶ್ಯಗಳನ್ನು ಕುತೂಹಲದಿಂದ ನೋಡುತ್ತಿದ್ದಳು. ಆದರೆ, ಆ ಕುತೂಹಲ ಕೆಲವೇ ಕ್ಷಣಗಳಲ್ಲಿ ಇಲ್ಲದಾಯಿತು. ವಿಮಾನದಿಂದ ಸುರಿದ ಬಾಂಬಿನ ಅಗ್ನಿ ಜ್ವಾಲೆ ಲಕ್ಷಾಂತರ ಜನರ ಜೀವವನ್ನು ಅಪಹರಿಸಿತು. ಸ್ವಲ್ಪವೇ ದೂರದಲ್ಲಿದ್ದ ಸಸಾಕಿಯೊಡನೆ ಆ ಅಗ್ನಿ ಜ್ವಾಲೆಗಳು ಕರುಣೆ ತೋರಿದವು.

ವರ್ಷಗಳು ಕಳೆದು ಹೋದವು. ಅಣುಬಾಂಬಿನಿಂದ ಹರಡಿದ ಅಣುವಿಕಿರಣಗಳು ಸುತ್ತಮುತ್ತಲಿನ ಜನರನ್ನು ಕೊಲ್ಲುತ್ತಲೇ ಇದ್ದವು. ಕಾಲವು ಸಡಾಕೋ ಸಸಾಕಿಯಲ್ಲೂ ಕರುಣೆ ತೋರಿಸಲಿಲ್ಲ. ಸಸಾಕಿಯನ್ನು ಬ್ಲಡ್ ಕ್ಯಾನ್ಸರ್ ರೂಪದಲ್ಲಿ ಅಣುವಿಕಿರಣಗಳು ಆಕ್ರಮಿಸಿದವು.

ಸಸಾಕಿಯು ಆಸ್ಪತ್ರೆಯ ಮಂಚದಲ್ಲೂ ತನ್ನ ಆಸೆಯನ್ನು ಕೈಬಿಡಲಿಲ್ಲ. ಆಸ್ಪತ್ರೆಗೆ ತನ್ನ ಗೆಳತಿ ಚಿಝುಕೋ ಹಮಾಮೊಟ್ಟೋ ಬರುತ್ತಿದ್ದಳು. ಒಂದು ದಿನ ಹಮಾಮೊಟ್ಟೋ ಕಾಗದದಿಂದ ಕೊಕ್ಕರೆ ಮಾಡುವುದನ್ನು ಸಸಾಕಿಗೆ ಕಲಿಸಿದಳು. ಸಾವಿರ ಕೊಕ್ಕರೆಗಳನ್ನು ಮಾಡಿದರೆ ಅವರ ಆಸೆಗಳು ಪೂರೈಸಲ್ಪಡುವುದೆಂಬ ನಂಬಿಕೆ ಜಪಾನಿಯರಿಗಿತ್ತು. ಅದು ಸಸಾಕಿಯಲ್ಲಿ ಉತ್ಸಾಹವನ್ನು ಉಂಟುಮಾಡಿತು. ಸಾವಿರ ಕೊಕ್ಕರೆಗಳನ್ನು ತಯಾರಿಸಿ, ನಾನು ರೋಗಮುಕ್ತಳಾಗುವೆನೆಂದು ಅವಳು ನಂಬಿದಳು.

ಆ ಸಮಯದಲ್ಲಿ ಅಷ್ಟು ಕಾಗದಗಳು ಅಲ್ಲಿ ಸುಲಭದಲ್ಲಿ ಸಿಗುತ್ತಿರಲಿಲ್ಲ. ಔಷಧಗಳನ್ನು ಸುತ್ತಿದ ಕಾಗದಗಳಿಗಾಗಿ ಅವರು ಹತ್ತಿರದ ಕೋಣೆಗಳಿಗೆ ಹೋಗಿ ಬಂದರು. ಶಾಲೆಯಿಂದ ಗೆಳೆಯರು ಕಾಗದಗಳನ್ನು ತಲುಪಿಸಿದರು. ಆದರೆ ವಿಧಿ ಬೇರೆಯೇ ಆಗಿತ್ತು. ಸಾವಿರ ಕೊಕ್ಕರೆಗಳು ಎಂಬ ನಿರೀಕ್ಷೆಯನ್ನು ಪೂರ್ತಿಗೊಳಿಸಲು ರೋಗವು ಸಸಾಕಿಯನ್ನು ಬಿಡಲಿಲ್ಲ. 644 ಕೊಕ್ಕರೆಗಳನ್ನು ಪೂರ್ತಿಗೊಳಿಸಿ 1955 ಅಕ್ಟೋಬರ್ 25ರಂದು ಸಸಾಕಿ ಈ ಜಗತ್ತಿಗೆ ವಿದಾಯ ಹೇಳಿದಳು. ಪ್ರೀತಿಯ ಗೆಳತಿ ಚಿಝುಕೋ ಹಮಾಮೊಟ್ಟೋ ಕಣ್ಣೀರುಗಳೊಂದಿಗೆ ಸಸಾಕಿಗಾಗಿ ಸಾವಿರ ಕೊಕ್ಕರೆಗಳನ್ನು ಮಾಡಿ ಪೂರ್ತಿಗೊಳಿಸಿದಳು. ಆ ಪ್ರೀತಿಯ ಕೊಕ್ಕರೆಗಳೊಂದಿಗೆ ಸಸಾಕಿಯ ಅಂತ್ಯಕ್ರಿಯೆ ನಡೆಸಲಾಯಿತು.

ಮೂಲ : ಸಡಾಕೋ ಎಂಡ್ ದ ತೌಸಂಡ್ ಪೇಪರ್ ಕ್ರೈಯಿನ್ಸ್

ಇಂದಿಗೂ ಭರವಸೆಯ ಪ್ರತೀಕವಾಗಿ ಬರುವ ಕಾಗದದ ಕೊಕ್ಕರೆಗಳಿಗೆ ಸಡಾಕೋ ಸಸಾಕಿಯ ನೋವುಗಳಿವೆ... ನಿರೀಕ್ಷೆಗಳಿವೆ... ಅದರ ಜೊತೆಗೆ ಶಾಂತಿಗೆ ಬೇಕಾದ ಮುಗುಳುನಗೆಯೂ ಇದೆ...

1945 ಆಗಸ್ಟ್ 6 ರಂದು ಜಪಾನಿನ ಹಿರೋಶಿಮಾದಲ್ಲಿ ಮತ್ತು ಆಗಸ್ಟ್ 9 ರಂದು ನಾಗಸಾಕಿಯಲ್ಲಿ ಅಮೆರಿಕವು ಅಣುಬಾಂಬನ್ನು ಸುರಿದುದು ಜಗತ್ತಿನ ಜನತೆಯನ್ನು ಬೆಚ್ಚಿಬೀಳಿಸಿದ ಘಟನೆಯಾಗಿತ್ತು. ಇದರ ಪರಿಣಾಮಗಳನ್ನು ಜಪಾನ್ ಇಂದೂ ಅನುಭವಿಸುತ್ತಿದೆ. ಬಾಂಬ್ ಆಕ್ರಮಣದಿಂದ ಸಂಪೂರ್ಣವಾಗಿ ನಾಮಾವಶೇಷವಾದ ಜಪಾನ್, ಅದರ ಬಳಿಕ ವೇಗವಾಗಿ ಚೇತರಿಸಿಕೊಂಡು ಇಂದು ಜಗತ್ತಿನ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಿ ತಲೆ ಎತ್ತಿ ನಿಂತಿದೆ.

ಜಪಾನ್‌ನ ಇತಿಹಾಸವನ್ನು ತಿಳಿಯಲು ನಿಮಗೂ ಆಸಕ್ತಿಯಿಲ್ಲವೇ... ನಾವು ತಿಳಿಯೋಣ...

ಜಪಾನ್ ಪೂರ್ವ ಏಷ್ಯಾದ ಪೆಸಿಫಿಕ್ ಕರಾವಳಿಯಲ್ಲಿರುವ ಒಂದು ದ್ವೀಪ ಸಮೂಹವಾಗಿದೆ. ಜಪಾನಿನಲ್ಲಿ ಸಾವಿರಾರು ದ್ವೀಪಗಳು ಇವೆ.

ಭೂಪಟ 12.1 ರಲ್ಲಿ ಜಪಾನಿನ ಸ್ಥಾನವನ್ನು ನಿರೀಕ್ಷಿಸಿರಿ. ಪ್ರಮುಖ ದ್ವೀಪಗಳನ್ನು ಕಂಡುಹಿಡಿದು ಬರೆಯಿರಿ.



ಭೂಪಟ 12.1

- ಹೊಕ್ಕೈಡೋ
- 
- 
- 

ಜಪಾನಿನ ಬಹುಪಾಲು ಜನರು ಈ ನಾಲ್ಕು ಪ್ರಮುಖ ದ್ವೀಪಗಳಲ್ಲಿ ವಾಸಿಸುತ್ತಿರುವರು. ವಿಶಾಲವಾದ ಸಮುದ್ರ ತೀರಗಳು, ಎತ್ತರವಾದ ಗುಡ್ಡ ಬೆಟ್ಟಗಳು, ಪರ್ವತಗಳು ಎಂಬಿವುಗಳು ಜಪಾನಿನ ಭೂಪ್ರಕೃತಿಯ ವಿಶೇಷತೆಗಳಾಗಿವೆ. ಜಪಾನ್ ನಿರಂತರವಾದ ಭೂಕಂಪಗಳು, ಅಗ್ನಿಪರ್ವತದ ಸ್ಫೋಟಗಳನ್ನು ಎದುರಿಸುತ್ತಿರುವ ದೇಶವಾಗಿದೆ. ಸಾಮಾನ್ಯವಾಗಿ ಅಲ್ಲಿನ ನದಿಗಳು ಎತ್ತರದಿಂದ ಹರಿಯುವವುಗಳು ಮತ್ತು ವೇಗ ಹೆಚ್ಚಾಗಿರುವವುಗಳಾಗಿವೆ. ಷಿನಾನೋ ಎಂಬುದು ಜಪಾನಿನ ಅತಿ ಉದ್ದವಾದ ನದಿಯಾಗಿದೆ.


ಚಿತ್ರ 12.1 ಷಿನಾನೋ ನದಿ


ಚಿತ್ರ 12.2 ಜಪಾನಿನ ಅಗ್ನಿ ಪರ್ವತ

ಜಾಗತಿಕ ಭೂಪಟವನ್ನು ನಿರೀಕ್ಷಿಸಿ ಜಪಾನಿನ ನೆರೆದೇಶಗಳನ್ನು ಕಂಡುಹಿಡಿದು ಬರೆಯಿರಿ.

- ರಷ್ಯಾ
- 
- 
- 

## ಜಪಾನಿನ ಇತಿಹಾಸ

ಜಪಾನಿನ ನೆರೆಯ ದೇಶಗಳಾದ ಚೈನಾ ಮತ್ತು ಕೊರಿಯಾವು ಪ್ರಾಚೀನ ಕಾಲದಿಂದಲೇ ಅಲ್ಲಿನ ಸಂಸ್ಕೃತಿಯ ಮೇಲೆ ಪ್ರಭಾವ ಬೀರಿವೆ. ಚೈನೀಸ್ ಬರಹ ಸಂಪ್ರದಾಯ, ತತ್ವ ಚಿಂತನೆಗಳು, ಸಾಹಿತ್ಯಗಳು ಕೊರಿಯಾದ ಮೂಲಕ ಜಪಾನಿಗೆ ತಲುಪಿತು. ಇದೇ ರೀತಿ ಜಪಾನಿನಲ್ಲಿ ಬೌದ್ಧ ಮತವು ಪ್ರಚಾರಗೊಂಡಿತು.



ಚಿತ್ರ 12.3
ಜಪಾನೀಸ್ ಬುದ್ಧ ಪ್ರತಿಮೆ

### ಸಾಹಿತ್ಯ

ಸಿ. ಇ. ಎಂಟನೇ ಶತಮಾನದಲ್ಲಿ ಬರೆಯಲಾದ ಕೊಜಿಕಿ (Kojiki) ಎಂಬ ಕೃತಿಯಲ್ಲಿ ಜಪಾನಿನ ಪರಂಪರಾಗತ ಇತಿಹಾಸವನ್ನು ವಿವರಿಸಲಾಗಿದೆ. ಇದನ್ನು ಇತಿಹಾಸ ಮತ್ತು ಪುರಾಣವನ್ನು ಒಟ್ಟು ಸೇರಿಸಿದ ರೀತಿಯಲ್ಲಿ ಬರೆಯಲಾಗಿದೆ. ಸಿ. ಇ. 10ನೇ ಶತಮಾನದ ಹೊತ್ತಿಗೆ ಚೈನೀಸ್ ಸಂಸ್ಕೃತಿಯ ಪ್ರಭಾವದಿಂದ ಸ್ವತಂತ್ರವಾಗಲು ಜಪಾನ್ ಪ್ರಯತ್ನಗಳನ್ನು ಆರಂಭಿಸಿತು. ಇದು ಜಪಾನಿಗೆ ತನ್ನದೇ ಆದ ಸಂಸ್ಕೃತಿಯನ್ನು ರೂಪಿಸಲು ಸಹಾಯಕವಾಯಿತು. ಚೈನದ ಬರವಣಿಗೆಯ ಶೈಲಿಯನ್ನು ಸರಳಗೊಳಿಸಿ ಜಪಾನ್ ಭಾಷೆಗೆ ಹೊಸ ಲಿಪಿಯೊಂದನ್ನು ಅವರು ರೂಪಿಸಿದರು. ಕಥೆ, ಕವನಗಳು ಒಳಗೊಂಡಂತೆ ಅನೇಕ ಸಾಹಿತ್ಯ ಕೃತಿಗಳನ್ನು ಜಪಾನೀಸ್ ಭಾಷೆಯಲ್ಲಿ ಬರೆಯಲಾಯಿತು. ಆಸ್ಥಾನ ಬರಹಗಾರ್ತಿಯಾಗಿದ್ದ ಮುರಸಾಕಿ ಷಿಕಿಬು ಬರೆದ ಜೆಂಜಿಯ ಕಥೆಗಳು (The Tale of Genji) ಇವುಗಳಲ್ಲಿ ಹೆಚ್ಚು ಪ್ರಸಿದ್ಧವಾಗಿವೆ.




ಚಿತ್ರ 12.4
ಜಪಾನೀಸ್ ಲಿಪಿ

### ಶಿಂಟೋಯಿಸಂ

ಶಿಂಟೋಯಿಸಂ ಎಂಬುದು ಜಪಾನಿನ ಪರಂಪರಾಗತ ಮತವಾಗಿದೆ. 'ದೇವರ ಹಾದಿ' ಎಂಬುದು ಶಿಂಟೋ ಎಂಬ ಪದದ ಅರ್ಥವಾಗಿದೆ. ಸಾಮಾನ್ಯವಾಗಿ ಆರಾಧನಾ ಮೂರ್ತಿಗಳನ್ನು 'ಕಾಮಿ' ಎಂದು ಕರೆಯುತ್ತಿದ್ದರು. ಇವುಗಳಲ್ಲಿ ಸೂರ್ಯ ದೇವತೆಯಾದ 'ಅಮತರೆಸು' ಪ್ರಧಾನವಾಗಿದೆ. ಸೂರ್ಯ ದೇವತೆಯ ಉತ್ತರಾಧಿಕಾರಿಗಳೆಂದು ಚಕ್ರವರ್ತಿಗಳನ್ನು ಪರಿಗಣಿಸಲಾಗುತ್ತಿತ್ತು. ಈ ಚಕ್ರವರ್ತಿಗಳು ಶಿಂಟೋಯಿಸಂನ ಮುಖ್ಯಸ್ಥರಾಗಿದ್ದರು.



ಚಿತ್ರ 12.5
ಶಿಂಟೋ ದೇವಾಲಯ

### ಆಹಾರ

ಪ್ರಾಚೀನ ಕಾಲದಿಂದಲೇ ಅಕ್ಕಿಯು ಜಪಾನೀಯರ ಪ್ರಮುಖ ಆಹಾರವಾಗಿತ್ತು. ಬೇಯಿಸಿ ಸೇವಿಸುತ್ತಿದ್ದ ಈ ಆಹಾರವನ್ನು 'ಗೋಹನ್' (Gohan) ಎಂದು ಕರೆಯುತ್ತಿದ್ದರು. ಸಿರಿ ಧಾನ್ಯಗಳನ್ನು (Millets) ಅವರು ಬಳಸುತ್ತಿದ್ದರು. ಪೋಷಕಾಹಾರದ ಭಾಗವಾಗಿ ಮೀನನ್ನು ಆಹಾರದಲ್ಲಿ ಸೇರಿಸಿದ್ದರು. ಸಂಸ್ಕರಿಸದ ಮೀನಿನ ಆಹಾರವಸ್ತುವಾದ 'ಸುಷಿ' ಇಂದು ಜಗತ್ತಿನಾದ್ಯಂತ ಪ್ರಸಿದ್ಧ ಜಪಾನೀಸ್ ಆಹಾರವಸ್ತುವಾಗಿದೆ. ಚೈನೀಸ್ ಪ್ರಭಾವದ ಪರಿಣಾಮವಾಗಿ ನೂಡಲ್ಸ್ ಅವರ ಆಹಾರದ ಭಾಗವಾಯಿತು.



ಚಿತ್ರ 12.6
ಸುಷಿ

## ವಸ್ತ್ರ

ಕಿಮೋನೊ ಜಪಾನಿನ ಸಾಂಪ್ರದಾಯಿಕ ವಸ್ತ್ರವಾಗಿದೆ. ಇದನ್ನು ಮುಖ್ಯವಾಗಿ ರಾಜಸಭೆಗಳಲ್ಲಿ ಉಪಯೋಗಿಸಲಾಗುತ್ತಿತ್ತು. ಕಿಮೋನೊ (Kimono) ಎಂಬ ವಸ್ತ್ರವನ್ನು ಪುರುಷರೂ ಮಹಿಳೆಯರೂ ಉಪಯೋಗಿಸುತ್ತಾರೆ. ಇದು ಚೈನಾದವರಲ್ಲಿ ಪ್ರಚಾರದಲ್ಲಿದ್ದ ಉದ್ದವಾದ ವಸ್ತ್ರಗಳಿಗೆ (Long robe) ಸಮಾನವಾಗಿತ್ತು.



ಚಿತ್ರ 12.7
ಕಿಮೋನೊ ವಸ್ತ್ರ

**ವರ್ಕ್ ಶೀಟನ್ನು ಪೂರ್ತಿಗೊಳಿಸಿರಿ.**

| ಜಪಾನ್ | |
|---|---|
| ಸಾಹಿತ್ಯ | ........................, ............................ |
| ............................................. | ಪರಂಪರಾಗತ ಮತ ವಿಶ್ವಾಸ |
| ಆಹಾರ | ........................, ............................ |
| ವಸ್ತ್ರ | .................................................... |

## ಷೋಗನ್ ಆಡಳಿತ

ಜಪಾನನ್ನು ಅನೇಕ ವರ್ಷಗಳಿಂದ ಚಕ್ರವರ್ತಿಗಳು ಆಳುತ್ತಿದ್ದರು. ಆದರೆ ಹನ್ನೆರಡನೇ ಶತಮಾನದ ಹೊತ್ತಿಗೆ ದೇಶದ ಆಡಳಿತವು ಚಕ್ರವರ್ತಿಗಳಿಂದ, ಷೋಗನ್ ಎಂದು ತಿಳಿಯಲಾದ ಸೈನಿಕ ಮುಖ್ಯಸ್ಥರಿಗೆ ಲಭಿಸಿತು. ನಾಮ ಮಾತ್ರ ಆಡಳಿತಾಧಿಕಾರಿಗಳಾಗಿದ್ದ ಚಕ್ರವರ್ತಿಗಳ ಹೆಸರಿನಲ್ಲಿ ಷೋಗನರು ಆಡಳಿತ ನಡೆಸಿದರು. ಇವರ ಆಡಳಿತದ ಕೈಕೆಳಗೆ ಜಪಾನ್ 250ಕ್ಕೂ ಹೆಚ್ಚು ಪ್ರಾದೇಶಿಕ ವಲಯಗಳಾಗಿ ವಿಭಜನೆ ಹೊಂದಿತು. ಇವುಗಳ ಆಡಳಿತವನ್ನು ಡೈಮಿಯೋ (Daimyo) ಎಂದು ತಿಳಿಯಲಾದ ಪ್ರಭುಗಳು ನಿಯಂತ್ರಿಸುತ್ತಿದ್ದರು. ಸಮುರಾಯ್‌ಗಳು (Samurais) ಆಡಳಿತದಲ್ಲಿ ಪ್ರಭಾವವನ್ನು ಬೀರುವ ಸೈನಿಕರ ವಿಭಾಗವಾಗಿತ್ತು. ಇವರು ಷೋಗನರ ಮತ್ತು ಡೈಮಿಯೋಗಳ ಸೇವೆ ಮಾಡುತ್ತಿದ್ದರು. ಜಪಾನಿನಲ್ಲಿ ಹತ್ತೊಂಬತ್ತನೇ ಶತಮಾನದಲ್ಲಿ ನಡೆದ 'ಮೈಜಿ ಪುನರ್ ಸ್ಥಾಪನೆ'ಯೊಂದಿಗೆ ಷೋಗನರ ಆಡಳಿತವು ಕೊನೆಗೊಂಡಿತು.



ಚಿತ್ರ 12.8
ಸಮುರಾಯ್ ಸೈನಿಕ

**ಡೈಮಿಯೋಗಳು**

ಡೈಮಿಯೋಗಳು ಜಪಾನಿನ ಫ್ಯೂಡಲ್ ವ್ಯವಸ್ಥೆಯ ಪ್ರಭುಗಳಾಗಿದ್ದರು. ಇವರು 12 ನೇ ಶತಮಾನದಿಂದ 19 ನೇ ಶತಮಾನದ ವರೆಗೆ ಜಪಾನಿನ ಪ್ರವಿಷ್ಯ(ಪ್ರಾಂತ್ಯ)ಗಳನ್ನು ನಿಯಂತ್ರಿಸುತ್ತಿದ್ದರು.

## ಮೈಜಿ ಪುನರ್ ಸ್ಥಾಪನೆ

ಜಪಾನ್ ವಿದೇಶಿಯರ ಆಧಿಪತ್ಯದಿಂದ ರಕ್ಷಿಸಿಕೊಂಡ ಏಷ್ಯಾದ ದೇಶವಾಗಿತ್ತು. ಹಲವು ದೇಶಗಳು ಜಪಾನಿನೊಂದಿಗೆ ವ್ಯಾಪಾರ ಸಂಬಂಧವನ್ನು ಸ್ಥಾಪಿಸಲು ಪ್ರಯತ್ನಿಸಿದವು. ಅಮೇರಿಕದವನಾದ ಕಮ್ಮೊಡೋರ್ ಮ್ಯಾಥ್ಯೂಪೆರಿ 1853 ರಲ್ಲಿ ಜಪಾನಿಗೆ ಆಗಮಿಸಿ ಜಪಾನಿಯರೊಂದಿಗಿನ ವ್ಯಾಪಾರಕ್ಕಿರುವ ಅನುಮತಿಯನ್ನು ಪಡೆದನು. ಮ್ಯಾಥ್ಯೂಪೆರಿಯ ಆಗಮನವು ಜಪಾನಿನ ರಾಜಕೀಯ ಚರಿತ್ರೆಯನ್ನು ಬದಲಾಯಿಸಿತು.



ಚಿತ್ರ 12.9
ಮ್ಯಾಥ್ಯೂಪೆರಿಯ ಆಗಮನ - ಚಿತ್ರಣ

1868 ರಲ್ಲಿ ಷೋಗನರನ್ನು ಅಧಿಕಾರದಿಂದ ಬಲವಂತವಾಗಿ ಹೊರಹಾಕಿ, ಚಕ್ರವರ್ತಿ ಕೇಂದ್ರೀಕೃತ ಆಡಳಿತದ ಪುನರಾಗಮನವಾಯಿತು. ಎದೋವನ್ನು ರಾಜಧಾನಿಯಾಗಿ ಘೋಷಿಸಲಾಯಿತು. ಬಳಿಕ ಇದನ್ನು ಟೋಕಿಯೋ (Tokyo) ಎಂದು ಪುನರ್ ನಾಮಕರಣ ಮಾಡಲಾಯಿತು. ಇದು 'ಮೈಜಿ ಪುನರ್ ಸ್ಥಾಪನೆ' (The Meiji Restoration) ಎಂದು ಕರೆಯಲ್ಪಡುತ್ತದೆ.

### ಆಡಳಿತದಲ್ಲಿ ಉಂಟಾದ ಬದಲಾವಣೆ

'ಫುಕೋಕು ಕ್ಯೋಹಿ' (Fukoku Kyohei) - 'ಸಂಪದ್ಭರಿತ ದೇಶ, ಪ್ರಬಲವಾದ ಸೈನ್ಯ' ಎಂಬ ಆಶಯಕ್ಕೆ ಒತ್ತುನೀಡಿದ ಒಂದು ಹೊಸ ನೀತಿಗೆ ಮೈಜಿ ಸರಕಾರವು ನಾಂದಿಹಾಡಿತು. ದೇಶವನ್ನು ಪ್ರಬಲಗೊಳಿಸುವುದಕ್ಕಾಗಿ ಮೈಜಿ ಸರಕಾರವು ಒಂದು ಹೊಸ ಆಡಳಿತ ಸಂಪ್ರದಾಯವನ್ನು ಕಾರ್ಯಗತಗೊಳಿಸಿತು. ಸೈನ್ಯವನ್ನು ಮತ್ತು ಉದ್ಯೋಗಿಗಳನ್ನು ಚಕ್ರವರ್ತಿಯ ನೇರ ನಿಯಂತ್ರಣದಲ್ಲಿರಿಸಿತು. ಇಪ್ಪತ್ತು ವರ್ಷಕ್ಕಿಂತ ಮೇಲ್ಪಟ್ಟ ಎಲ್ಲಾ ಯುವಕರಿಗೆ ನಿಗದಿತ ಕಾಲಾವಧಿಯ ಸೈನಿಕ ಸೇವೆಯನ್ನು ಕಡ್ಡಾಯಗೊಳಿಸಿತು.

### ಶಿಕ್ಷಣ ಸಂಪ್ರದಾಯ

ಜಪಾನ್ 1870 ರಲ್ಲಿ ಒಂದು ಹೊಸ ಶಿಕ್ಷಣ ಸಂಪ್ರದಾಯವನ್ನು ಆರಂಭಿಸಿತು.



## ಆರ್ಥಿಕ ಪ್ರಗತಿ

ಆರ್ಥಿಕ ವ್ಯವಸ್ಥೆಯನ್ನು ಆಧುನೀಕರಿಸಿದ್ದು ಮೈಜಿ ಸುಧಾರಣೆಗಳ ಮತ್ತೊಂದು ಪ್ರಮುಖ ಘಟಕವಾಗಿತ್ತು.

**ಆರ್ಥಿಕ ಪ್ರಗತಿಗೆ ಸಹಕಾರಿಯಾದ ಘಟಕಗಳು**

- 1870-72 ರಲ್ಲಿ ಟೋಕಿಯೋ ಮತ್ತು ಯೋಕೋಹಾಮ ಬಂದರುಗಳ ಮಧ್ಯೆ ಜಪಾನಿನ ಮೊದಲ ರೈಲು ಸಂಚಾರ ಮಾರ್ಗವನ್ನು ನಿರ್ಮಿಸಲಾಯಿತು.
- ಬಟ್ಟೆ ನೇಯ್ಗೆಯ ಯಂತ್ರಗಳನ್ನು ಯುರೋಪಿನಿಂದ ಆಮದು ಮಾಡಲಾಯಿತು.
- ಕಾರ್ಮಿಕರಿಗೆ ತರಬೇತಿ ನೀಡುವುದಕ್ಕಾಗಿ ವಿದೇಶಿ ತಂತ್ರಜ್ಞರನ್ನು ನಿಯೋಜಿಸಲಾಯಿತು.
- ಜಪಾನಿನ ವಿದ್ಯಾರ್ಥಿಗಳನ್ನು ವಿದೇಶಗಳಿಗೆ ಕಳುಹಿಸಿ ಕಲಿಸಲಾಯಿತು.

ಜಪಾನಿನಲ್ಲಿ ಆಧುನೀಕರಣದ ಭಾಗವಾಗಿ ಅನೇಕ ಕೈಗಾರಿಕೆಗಳನ್ನು ಆರಂಭಿಸಿದರು. ಐದಕ್ಕಿಂತ ಕಡಿಮೆ ಕಾರ್ಮಿಕರನ್ನು ಹೊಂದಿದ ಕಿರು ಕಾರ್ಖಾನೆಗಳಿಂದ ತೊಡಗಿ ನೂರಕ್ಕಿಂತ ಹೆಚ್ಚು ಕಾರ್ಮಿಕರನ್ನು ದುಡಿಸುತ್ತಿದ್ದ ಬೃಹತ್ ಕಾರ್ಖಾನೆಗಳನ್ನು ಜಪಾನಿನಲ್ಲಿ ಸ್ಥಾಪಿಸಲಾಯಿತು. ಹಾಗೆ ಒಂದು ಆಧುನಿಕ ರಾಷ್ಟ್ರವನ್ನು ರೂಪಿಸುವಲ್ಲಿ ಜಪಾನ್ ಗೆದ್ದಿತು.

ಮೈಜಿಯ ಪುನರ್ ಸ್ಥಾಪನೆಯಿಂದ ಆರಂಭಿಸಿ ಆರ್ಥಿಕ ಶಕ್ತಿಯಾಗಿ ಬೆಳೆಯುವವರೆಗೆ ಜಪಾನಿನ ಪ್ರಗತಿಯನ್ನು ಸೂಚಿಸುವ ಮಾಹಿತಿಗಳನ್ನು ಸಂಗ್ರಹಿಸಿರಿ. ಈ ಮಾಹಿತಿಗಳನ್ನು ಸೇರಿಸಿ ಭಿತ್ತಿಪತ್ರಿಕೆಯನ್ನು ತಯಾರಿಸಿರಿ.

## ಜಪಾನಿನ ಸಾಮ್ರಾಜ್ಯ ರೂಪೀಕರಣದ ಪ್ರಯತ್ನಗಳು

ಮೈಜಿಯ ಪುನರ್ ಸ್ಥಾಪನೆಯೊಂದಿಗೆ ಜಪಾನಿನಲ್ಲಿ ರಾಷ್ಟ್ರವನ್ನು ಕೇಂದ್ರೀಕರಿಸಿದ ರಾಷ್ಟ್ರೀಯತೆಯು ಬೆಳೆದು ಬಂತು. ತಮ್ಮ ಸಾಮ್ರಾಜ್ಯವನ್ನು ಚೈನಾ ಮತ್ತು ಏಷ್ಯಾದ ಇತರ ದೇಶಗಳಿಗೂ ವ್ಯಾಪಿಸುವುದಕ್ಕಾಗಿ ಜಪಾನ್ ಯುದ್ಧಗಳಲ್ಲಿ ತೊಡಗಿತು. ಅದು ನೆರೆದೇಶಗಳಾದ ತೈವಾನ್ ಮತ್ತು ಕೊರಿಯಾವನ್ನು ವಶಪಡಿಸಿ, ಒಂದು ವಸಾಹತುಶಾಹಿ ಸಾಮ್ರಾಜ್ಯವನ್ನು ಸ್ಥಾಪಿಸಿತು. ಪುಟ್ಟ ದೇಶವಾದ ಜಪಾನ್ ತಮ್ಮ ಸಂಸ್ಕೃತಿ ಮತ್ತು ಆದರ್ಶಗಳ ಮೂಲವಾದ ಚೈನಾ ಮತ್ತು ಯುರೋಪಿಯನ್ ಶಕ್ತಿಯಾದ ರಷ್ಯಾವನ್ನು ಸೋಲಿಸಿತು. ಸಾಮ್ರಾಜ್ಯ ರೂಪೀಕರಣಕ್ಕಿರುವ ಅವರ ಅನಂತರದ ಪ್ರಯತ್ನಗಳು ಇನ್ನಷ್ಟು ಯುದ್ಧಗಳಿಗೆ ಕಾರಣವಾಯಿತು. ಎರಡನೇ ಜಾಗತಿಕ ಯುದ್ಧದ ಸಮಯದಲ್ಲಿ ಜಪಾನ್

**ಜಾಗತಿಕ ಯುದ್ಧಗಳು**

ಒಂದನೇ ಜಾಗತಿಕ ಯುದ್ಧ (1914-1918) ಮತ್ತು ಎರಡನೇ ಜಾಗತಿಕ ಯುದ್ಧಗಳು (1939-1945) 20-ನೇ ಶತಮಾನದ ಮಾನವನ ಇತಿಹಾಸದಲ್ಲಿ ಅತಿ ಭೀಕರತೆ ಮತ್ತು ಬದಲಾವಣೆಗಳನ್ನು ಉಂಟುಮಾಡಿದ ಯುದ್ಧಗಳಾಗಿವೆ. ಎರಡನೇ ಜಾಗತಿಕ ಯುದ್ಧದಲ್ಲಿ ಅಣುಬಾಂಬನ್ನು ಮೊದಲ ಬಾರಿ ಬಳಸಲಾಯಿತು.

ಅಮೆರಿಕಾದ ಪರ್ಲ್ ಹಾರ್ಬರಿನ ಮೇಲೆ ದಾಳಿ ಮಾಡಿತು. ಇದು ಅಮೆರಿಕವು ಜಪಾನಿನ ಹಿರೋಶಿಮಾ ಮತ್ತು ನಾಗಾಸಾಕಿಯ ಮೇಲೆ ಅಣುಬಾಂಬ್ ಹಾಕಲು ಕಾರಣವಾಯಿತು.

ಅಣುಬಾಂಬಿನ ಬಳಕೆಯು ಜಪಾನಿನಲ್ಲಿ ಅತಿಭೀಕರವಾದ ನಾಶನಷ್ಟ ಮತ್ತು ನೋವುಗಳನ್ನು ಉಂಟುಮಾಡಿತು. ಯುದ್ಧದ ಅನಂತರ ಅಮೆರಿಕದ ವಸಾಹತಾಗುವುದರೊಂದಿಗೆ ಜಪಾನಿನ ಸೈನ್ಯವನ್ನು ವಿಸರ್ಜಿಸಿ ಒಂದು ಹೊಸ ಸಂವಿಧಾನವನ್ನು ಜಾರಿಗೆ ತರಲಾಯಿತು.



ಚಿತ್ರ 12.10
ಅಣುಬಾಂಬ್‌ನ ಸ್ಫೋಟ



ಚಿತ್ರ 12.11 ಅಣುಬಾಂಬ್ ಸ್ಫೋಟದ ನಂತರದ ಹಿರೋಷಿಮಾ

ಸಾಮ್ರಾಜ್ಯ ಸ್ಥಾಪನೆಗಾಗಿ ಜಪಾನ್ ನಡೆಸಿದ ಪ್ರಯತ್ನಗಳನ್ನು ಪಟ್ಟಿ ಮಾಡಿರಿ. ಇದು ಜಪಾನಿನ ಬೆಳವಣಿಗೆಯನ್ನು ಹೇಗೆ ಪ್ರತಿಕೂಲವಾಗಿ ಬಾಧಿಸಿತು ಎಂದು ವಿಶ್ಲೇಷಿಸಿರಿ.

ಎರಡನೇ ಜಾಗತಿಕ ಯುದ್ಧದಲ್ಲಿ ನಾಶವಾದ ಜಪಾನ್ ಅತಿ ವೇಗವಾಗಿ ಪ್ರಗತಿಯ ಹಾದಿಗೆ ಮರಳಿತು. ಈ ಪುನರ್ ನಿರ್ಮಾಣವು 'ಯುದ್ಧದ ನಂತರದ ವಿಸ್ಮಯ' ಎಂದು ಬಣ್ಣಿಸಲ್ಪಟ್ಟಿತು. 1964-ರಲ್ಲಿ ಜಪಾನಿನ ರಾಜಧಾನಿಯಾದ ಟೋಕಿಯೋದಲ್ಲಿ ಒಲಿಂಪಿಕ್ಸ್‌ನ ಆಯೋಜನೆಯು ತನ್ನ ಪುನರಾಗಮನದ ಘೋಷಣೆಯಾಗಿತ್ತು. ಕೈಗಾರಿಕೆ ಮತ್ತು ವಾಣಿಜ್ಯ ಕ್ಷೇತ್ರಗಳು ಅತಿವೇಗವಾಗಿ ಬೆಳೆದವು. ಇದೇ ಸಮಯದಲ್ಲಿ ಗಂಟೆಗೆ 200 ಮೈಲು ವೇಗದಲ್ಲಿ ಓಡುವ ಬುಲೆಟ್ ರೈಲುಗಳ ಜಾಲವು ಜಪಾನಿನ ತಂತ್ರಜ್ಞಾನದ ನೈಪುಣ್ಯಕ್ಕೆ ಸಾಕ್ಷಿಯಾಗಿತ್ತು. 1970-ರ ದಶಕದಲ್ಲಿ ಜಪಾನ್ ಜಗತ್ತಿನ ಒಂದು ಪ್ರಮುಖ ಆರ್ಥಿಕ ಶಕ್ತಿಯಾಗಿ ಬೆಳೆದು ಬಂತು. ರಾಜಕೀಯ ಮತ್ತು ತಂತ್ರಜ್ಞಾನದ ಸಾಮರ್ಥ್ಯಗಳನ್ನು ಬಳಸಿಕೊಂಡು ಹೇಗೆ ಜಾಗತಿಕ ಆರ್ಥಿಕ ಶಕ್ತಿಗಳಲ್ಲಿ ಒಂದಾಗಿ ಬದಲಾಗಬಹುದು ಎಂಬುದಕ್ಕೆ ಜಪಾನ್ ದೇಶವು ಪ್ರತ್ಯಕ್ಷ ನಿದರ್ಶನವಾಗಿದೆ.



ಚಿತ್ರ 12.12 ಜಪಾನ್ ನಗರ

## ಮುಂದುವರಿದ ಚಟುವಟಿಕೆಗಳು

- ಸಡಾಕೋ ಕೊಕ್ಕರೆಗಳನ್ನು ತಯಾರಿಸಿ ಅದರಲ್ಲಿ ಶಾಂತಿಯ ಸಂದೇಶಗಳನ್ನು ಬರೆದು ತರಗತಿ ಕೋಣೆಯನ್ನು ಅಲಂಕರಿಸಿರಿ.
- ಯುದ್ಧ ವಿರೋಧಿ ಮೆರವಣಿಗೆಗೆ ಅಗತ್ಯವಾದ ಪ್ಲಕಾರ್ಡುಗಳನ್ನು ತಯಾರಿಸಿರಿ.
- ಜಪಾನಿನ ಆಹಾರವಸ್ತುಗಳ ಚಿತ್ರಗಳನ್ನು ಮತ್ತು ಮಾಹಿತಿಗಳನ್ನು ಸಂಗ್ರಹಿಸಿ ಆಲ್ಬಂ / ಡಿಜಿಟಲ್ ಆಲ್ಬಂ ತಯಾರಿಸಿರಿ.
- "ಜಪಾನಿನಲ್ಲಿ ಮೈಜಿಯ ಪುನರ್ ಸ್ಥಾಪನೆ ಉಂಟುಮಾಡಿದ ಬದಲಾವಣೆಗಳು" ಎಂಬ ವಿಷಯದಲ್ಲಿ ಸೆಮಿನಾರ್ ಆಯೋಜಿಸಿರಿ.

# ಟಿಪ್ಪಣಿಗಳು

# ಟಿಪ್ಪಣಿಗಳು

# ಭಾರತದ ಸಂವಿಧಾನ

ಭಾಗ IV ಕ

## ಕರ್ತವ್ಯಗಳು

51 **ಕ. ಮೂಲಭೂತ ಕರ್ತವ್ಯಗಳು - ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಪೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಗೌರವಿಸುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಅದನ್ನು ಅನುಸರಿಸುವುದು.

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಬೆಳೆಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದು.

(ಟ) ಆರರಿಂದ ಹದಿನಾಲ್ಕು ವರ್ಷಗಳ ನಡುವಿನ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಮಕ್ಕಳಿಗೋ ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

# ಮಕ್ಕಳ ಹಕ್ಕುಗಳು

ಪ್ರೀತಿಯ ಮಕ್ಕಳೇ,

ನಿಮ್ಮ ಹಕ್ಕುಗಳ ಕುರಿತು ತಿಳಿಯಬೇಕಲ್ಲವೇ? ಹಕ್ಕುಗಳ ಕುರಿತಾಗಿರುವ ತಿಳುವಳಿಕೆಯು ನಿಮ್ಮ ಭಾಗವಹಿಸುವಿಕೆ, ಸಂರಕ್ಷಣೆ, ಸಾಮಾಜಿಕ ನ್ಯಾಯ ಎಂಬಿವುಗಳನ್ನು ಖಾತರಿಪಡಿಸಲು ಪ್ರೇರಣೆಯನ್ನೂ ಪ್ರಚೋದನೆಯನ್ನೂ ನೀಡುತ್ತದೆ. ನಿಮ್ಮ ಹಕ್ಕುಗಳನ್ನು ಸಂರಕ್ಷಿಸಲು ಈಗ ಒಂದು ಆಯೋಗವು ಕಾರ್ಯಾಚರಿಸುತ್ತಿದೆ. 'ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ' ಎಂದು ಅದರ ಹೆಸರು. ನಿಮ್ಮ ಹಕ್ಕುಗಳು ಯಾವುವು ಎಂದು ನೋಡೋಣ.

- ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ.
- ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ.
- ಪರಿಪೂರ್ಣವಾದ ಬದುಕು ಹಾಗೂ ವಿಕಾಸದ ಹಕ್ಕು.
- ಜಾತಿ, ಮತ, ವರ್ಗ, ವರ್ಣ ಎಂಬ ಚಿಂತನೆಗಳನ್ನು ಮೀರಿ ಗೌರವಿಸಲ್ಪಡುವ ಮತ್ತು ಅಂಗೀಕರಿಸಲ್ಪಡುವ ಹಕ್ಕು.
- ದೈಹಿಕ, ಮಾನಸಿಕ ಹಾಗೂ ಲೈಂಗಿಕ ದೌರ್ಜನ್ಯಗಳಿಂದ ರಕ್ಷಣೆ ಪಡೆಯಲೂ ಶುಶ್ರೂಷೆ ಪಡೆಯಲೂ ಇರುವ ಹಕ್ಕು.
- ಬಾಲ ಕಾರ್ಮಿಕತನದಿಂದ ಹಾಗೂ ಅಪಾಯಕಾರಿ ಕೆಲಸಗಳಿಂದ ಬಿಡುಗಡೆ.
- ಪಾಲ್ಗೊಳ್ಳುವಿಕೆಯ ಹಕ್ಕು.
- ಬಾಲ್ಯವಿವಾಹದಿಂದ ರಕ್ಷಣೆ.
- ವೈಯಕ್ತಿಕ ಸಂಸ್ಕೃತಿಯನ್ನು ಅರಿತುಕೊಂಡು ಅದನ್ನು ಅನುಸರಿಸಿ ಬದುಕುವ ಸ್ವಾತಂತ್ರ್ಯ.
- ನಿರ್ಲಕ್ಷ್ಯಕ್ಕೆ ಒಳಗಾಗದಂತೆ ಸಂರಕ್ಷಣೆ.
- ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು.
- ಕಲಿಯಲೂ ಆಟವಾಡಲೂ ಇರುವ ಹಕ್ಕು.
- ಪ್ರೀತಿ ಹಾಗೂ ರಕ್ಷಣೆಯನ್ನು ಒದಗಿಸುವ ಕುಟುಂಬ ಹಾಗೂ ಸಮಾಜವನ್ನು ಪಡೆಯುವ ಹಕ್ಕು.

## ನಿಮ್ಮ ಕೆಲವು ಜವಾಬ್ದಾರಿಗಳು

- ಶಾಲೆ, ಸಾರ್ವಜನಿಕ ಸೊತ್ತುಗಳನ್ನು ಹಾನಿ ಮಾಡದೆ ರಕ್ಷಿಸುವುದು.
- ಶಾಲೆಯಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಶಿಸ್ತು ಪಾಲಿಸುವುದು.
- ಶಾಲಾ ಅಧಿಕಾರಿಗಳನ್ನು, ಅಧ್ಯಾಪಕರನ್ನು, ಹೆತ್ತವರನ್ನು ಹಾಗೂ ಸಹಪಾಠಿಗಳನ್ನು ಗೌರವಿಸುವುದು ಮತ್ತು ಅಂಗೀಕರಿಸುವುದು.
- ಜಾತಿ, ಮತ, ವರ್ಗ, ವರ್ಣ ಇತ್ಯಾದಿ ಚಿಂತನೆ ಗಳನ್ನು ಮೀರಿ ಇತರರನ್ನು ಗೌರವಿಸಲೂ ಅಂಗೀಕರಿಸಲೂ ಸಿದ್ಧರಾಗುವುದು.

*ಸಂಪರ್ಕಿಸಬೇಕಾದ ವಿಳಾಸ:*

**ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**

ಶ್ರೀ ಗಣೇಶ್, ಟಿ.ಸಿ. 14/2036, ವಾನ್ ರೋಸ್ ಜಂಕ್ಷನ್, ತಿರುವನಂತಪುರ - 34

ದೂರವಾಣಿ 0471 - 2326603

ಇ- ಮೇಲ್: childrightscpcr@kerala.gov.in, rtecpcr@kerala.gov.in

ವೆಬ್ ಸೈಟ್ : www.kescpcrkerala.gov.in.

ಮಕ್ಕಳ ಸಹಾಯವಾಣಿ : 1098, ಅಪರಾಧ ನಿಯಂತ್ರಣ : 1090, ನಿರ್ಭಯ : 1800 425 1400

ಕೇರಳ ಪೋಲೀಸ್ ಸಹಾಯವಾಣಿ : 0471 - 3243000/44000/45000

*online **R.T.E Monitoring : www.nireekshana.org.in***